ಓದು, ಬರಹ ಬಲ್ಲವರ ಮಾಸಪತ್ರಿಕೆ

- ಲೈಂಗಿಕ ಶಿಕ್ಷಣ.... ಒಂದಷ್ಟು ಜಿಜ್ಞಾಸೆ
- ಹೆಣ್ಣು ಮತ್ತು ದೇಹ
- ಕಾಮ ಮತ್ತು ಶಾಸ್ತ್ರ
- ಆರೋಗ್ಯ ಮನಸ್ಸು
- ಹೋಮಿಯೋಪತಿ : ಪರಿಚಯ
- ಹಿಂದೂ, ಬೌದ್ಧ ಸಂಸ್ಕೃತಿಗಳಿಂದ ತೊಯ್ದದೇಶ
- ಶ್ರೀ ಅರವಿಂದರ 'ಸಮಗ್ರಯೋಗ'
- ಎಸ್.ಎಲ್. ಭೈರಪ್ಪನವರ 'ಆವರಣ'ದ ಅನಾವರಣ
- ಇತ್ತೀಚಿನ ಪುಸ್ತಕಗಳು

೧೧

ಜುಲೈ ೨೦೦೭

ಸಂಪಾದಕ
ಪುಸ್ತಕಮನೆ ಹರಿಹರಪ್ರಿಯ

ಪುಸ್ತಕಪ್ರೀತಿ

ಸಂಚಿಕೆ : ೧೧ ಓದು, ಬರಹ ಬಲ್ಲವರ ಮಾಸಪತ್ರಿಕೆ ಜುಲೈ ೨೦೦೭

ಒಳಪುಟಗಳಲ್ಲಿ....

ಎರಡನೇ ವರ್ಷದ ಚಂದಾದಾರರ ಗಮನಕ್ಕೆ

(ಸಂಚಿಕೆ 13 ರಿಂದ 24ರ ವರೆಗೆ)

ಹಳಬರಿಗೆ (ಆಗಸ್ಟ್ ಒಳಗೇ ಕಳಿಸಲು ಮನವಿ) ರೂ. 250/-
ಹೊಸಬರಿಗೆ (ಈವರೆಗಿನ 12 ಸಂಚಿಕೆಗಳನ್ನೂ ಸೇರಿಸಿ) ರೂ. 500/-
ಬೆಂಗಳೂರಿನ ಹೊರಗಿನವರು ಹಣವನ್ನು ಎಂ.ಓ./ಡಿ.ಡಿ.ಗಳಲ್ಲಿ ಮಾತ್ರ
'ಪುಸ್ತಕಮನೆ' ಹೆಸರಿಗೆ ಕಳಿಸಿಕೊಡಬೇಕಾಗಿ ವಿನಂತಿ

ಬಿಡಿ ಸಂಚಿಕೆ ರೂ. 25/-

ಪ್ರಕಾಶನ

ಪುಸ್ತಕಮನೆ

702, ಬಿ.ಸಿ.ಸಿ.ಹೆಚ್.ಎಸ್. ಲೇಔಟ್, ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು 560062
ಮೊಬೈಲ್ : 9845867184 / 9242221506
e-mail : hariharapriya@gmail.com pustakamane@yahoo.com

ಮುದ್ರಣ

ಇಳಾ ಮುದ್ರಣ, ನಂ. 36, 40 ಅಡಿ ರಸ್ತೆ, ರಾಘವನಗರ, ನ್ಯೂಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು 560 026. ದೂರವಾಣಿ : 32715773 / 26757159

೧

ಲೈಂಗಿಕ ಶಿಕ್ಷಣ....... ಒಂದಷ್ಟು ಜಿಜ್ಞಾಸೆ

ಪರಮೇಶ್ವರಯ್ಯ ಸೊಪ್ಪಿಮಠ

ಹಿಂದೆ ಶಿಕ್ಷಣ ಸರ್ವರ ಸ್ವತ್ತಾಗದೆ ಕೆಲವರಿಗೆ ಮಾತ್ರ ಮೀಸಲಾಗಿತ್ತು. ಅದಕ್ಕನುಗುಣವಾಗಿ ಇದರ ಬಗ್ಗೆ ಮಾತನಾಡುವವರ ಸಂಖ್ಯೆ ತೀರಾ ವಿರಳವಾಗಿತ್ತು. ಇಂದು ಶಿಕ್ಷಣ ಸಾರ್ವತ್ರೀಕರಣದ ಹಾದಿ ಹಿಡಿದಿರುವುದರಿಂದ ಎಲ್ಲರ ನಾಲಿಗೆಯಲ್ಲು ಈ ರಂಗದ ಆಗು ಹೋಗುಗಳು ನಲಿದಾಡುತ್ತಿವೆ. ಈ ಕ್ಷೇತ್ರವು ತನ್ನ ಬದಲಾವಣೆಗಳನ್ನು ಪರಿಸ್ಥಿತಿಗನುಗುಣವಾಗಿ ನಾಗಾಲೋಟದಲ್ಲಿ ಬದಲಾಯಿಸಿಕೊಳ್ಳುತ್ತಿದೆ. ಹಾಗಾಗಿ ಡಿ.ಪಿ.ಇ.ಪಿ., ಬಿಸಿ ಊಟ, ಕೇಳಿರಲಿ, ಚಿಣ್ಣರ ಅಂಗಳ, ತ್ರೈಮಾಸಿಕ ಪದ್ಧತಿ, ಪರೀಕ್ಷಾ ವಿಧಾನಗಳು, ಎಜುಸ್ಯಾಟ್ ಕೆ.ಎಸ್.ಕ್ಯೂ.ಎ.ಒ. ತರಬೇತಿಗಳು, ಎಸ್.ಎಸ್.ಎ....... ಮುಂತಾದ ನವನವೀನ ವಿಧಾನಗಳನ್ನು ಅಳವಡಿಸಿಕೊಳ್ಳುತ್ತ ಸನ್ನಿವೇಶಗಳಿಗೆ ತಕ್ಕಂತೆ ಸ್ಪಂದಿಸುತ್ತಾ ದಾಪುಗಾಲು ಹಾಕುತ್ತಿದೆ. ಈ ಬದಲಾವಣೆಗಳ ಪಟ್ಟಿಗೆ ಹೊಸದಾಗಿ ಸೇರ್ಪಡೆಯಾಗಬೇಕಿರುವುದೇ ಲೈಂಗಿಕ ಶಿಕ್ಷಣ. ಲೈಂಗಿಕತೆ ಜೀವನದಲ್ಲಿ ಆಕಸ್ಮಿಕವಲ್ಲ ಎಂಬ ಭಾವನೆಯೊಂದಿಗೆ ಇದು ಈ ರಂಗವನ್ನು ಪ್ರವೇಶಿಸಬೇಕಿದೆ.

ಇಂದು ಶಾಲಾ ಪಠ್ಯದಲ್ಲಿ ಲೈಂಗಿಕ ಶಿಕ್ಷಣದ ಅವಶ್ಯಕತೆ ಕುರಿತು ಬೇಕು, ಬೇಡ ಎಂಬ ಸಾಕಷ್ಟು ವಾದ-ವಿವಾದಗಳು ನಡೆಯುತ್ತಿವೆ. ಇದರ ಪರವಾಗಿ ಮಾತನಾಡುವ ಲೈಂಗಿಕ ತಜ್ಞರು, ವಿಚಾರವಾದಿ ಹಾಗು ಬುದ್ಧಿ ಜೀವಿಗಳು ಕಡ್ಡಾಯವಾಗಿ ಕಲಿಸಬೇಕು. ಇಲ್ಲದಿದ್ದರೆ ಮುಂದೆ ಬಾರಿ ಅನಾಹುತಗಳು ಸಂಭವಿಸಲಿವೆ ಎಂದು ಸಮರ್ಥಿಸುತ್ತಾರೆ. ಇದನ್ನು ವಿರೋಧಿಸುವ ಕೆಲವು ಸಂಪ್ರದಾಯವಾದಿಗಳು ಇದರ ಬಗ್ಗೆ ಮಡಿವಂತಿಕೆ ತೋರಿಸುತ್ತಾ ಹಾದಿ ತಪ್ಪಿಸುವ ಕ್ರಮವಾಗಿದೆ ಎಂದು ಆತಂಕ ಪಡುತ್ತಾ ಪಠ್ಯವಾಗಿ ಕಲಿಸುವ ಅಗತ್ಯವಿಲ್ಲ ಎಂದು ಅಭಿಪ್ರಾಯಿಸುತ್ತಾರೆ. ಈ ರೀತಿ ವಿಷಯ ಗೊಂದಲದ ಗೂಡಾಗಿ ಒಂದು ಸದಭಿಪ್ರಾಯಕ್ಕೆ ಬರಲು ನಮಗೆ ಸಾಧ್ಯವಾಗುತ್ತಿಲ್ಲ.

ದಿನದಲ್ಲಿ ಎಷ್ಟು ನಿದ್ರೆ ಮಾಡಬೇಕು, ಯಾವಾಗ ಮಾಡಬೇಕು, ನಿದ್ರಾಹೀನತೆಯಿಂದಾಗುವ ಪರಿಣಾಮಗಳೇನು, ಆರೋಗ್ಯಕ್ಕೆ ಉತ್ತಮ ಆಹಾರಗಳು ಯಾವುವು, ಏನು ಕುಡಿಯಬೇಕು, ಏನು ಕುಡಿಯಬಾರದು ಎಂದೆಲ್ಲ ಚರ್ಚಿಸಿ ವಿಚಾರ ವಿನಿಮಯಮಾಡಿಕೊಳ್ಳುವ ನಾವು ಹಸಿವೆ, ನಿದ್ರೆ, ನೀರಡಿಕೆಗಳಷ್ಟೆ ಸಹಜವಾದ ಲೈಂಗಿಕತೆ ಬಗ್ಗೆ ಏನು ಮಾತಾಡಬಾರದು ಎಂಬ ಭಾವನೆ ಅಚ್ಚರಿ ಮೂಡಿಸುವಂಥದ್ದು. ಇದರ ಬಗ್ಗೆ ನಮ್ಮಲ್ಲಿ ವಿಪರೀತ ಮಡಿವಂತಿಕೆ ಮನೆ ಮಾಡಿದೆ. ಈ ಮಡಿವಂತಿಕೆ ಎಂಬ ಪೊಳ್ಳುತನ ಮೊದಲು ದೂರಾಗಬೇಕಿದೆ. ಮುಕ್ತವಾಗಿ ಮಾತನಾಡುವ ವಾತಾವರಣ ಮೂಡಬೇಕಿದೆ.

ಲೈಂಗಿಕತೆ ಕುರಿತು ದೃಷ್ಟಿಕೋನ ಬದಲಾಗುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ ಮಕ್ಕಳಿಗೆ ಲೈಂಗಿಕ ಆರೋಗ್ಯ ಕುರಿತು ಅರಿವು ಮೂಡಿಸುವುದು ಅಗತ್ಯವಿದೆ. ಇಷ್ಟುದಿನ ಲೈಂಗಿಕ ಶಿಕ್ಷಣ ನೀಡದಿರುವುದರಿಂದ ಸರಿಯಾದ ತಿಳುವಳಿಕೆ ಇಲ್ಲದೆ ಕೆಲವರು ಜೀವನವನ್ನೇ ನರಕ ಮಾಡಿಕೊಂಡಿದ್ದಾರೆ. ಇದಕ್ಕಿರುವ ಏಕೈಕ ರಾಮಬಾಣವೆಂದರೆ ಲೈಂಗಿಕ ಶಿಕ್ಷಣ. ವ್ಯಕ್ತಿಯ ಆಮೂಲಾಗ್ರ ಬದಲಾವಣೆಯಲ್ಲಿ ಲೈಂಗಿಕ ಶಿಕ್ಷಣ ಪ್ರಾಮುಖ್ಯ ಪಾತ್ರ ವಹಿಸುತ್ತದೆ.

ಭಾರತೀಯ ಆಧ್ಯಾತ್ಮಿಕ ಚರಿತ್ರೆಯಲ್ಲಿ ಕಾಮಕ್ಕೆ ವಿಶೇಷ ಮನ್ನಣೆ ಇದೆ. ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಕಾಮ ಒಂದು ಗುಣಾತ್ಮಕ ಸಂಗತಿಯಾಗಿದೆ. ದೇವಾಲಯ ಗೋಪುರಗಳ ಮೇಲೆ ನಿರ್ಭಿಡೆಯಿಂದ ಲೈಂಗಿಕ ಮಿಥುನ ಶಿಲ್ಪಗಳನ್ನು ನಿರ್ಮಿಸಿದರು. ಲೈಂಗಿಕ ಶಿಕ್ಷಣವನ್ನು ಇಂದು ಋಣಾತ್ಮಕ ದೃಷ್ಟಿಯಿಂದ ನೋಡಬೇಕಾದ ಪ್ರಮೇಯವೇ ಇಲ್ಲ.

ಮನೋಲೈಂಗಿಕ ಭಾವನೆಗಳನ್ನು ನಿಗ್ರಹಿಸುವುದು ಬಹಳ ಕಷ್ಟ. ಲೈಂಗಿಕ ಅಂಗಗಳ ರಚನೆಯ ಬಗ್ಗೆ ಹಾಗೂ ಶಿಕ್ಷಣದ ಬಗ್ಗೆ ಅರಿವಿದ್ದರೆ ಮಾತ್ರ ನಿಗ್ರಹಿಸಬಹುದು. ಈ ವಿಷಯವಾಗಿ ಶಿಕ್ಷಣ ನೀಡಿದರೆ

ಅವರಿಗೆ ಜ್ಞಾನ ಹೆಚ್ಚು ತೊಂದರೆ ಮಾಡಿಕೊಳ್ಳುವುದು ಕಡಿಮೆಯಾಗುತ್ತದೆ. ಇದರ ಬಗ್ಗೆ ಮುಕ್ತವಾದ ವಾತಾವರಣ ನಿರ್ಮಿಸುವುದರಿಂದ ಮುಂದಾಗುವ ಅನಾಹುತ ಈಗಲೇ ತಪ್ಪಿಸಬಹುದು.

ಒಂದು ಕಾಲದಲ್ಲಿ ಹರೆಯದವರು ಇನ್ನು ಪ್ರೇಮದ ಮೊದಲ ಪಾಠ ಕಲಿಯುವುದರಲ್ಲಿದ್ದರು. ಆದರೆ ಇಂದು ಹಾಗಿಲ್ಲ. ನಮ್ಮ ಸುತ್ತಮುತ್ತಲ ದೂರದರ್ಶನ, ಚಲನಚಿತ್ರ, ಪತ್ರಿಕೆ, ಹಾಡು, ವಿಡಿಯೋ, ಆಲ್ಬಂ, ಇಂಟರ್‌ನೆಟ್‌ಗಳ ಹಾವಳಿಯಲ್ಲಿ ಬೇಕೋ ಬೇಡವೋ ಅಂತೂ ಸೆಕ್ಸ್ ಪಾಠ ಆಕರ್ಶಿಸುತ್ತಿದೆ. ಈ ಎಲ್ಲದರಲ್ಲೂ ಪ್ರಧಾನವಾಗಿರುವ ಅಂಶ ಕಾಮುಕತೆ ಎಂಬುದು ಪ್ರತಿಫಲಿಸುತ್ತದೆ.

ನಮ್ಮ ಎಷ್ಟೋ ಹುಡುಗ-ಹುಡುಗಿಯರು ಪ್ರಣಯ ಸಂಬಂಧ ಮುರಿದು ಬೀಳಲು ಲೈಂಗಿಕತೆಯೇ ಕಾರಣ. ಅದಕ್ಕಾಗಿ ಹಲವರು ತಮ್ಮ ಸಂಬಂಧ ಕಳೆದುಕೊಳ್ಳಲು ಇಷ್ಟ ಪಡದೆ ಒತ್ತಾಯಕ್ಕೆ ಮಣಿಯುತ್ತಾರೆ. ಈ ರೀತಿ ಹರೆಯದವರಲ್ಲಿ ಮದುವೆ ಮುಂಚೆ ದೈಹಿಕ ಸಂಬಂಧ ಹೆಚ್ಚಾಗುತ್ತಿವೆ. ಅವರಲ್ಲಿ ಪಾಪ ಪ್ರಜ್ಞೆಯೇನು ಕಾಡದೆ ಅದನ್ನು ತಮ್ಮ ಬದುಕಿನ ಅಂಗವಾಗಿ ಪರಿಗಣಿಸುತ್ತಿದ್ದಾರೆ. ಈ ರೀತಿ ಯುವ ಜನಾಂಗ ಒಂದೆಡೆ ಮನೆಯೊಳಗೆ ಲಕ್ಷಣವಾಗಿ ಎಲ್ಲ ಸಂಪ್ರದಾಯಗಳಿಗೆ ಭಾಗಿಯಾಗುತ್ತಲೇ ಹೊರಗೆ ಆಧುನಿಕ ಜಗತ್ತಿಗೆ ಸರಿಸಮಾನ ಹೆಜ್ಜೆಹಾಕುತ್ತಾ ದ್ವಂದ್ವದಲ್ಲಿ ಸಿಕ್ಕಿ ತೊಳಲಾಡುತ್ತಿದ್ದಾರೆ.

ಯೌವನಾವಸ್ಥೆಗೆ ಬರುವ ಸಂದರ್ಭದಲ್ಲಿ ಹೆಣ್ಣು ಮತ್ತು ಗಂಡಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಸಾಕಷ್ಟು ಬದಲಾವಣೆಗಳಾಗುತ್ತವೆ. ಈ ಹಂತದಲ್ಲಿ ಹದಿಹರೆಯದವರಿಗೆ ದೇಹ ರಚನೆ ಬಗ್ಗೆ ಹಾಗೂ ಅವುಗಳ ಕಾರ್ಯ ವಿಧಾನ ಬಗ್ಗೆ ತಿಳುವಳಿಕೆ ಮೂಡಿಸಬೇಕು. ವ್ಯಕ್ತಿ ಬೆಳವಣಿಗೆಗೆ ತನ್ನ ದೈಹಿಕ - ಮಾನಸಿಕ ಸ್ತರಗಳ ಜ್ಞಾನವನ್ನು ಆಧರಿಸಿದೆ. ಈ ಸಮಯಗಳಲ್ಲಿ ಪೋಷಕರು, ಶಿಕ್ಷಕರು ಲೈಂಗಿಕತೆ ಮತ್ತು ಪರಸ್ಪರ ಸಂಬಂಧಗಳ ಬಗ್ಗೆ ಮಾಹಿತಿ ಒದಗಿಸಬೇಕು. ನಂತರದಲ್ಲಿ ಮದುವೆ ಮಕ್ಕಳನ್ನು ಹೇರಲು ಸಿದ್ಧರಾಗುವ ಬಗ್ಗೆ ಅರಿವು ಮೂಡಿಸಬೇಕಿದೆ.

ಯುವ ಜನತೆಗೆ ಲೈಂಗಿಕತೆ ಬಗ್ಗೆ ಇರುವ ಪ್ರಶ್ನೆಗಳು, ಸಂಶಯಗಳು ಹಾಗೇ ಉಳಿದಿವೆ. ಇದರಿಂದ ಲೈಂಗಿಕ ಅಜ್ಞಾನ, ಕೀಳರಿಮೆ, ಲೈಂಗಿಕತೆಯ ಬಗ್ಗೆ ಅಪರಾಧಿ ಭಾವ ಇಂದಿನ ಯುವ ಜನಾಂಗವನ್ನು ಕಾಡುತ್ತಿದೆ. ಇನ್ನು ಹೆಣ್ಣುಮಕ್ಕಳನ್ನು ಕತ್ತಲೆ ಕೋಣೆಯಲ್ಲಿ ಬಂಧಿಸಿಟ್ಟಿದ್ದೇವೆ. ಹಿಂದಿನಿಂದಲು ನಾವು ನಮ್ಮ ಹೆಣ್ಣುಮಕ್ಕಳಿಗೆ ಶರೀರದ ಬಗ್ಗೆ, ಶೀಲದ ಬಗ್ಗೆ ಹೇಳುತ್ತಾ ಅವರಿಗೆ ಮಾತ್ರ ಶೀಲ, ಮರ್ಯಾದೆ, ಕಳಂಕ ಎಂಬುದನ್ನು ತಲೆ ತುಂಬಿದ್ದೇವೆ. ಈಗಲಾದರು ಅವರು ತಮ್ಮ ದೇಹದ ಬಗ್ಗೆ, ಬದುಕಿನ ಬಗ್ಗೆ ತಾವೇ ನಿರ್ಣಯ ಕೈಗೊಳ್ಳುವ ಅವಕಾಶ, ಸ್ವಾತಂತ್ರ್ಯ ಒದಗಿಸುವ ಅಗತ್ಯವಿದೆ.

ಇಂದಿನ ಯಾಂತ್ರಿಕ ಜೀವನದ ಗೊಂದಲದಲ್ಲಿ ಮುಳುಗಿರುವ ಮತ್ತು ವಿಭಕ್ತ ಕುಟುಂಬಗಳೇ ಹೆಚ್ಚಿರುವ ತಂದೆ-ತಾಯಿಯರಿಗೆ ಮಕ್ಕಳೊಡನೆ ಬೆರೆತು ಮಾತನಾಡುವ ವ್ಯವಧಾನ, ತಾಳ್ಮೆ, ಸಮಯವಿಲ್ಲದಂತಾಗಿದೆ. ಮಕ್ಕಳಿಗೆ ಹೇಳಬೇಕೆಂದಿರುವುದನ್ನು ಹೇಳಲು ಆಗದೆ ಅವರು ಪರಿತಪಿಸುತ್ತಿದ್ದಾರೆ. ಮಕ್ಕಳು ಸರಿಯಾದ ಮಾಹಿತಿಯಿಂದ ವಂಚಿತರಾಗಿ ಕದ್ದು ಮುಚ್ಚಿ ಅನೈತಿಕ ಲೈಂಗಿಕ ಶಿಕ್ಷಣ ಪಡೆದು ಸಫೀಲಿಸ್, ಗೊನೊರಿಯ, ಏಡ್ಸ್‌ನಂತಹ ಭಯಾನಕ ರೋಗಗಳಿಗೆ ಬಲಿಯಾಗುತ್ತಾರೆ.

ಲೈಂಗಿಕ ರೋಗಗಳನ್ನು ತಡೆಗಟ್ಟಬೇಕಾದರೆ ಮೊದಲು ವಿದ್ಯಾರ್ಥಿಗಳು ಹಾಗೂ ಯುವ ಜನಾಂಗದಲ್ಲಿ ಪ್ರಜ್ಞೆ ಬೆಳೆಸಬೇಕಿದೆ. ಹದಿ-ಹರೆಯದಲ್ಲಿ, ವೃದ್ಧಾಪ್ಯದಲ್ಲಿ ಲೈಂಗಿಕ ಆರೋಗ್ಯ, ಮುಕ್ತ ಹಾಗೂ ಸುರಕ್ಷಿತ ಲೈಂಗಿಕತೆ, ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಬರುವ ರೋಗಗಳು, ಹೆಚ್.ಐ.ವಿ. ಸಲಹೆ - ಸಮಾಲೋಚನೆ, ಪರ್ಯಾಯ ಲೈಂಗಿಕತೆ ಮೊದಲಾದ ವಿಷಯಗಳ ಬಗ್ಗೆ ಇಂದಿನ ಪಠ್ಯಕ್ರಮದಲ್ಲಿ ಅಳವಡಿಸುವುದು ಅತ್ಯಗತ್ಯವಾಗಿದೆ.

ಈ ಎಲ್ಲಾ ಅಂಶಗಳಿಗೆ ವ್ಯತಿರಿಕ್ತವಾಗಿ ಹೇಳುವ ಸನಾತನವಾದಿಗಳು ನಮ್ಮ ದೇವಾಲಯಗಳ ಲೈಂಗಿಕ ಶಿಲ್ಪಗಳೇ ಶಿಕ್ಷಣ ನೀಡುತ್ತವೆ. ಲೈಂಗಿಕತೆ ಎಂಬುದು ಕತ್ತಲೆ ಕೋಣೆಗೆ ಸೀಮಿತವಾದ್ದು. ಬಹಿರಂಗವಾಗಿ ಚರ್ಚಿಸುವ ವಿಷಯವೇ ಅಲ್ಲ. ಹೀಗೆ ಚರ್ಚಿಸುವುದು ಅಸಹ್ಯ. ಲೈಂಗಿಕ ಶಿಕ್ಷಣ ಕೊಡುವುದು ಮಂಗನ ಕೈಗೆ ಮಾಣಿಕ್ಯ ಕೊಟ್ಟಂತಾಗುತ್ತದೆ. ಹದಿಹರೆಯಕ್ಕೆ ಬರುವ ವೇಳೆಗೆ ಹೆಚ್ಚಿನವರಿಗೆ ಅರಿವಿನಿಂದ ಇದರ ಬಗ್ಗೆ ಅಗತ್ಯ ಜ್ಞಾನ ಉಂಟಾಗಿರುತ್ತದೆ. ಮನೆಯಲ್ಲಿ ಹಿರಿಯರು ಇದನ್ನು ಪರೋಕ್ಷವಾಗಿ ಕಿರಿಯರಿಗೆ ಕಲಿಸುತ್ತಾರೆ.

ಇಂದಿನ ಮಾಧ್ಯಮಗಳಂತು ಅಗತ್ಯಕ್ಕಿಂತ ಹೆಚ್ಚಿನ ಮಾಹಿತಿಯನ್ನು ಈಗಾಗಲೆ ನೀಡುತ್ತಿವೆ. ನಮ್ಮಲ್ಲಿ ಲೈಂಗಿಕ ಮಡಿವಂತಿಕೆ ಎಲ್ಲಿದೆ? ದೇಶದ ಜನಸಂಖ್ಯೆಯಿಂದಲೆ ಇದಕ್ಕೆ ಉತ್ತರ ಸಿಗುತ್ತದೆ. ಇದೆಲ್ಲ ಲೈಂಗಿಕ ಶಿಕ್ಷಣದಿಂದಲೆ ಬಂದಿದ್ದೆ? ಹಾಗಾಗಿ ಇದನ್ನು ಪಠ್ಯವಾಗಿ ಅಳವಡಿಸುವುದು ಸಲ್ಲ ಎಂದು ತಮ್ಮ ವಾದ ಮುಂದಿಡುತ್ತಾರೆ.

ಆದರೆ ವಿರೋಧವೇನೆ ಇದ್ದರು ಇಡೀ ಮನುಕುಲದ ಅಸ್ತಿತ್ವವೇ ಲೈಂಗಿಕ ಚಟುವಟಿಕೆ ಮೇಲೆ ನಿಂತಿರುವಾಗ ಲೈಂಗಿಕತೆಯ ಬಗ್ಗೆ ಆರೋಗ್ಯಪೂರ್ಣ ಅರಿವು ಅಗತ್ಯ. ಹೀಗಿರುವಾಗ ನಾವು ಇನ್ನು ಲೈಂಗಿಕ ಶಿಕ್ಷಣ ನೀಡಬೇಕೆ? ಬೇಡವೇ? ಎಂಬ ಪ್ರಶ್ನೆಯನ್ನು ಕೇಳುತ್ತಾ ಕುಳಿತಿರುವುದು ವಿಪರ್ಯಾಸ.

ಲೈಂಗಿಕತೆ ಕುರಿತು ಮಾಹಿತಿ ನೀಡುವುದು ಉತ್ತಮ ಎಂದಾರೆ ತಕ್ಷಣ ನಮ್ಮಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಲೈಂಗಿಕತೆ ಎಂದರೇನು? ಅಶ್ಲೀಲತೆ ಎಂದರೇನು? ಸುರಕ್ಷಿತ ಲೈಂಗಿಕತೆ ಎಂದರೇನು? ಲೈಂಗಿಕ ಶಿಕ್ಷಣ ಎಂದರೇನು? ಎಷ್ಟನೇ ತರಗತಿಯಿಂದ ಎಷ್ಟು ಸಮಯ ಈ ಶಿಕ್ಷಣ ನೀಡಬೇಕು? ಮುಕ್ತ ಲೈಂಗಿಕತೆ ಎಂದರೆ ಪಾಶ್ಚಾತ್ಯ ಲೈಂಗಿಕ ಶಿಕ್ಷಣ ನಮಗೆ ಮಾದರಿಯೇ? ಈ ತರಹದ ಹಲವಾರು ಪ್ರಶ್ನೆಗಳು ಮನದಲ್ಲಿ ಮೂಡುತ್ತವೆ. ಮೊದಲ ಇವಕ್ಕೆ ನಿರ್ದಿಷ್ಟ ಉತ್ತರಗಳನ್ನು ಕಂಡುಕೊಳ್ಳಬೇಕಿದೆ.

ಈ ಶಿಕ್ಷಣವನ್ನು ಯಾರು ನೀಡಬೇಕು? ಎಲ್ಲರು ಶಿಕ್ಷಕರು ವಿದ್ಯಾರ್ಥಿಗಳಿಗೆ ತಿಳಿಸಬೇಕು ಎನ್ನುತ್ತಾರೆ. ಶಿಕ್ಷಕರು ಹೆಣ್ಣುಮಕ್ಕಳಿಗೆ ಬೋಧಿಸುವಾಗ ಮುಜುಗರ ಎನಿಸುವುದಿಲ್ಲವೆ? ಇದಕ್ಕೆ ಸರಕಾರ ಪ್ರತಿ ಶಾಲೆಯಲ್ಲಿ ಒಬ್ಬ ಶಿಕ್ಷಕಿಯನ್ನು ಕಡ್ಡಾಯವಾಗಿ ನೇಮಿಸಬೇಕು. ಅವರು ಆಧುನಿಕತೆಗೆ ತಕ್ಕಂತೆ ಗ್ರಾಮೀಣ ಹೆಣ್ಣು ಮಕ್ಕಳಿಗೆ ಮಾಹಿತಿಯನ್ನು ಒದಗಿಸಬೇಕು. ಹೆಣ್ಣುಮಕ್ಕಳಿಗೆ ಶಿಕ್ಷಕಿಯರು, ಗಂಡುಮಕ್ಕಳಿಗೆ ಶಿಕ್ಷಕರು ತಿಳಿಸಿದರೆ ಒಳ್ಳೆಯದು. ಇದಕ್ಕಾಗಿ ೧೫ ದಿನಕ್ಕೊಮ್ಮೆ ಬೇರೆ ಬೇರೆಯಾಗಿ ಅವಧಿಗಳನ್ನು ತೆಗೆದುಕೊಂಡು ಮಕ್ಕಳಿಗೆ ವಿಷಯ ಮನನ ಮಾಡಿಸಿ ಮುಕ್ತವಾತಾವರಣ ನಿರ್ಮಿಸಿದರೆ ಅವರು ಭಾವೀ ಜೀವನ ಹೇಗಿರಬೇಕೆಂದು ಮನದಟ್ಟು ಮಾಡಿಕೊಳ್ಳುತ್ತಾರೆ. ಜೊತೆಗೆ ಲೈಂಗಿಕ ಸ್ವಾತಂತ್ರ್ಯ ತರುವ ಇತರ ಹೊಣೆಗಾರಿಕೆಗಳ ಬಗ್ಗೆ ಎಚ್ಚರ ಮೂಡಿಸುತ್ತಾ ನೈತಿಕ ಶಿಕ್ಷಣವನ್ನು ಅಷ್ಟೆ ಒತ್ತು ಕೊಟ್ಟು ನೀಡಬೇಕು. ಶಿಕ್ಷಕರಿಗೆ ಹೊರೆಯಾಗುವುದಾದರೆ ಯಾವುದಾದರು ಎನ್.ಜಿ.ಓ.ಗೆ ಇದರ ಜವಾಬ್ದಾರಿ ವಹಿಸಿ ಮಕ್ಕಳಲ್ಲಿ ಜ್ಞಾನ ಬೆಳೆಸಬಹುದು.

ಆದಷ್ಟು ಬೇಗನೆ ನಮ್ಮ ಶಿಕ್ಷಣ ಪದ್ಧತಿಯಲ್ಲಿ ಲೈಂಗಿಕ ಶಿಕ್ಷಣವನ್ನು ಅಳವಡಿಸಬೇಕು. ನಮ್ಮ ಪೋಷಕರ ಮಡಿ ಮಡಿಬೇಕು. ಯುವ ಜನತೆ ಮುಂದಡಿ ಇಡಬೇಕು. ನೇರ–ಸರಳ–ಆಕರ್ಷಕ ಪಠ್ಯಕ್ರಮ ಸಿದ್ಧವಾಗಬೇಕು. ಶಿಕ್ಷಕರು ಗಟ್ಟಿಯಾಗಿ ನಿಲ್ಲಬೇಕು. ಇಲಾಖೆ ಆಸಕ್ತಿ ವಹಿಸಬೇಕು. ಹಾಗಾದಲ್ಲಿ ಮಾತ್ರ ನಮ್ಮ ಅನೇಕ ಗೊಂದಲಗಳಿಗೆ ಸ್ಪಷ್ಟ ಉತ್ತರ ಸಿಗಲಿದೆ.

❑

ಶಿಕ್ಷಕರು, ಕೆ.ಪಿ.ಓ.ಆರ್. ಕಾಲೋನಿ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ೫೮೩ ೨೧೨

೨

ಹೆಣ್ಣು ಮತ್ತು ದೇಹ

ವಿಜಯ ಸುಬ್ಬರಾಜ್

ದಾಸರು "ಮಣ್ಣಿಂದ ಕಾಯ ಮಣ್ಣಿಂದ । ಮಣ್ಣು ಬಿಟ್ಟವರಿಗೆ ಆಧಾರವೆ ಇಲ್ಲ" ಎಂದಿರುವುದು ಎಲ್ಲರಿಗೂ ತಿಳಿದದ್ದೇ. ಆದರೆ ಕಾಲಕ್ಕೆ ತಕ್ಕಂತೆ ಇಂದು ಅದನ್ನು "ಹೆಣ್ಣಿಂದ ಕಾಯ ಹೆಣ್ಣಿಂದ । ಹೆಣ್ಣು ಬಿಟ್ಟವರಿಗೆ ಆಧಾರವೇ ಇಲ್ಲ" – ಎಂದು ಬದಲಿಸಿದರೆ ಅತಿಶಯೋಕ್ತಿಯಾಗಲಾರದು. ನಮ್ಮ ಸನಾತನ ಸಂಸ್ಕೃತಿಯಲ್ಲಿ, ಧಾರ್ಮಿಕ ನಂಬಿಕೆಗಳಲ್ಲಿ ಹೆಣ್ಣನ್ನು ಆದಿಶಕ್ತಿ, ಪರಾಶಕ್ತಿ, ಪ್ರಚಂಡ ಶಕ್ತಿ, ದುರ್ಗಿ, ಕಾಳಿ ಇತ್ಯಾದಿ ಇತ್ಯಾದಿ ಹತ್ತಾರು ವಿಶೇಷಣಗಳು, ರೂಪಕ ಮುಂತಾದವುಗಳಿಂದ ವೈಭವೀಕರಿಸಿ ವರ್ಣಿಸಿರುವುದನ್ನು

ನಿಜವಾಗಿಯೂ ಹೆಣ್ಣು ಇವತ್ತಿನ ದಿನಗಳಲ್ಲಿ ಎಷ್ಟೊಂದು ವ್ಯಾಪಕಶಕ್ತಿಯಾಗಿ ಎಲ್ಲ ರಂಗಗಳನ್ನೂ, ಆಕ್ರಮಿಸಿ ಕೊಂಡಿರುವುದನ್ನು ನೋಡಿದರೆ, ಹೆಣ್ಣಿನ ಅದ್ಭುತ ಸುಪ್ತಶಕ್ತಿ, ಯಾರಿಗಾದರೂ ಅರಿವಾಗದೆ ಇರದು.

ಅನಾದಿಕಾಲದಿಂದಲೂ ಹೆಣ್ಣು ಮತ್ತು ಹೆಣ್ಣಿನ ದೇಹ ಹತ್ತು ಹಲವಾರು ಬಗೆಯಲ್ಲಿ ಬಳಕೆ ದುರ್ಬಳಕೆಯಾಗುತ್ತಲೇ ಇದೆ. ಇಡೀ ಸೃಷ್ಟಿಯಲ್ಲಿ ಹೆಣ್ಣಿನ ದೇಹದ ಆಕರ್ಷಣೆ ಅನುಪಮವಾದ್ದು ; ಅನನ್ಯವಾದ್ದು. ದೇವತೆಗಳು, ರಾಕ್ಷಸರು–ಪುರುಷರು–ಎಲ್ಲ ವರ್ಗದವರು ಹೆಣ್ಣಿನ ದೇಹ ಸೌಂದರ್ಯಕ್ಕೆ ಮರುಳಾಗಿ ಅನೇಕ ಬಗೆಯ ಸಮಸ್ಯೆಗಳಲ್ಲಿ, ಸೋಲುಗಳಲ್ಲಿ, ಸಾವಿನ ದುರಂತಗಳಲ್ಲಿ ಸಿಲುಕಿಕೊಂಡಿರುವುದಕ್ಕೆ ನಮ್ಮ ಪುರಾಣ, ಇತಿಹಾಸ, ವಾಸ್ತವ ಸಂದರ್ಭಗಳೇ ಸಾಕ್ಷಿಯಾಗಿವೆ. ವಿನಾಶ, ವಿಕಾಸಗಳೆರಡಕ್ಕೂ ಹೆಣ್ಣೇ ಮೂಲ. ಆಕೆಯ ದೇಹದಾಕರ್ಷಣೆಯ ಮಾಂತ್ರಿಕ ಸೆಳೆತಕ್ಕೆ ಸಿಲುಕದ ಪಾಪಿಯೇ ಇಲ್ಲವೆಂದರೂ ನಂಬಬೇಕಾಗುತ್ತದೆ. ವಿಶ್ವಾಮಿತ್ರನಂತಹ ಮಹಾತಪಸ್ವಿಗಳೇ ನೂರಾರು ಸಂಖ್ಯೆಯಲ್ಲಿ ವರ್ಷಾನುಗಟ್ಟಲೆ ಸ್ವರ್ಗಕಾಮ್ಯರಾಗಿ ಮಾಡಿದ ಮಹಾತಪಸ್ಸನ್ನು ಅಪ್ಸರೆಯರ ಸೌಂದರ್ಯದ ಕ್ಷಣದ ಆಕರ್ಷಣೆಗೆ ಚೆಲ್ಲಿಕೊಟ್ಟಿರುವಾಗ ಸಾಮಾನ್ಯ ಮನುಷ್ಯರ ಪಾಡೇನು ?

ಹಿಂದೆ ಯುದ್ಧಗಳಲ್ಲಿ ಗೆಲುವನ್ನು ಪಡೆಯಲು ಹೆಣ್ಣುಗಳನ್ನು; ಆಮಿಷವಾಗಿ, ವಿಷಕನ್ಯೆಯರಾಗಿ ರೂಪಿಸಿ ಶತ್ರು ಪಾಳೆಯದೊಳಕ್ಕೆ ಬಿಡುತ್ತಿದ್ದರು. ಹೆಣ್ಣಿನ ದೇಹ ಸಂಪರ್ಕಕ್ಕೆ ಬಂದು, ಕೇವಲ ಒಂದು ಚುಂಬನ ಶತ್ರುರಾಜರಿಗೆ ಸಾವಾಗಿ ಪರಿಣಮಿಸುತ್ತಿತ್ತು.

ಹೆಣ್ಣಿಗಾಗಿ ಯುದ್ಧಗಳು ನಡೆದು ಸಾಮ್ರಾಜ್ಯಗಳೇ ನಾಶವಾಗಿ ಹೋಗಿರುವುದನ್ನು ವಿಶ್ವದ ಇತಿಹಾಸವೇ ಸಾರುತ್ತವೆ.

ಹೀಗಿರುವಾಗ ನಮ್ಮ ಇಂದಿನ ಸಮಕಾಲೀನ ಬದುಕಿನಲ್ಲಿ, ಸ್ತ್ರೀ ಸ್ವಾತಂತ್ರ್ಯ, ಸ್ತ್ರೀ ಮೀಸಲಾತಿ, ಸ್ತ್ರೀ ಸುಧಾರಣೆ ಇತ್ಯಾದಿ ಅಬ್ಬರದ ಘೋಷಣೆಗಳ ನಡುವೆ ಹೆಣ್ಣಿನ ಚಲಾವಣೆ ಹೇಗಾಗುತ್ತಿದೆ ಎನ್ನುವುದು ಒಂದು ಕುತೂಲಹದ ವಿಷಯವಾಗಿದೆ. ಇಂದು ಸಾರ್ವಜನಿಕ ರಂಗದಲ್ಲಿ, ಮಾರುಕಟ್ಟೆಯಲ್ಲಿ, ಮಾಧ್ಯಮಗಳಲ್ಲಿ ಮತ್ತು ಮನೆಗಳಲ್ಲಿ ಹೆಣ್ಣು ಹೇಗೆ ಕಾಣಿಸಿಕೊಳ್ಳುತ್ತಿದ್ದಾಳೆ ಎಂದು ವಿಚಾರಮಾಡುವುದು ಒಂದು ತುರ್ತಿನ ಸಂಗತಿಯಾಗಿದೆ. ಬದುಕಿನ ಎಲ್ಲ ರಂಗಗಳೂ ವ್ಯಾಪಾರೀಕರಣಕ್ಕೆ ಒಳಗಾಗುತ್ತಿರುವಂತೆ ಹೆಣ್ಣಿನ ದೇಹವೂ ವ್ಯಾಪಾರೀಕರಣಕ್ಕೆ ತುತ್ತಾಗಿದೆ. ಲಾಭ ಗಳಿಕೆಯ ಹಿನ್ನೆಲೆಯಲ್ಲಿ ನಡೆಯುವ ಪ್ರಚಾರ ಸಾಧನೆಗಳಲ್ಲಿ ಹೆಣ್ಣಿನದು ಬಹುಮುಖ್ಯ ಪಾತ್ರವಾಗಿದೆ.

ಹಿಂದಿನ ಕಾಲದಲ್ಲಿ ಹೆಣ್ಣನ್ನು ತಮ್ಮ ಕಾವ್ಯಗಳಲ್ಲಿ ವರ್ಣಿಸುವಾಗ ಕೆಲವರು ರಸಿಕ ಕವಿಗಳು, ಶೃಂಗಾರ ಕವಿಗಳು ಆಕೆಯನ್ನು ನಖಶಿಖಾಂತ ವರ್ಣಿಸುವ ಪರಿಪಾಠವಿತ್ತು. ಆಕೆಯ ಯೌವ್ವನಾವಸ್ಥೆಯನ್ನು, ಗರ್ಭಾವಸ್ಥೆಯನ್ನು ವರ್ಣಿಸುವಾಗ ದೇಹಭಾಗಗಳಲ್ಲಿ, ಅಂಗಾಂಗಗಳಲ್ಲಿ ಕಾಣಿಸಿಕೊಳ್ಳುವ ಸೂಕ್ಷ್ಮಾತಿ ಸೂಕ್ಷ್ಮ ವ್ಯತ್ಯಾಸಗಳನ್ನು ಅಶ್ಲೀಲವೆನ್ನಿಸದ ರೀತಿಯಲ್ಲಿ ಉಪಮೆ ರೂಪಕಗಳ ಮೂಲಕ ಅತ್ಯಂತ ರೋಚಕವೂ ರೋಮಾಂಚಕಾರಿಯೂ ಆದ ರೀತಿಯಲ್ಲಿ ವರ್ಣಿಸುತ್ತಿದ್ದರು. ಕಾವ್ಯಾಧ್ಯಯನ, ಅನುಸಂಧಾನ ಒಂದು ಖಾಸಗಿ ಕ್ರಿಯೆ. ಒಬ್ಬರ ತನ್ಮಯತೆಯೊಳಗೇ ಉಳಿಯುತ್ತದೆ. ಆದರೆ ಇವತ್ತಿನ ಹೆಣ್ಣು ಸಮೂಹ ಮಾಧ್ಯಮಗಳಲ್ಲಿ ಏಕಕಾಲಕ್ಕೆ ಇಡೀ ಜಗತ್ತಿಗೇ ಕಾಣಿಸಿಕೊಳ್ಳುವ ಸಾಧ್ಯತೆಗಳಿರುವಾಗ, ಜಾಹಿರಾತುಗಳಲ್ಲಿ ಹೆಣ್ಣು ತನ್ನ ದೇಹವನ್ನು ಯಾವ ಪ್ರಮಾಣದಲ್ಲಿ ಬಹಿರಂಗಗೊಳಿಸಿಕೊಳ್ಳಬೇಕು ಎನ್ನುವ ವಿವೇಚನೆಯೂ ಇಲ್ಲದಂತೆ, ಪ್ರಗತಿ ಅಭಿವೃದ್ಧಿ ಹೆಸರಿನಲ್ಲಿ ನಿರಾಳವಾಗಿ, ನಿಸ್ಸಂಕೋಚವಾಗಿ ಒಡ್ಡಿಕೊಳ್ಳುತ್ತಿದ್ದಾಳೆ. ಪುರುಷರ ಮನರಂಜಿಸಲು ಕ್ಲಬ್ಬುಗಳಲ್ಲಿ, ಕೋಟ್ಯಂತರ ರೂಪಾಯಿಗಳನ್ನು ಗಳಿಸಿಕೊಡುವ ದೊಡ್ಡ ಉದ್ಯಮವಾಗಿ ರೂಪಾಂತರಿಸುವ ಸೌಂದರ್ಯ ಸ್ಪರ್ಧೆಗಳಲ್ಲಿ, ಕಡೆಗೆ, ಮತ ಗಳಿಕೆಯ ಹುನ್ನಾರದ ಹಿನ್ನೆಲೆಯಲ್ಲಿ ಜನಾಕರ್ಷಣೆಗಾಗಿ ಪ್ರಚಾರ ಕಾರ್ಯಗಳಲ್ಲಿ, ಅತ್ಯಂತ ಪ್ರಭಾವಶಾಲಿಯಾದ ಚಲನಚಿತ್ರಗಳಲ್ಲಿ ಹೆಣ್ಣನ್ನು ಹಲವಾರು ಅವತಾರಗಳಲ್ಲಿ, ವಿಭಿನ್ನ ಪ್ರಮಾಣದ ನಗ್ನತೆಯಲ್ಲಿ ಕಾಣಿಸಲಾಗುತ್ತಿದೆ. ದೇಹ ಪ್ರದರ್ಶನಕ್ಕೆ ಇತಿಮಿತಿಯಿಲ್ಲದಂತಾಗಿದೆ.

ಯಾವುದೇ ಕಾರ್ಯರಂಗದಲ್ಲಿ, ಕೆಲವು ಅಪವಾದಗಳೊಂದಿಗೆ ಹೆಣ್ಣು ಯಶಸ್ಸಿನ ಹಂತವನ್ನು ತಲುಪಲು ಅನೇಕಸಲ ತನ್ನ ದೇಹ ಮತ್ತು ಶೀಲದೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಗುತ್ತದೆ. ಹೆಣ್ಣಿನ ಎತ್ತರ, ಗಾತ್ರ, ಸುತ್ತಳತೆ, ಅಂಕು ಡೊಂಕು, ಬಣ್ಣ ಬಳಕು ಎಲ್ಲಕ್ಕೂ ಬೆಲೆಯಿದೆ. ಜಾಹಿರಾತು ಜಗತ್ತಿನಲ್ಲಿ ಮತ್ತು ರೂಪದರ್ಶಿಗಳಾಗಿ ಫ್ಯಾಷನ್ ಜಗತ್ತಿನಲ್ಲಿ ಹೆಣ್ಣಿಗೆ ವಿಪರೀತ ಬೇಡಿಕೆಯಿದೆ. ಇಂದಿನ ಯುವತಿಯರು ಈ

ಕ್ಷೇತ್ರಗಳಿಗೆ ಹೆಚ್ಚು ಹೆಚ್ಚಾಗಿ ಮುನ್ನುಗ್ಗುತ್ತಿದ್ದಾರೆ. ಜಾಹಿರಾತು ಜಗತ್ತಿನಲ್ಲಂತೂ, ಹೆಣ್ಣಿಲ್ಲದ ಜಾಹಿರಾತುಗಳು ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ. ಸೋಪು, ಪೇಸ್ಟು, ಹೇರ್ ಆಯಿಲ್, ಗೃಹೋಪಯೋಗಿ ವಸ್ತುಗಳು, ತಿಂಡಿ ಪದಾರ್ಥಗಳು, ಎಣ್ಣೆ, ಬೆಣ್ಣೆ, ಉಪ್ಪಿನಕಾಯಿ, ಬಟ್ಟೆಬರೆ, ಒಡವೆ ಮುಂತಾದವುಗಳು ಒತ್ತಟ್ಟಿಗಿರಲಿ, ಕಡೆಗೆ ಪುರುಷ ಸಂಬಂಧವಾದ ವಸ್ತುಗಳಿಗೂ ಹೆಣ್ಣು ಜಾಹಿರಾತಿನಲ್ಲಿ ಕಾಣಿಸಿಕೊಳ್ಳಬೇಕು. ಬ್ಲೇಡು, ಒಳ ಉಡುಪುಗಳು ಇವುಗಳಲ್ಲಿಯೂ ಹೆಣ್ಣನ್ನು ತರುವುದು ಎಷ್ಟು ಸಮಂಜಸ ಎನಿಸುತ್ತದೆ. ಕೆಲವು ಜಾಹಿರಾತುಗಳಂತೂ ಅಶ್ಲೀಲವೆನಿಸುತ್ತವೆಯಾದರೂ, ಮುಜುಗರವಿಲ್ಲದೆ ದೇಹ ಪ್ರದರ್ಶನಕ್ಕೆ ಮುಂದಾಗಿ ನಿಲ್ಲುವ ಹೆಣ್ಣುಗಳು, ಹೆಣ್ಣುಗಳನ್ನು ಸ್ವಲಾಭಕ್ಕಾಗಿ ಉದಾರವಾಗಿ ಬಳಸಿಕೊಳ್ಳುವ ಏಜನ್ಸಿಗಳು ಇರುವವರೆಗೂ ಇಂತಹ ನೋಟಗಳು ಅನಿವಾರ್ಯವೇನೋ ಎನಿಸುತ್ತದೆ.

ಬಹುಶಃ ಹೆಣ್ಣಿಲ್ಲದೆ ಬದುಕೇ ಇಲ್ಲವೇನೋ ಎನಿಸುತ್ತದೆ. ಬದುಕಿನಲ್ಲಿ ಘಟನೆಗಳು, ಸಂದರ್ಭಗಳು ಸಮಸ್ಯೆಗಳು ಹುಟ್ಟಿಕೊಳ್ಳುವುದು ಹೆಣ್ಣಿಲ್ಲದೆ ಸಾಧ್ಯವಿಲ್ಲ ಎನ್ನುವ ನಂಬಿಕೆಯನ್ನು ಪುಷ್ಟೀಕರಿಸಲು ನಮ್ಮ ಟಿ.ವಿ. ಧಾರವಾಹಿಗಳೇ ಸಾಕ್ಷಿ. ಕತೆ ಮುಂದುವರೆಯಲು, ತಿರುವುಗಳನ್ನು ಪಡೆಯಲು, ಸುಖಾಂತವೋ, ದುಃಖಾಂತವೋ ಆಗಿ ಪರಿಣಮಿಸಲು ಹೆಣ್ಣು ಬೇಕೇ ಬೇಕು. ಇವತ್ತಿನ ಧಾರಾವಾಹಿಗಳೆಲ್ಲವೂ ಹೆಚ್ಚು ಕಡಿಮೆ ಸ್ತ್ರೀ ಕೇಂದ್ರಿತವೇ ! ಹೀಗಾಗಿ ಹೆಣ್ಣು ಇವತ್ತಿಗೂ ವಿಶ್ವವ್ಯಾಪಕ ಶಕ್ತಿಯಾಗಿ, ನಿಯಂತ್ರಕ ಶಕ್ತಿಯಾಗಿ ಪರಿಣಮಿಸಿದ್ದಾಳೆ.

ಹೆಣ್ಣಿಗೆ, ಹೆಣ್ಣು ದೇಹಕ್ಕೆ ಯಾವುದೇ ಬಗೆಯ ಮಡಿವಂತಿಕೆಯಿಲ್ಲ. ಅವಳ ದೇಹ ಸುಖದ ಅಪೇಕ್ಷೆ, ದೇವರು, ಧರ್ಮ, ಜಾತಿ, ಮತ, ಅಧಿಕಾರ ಅಂತಸ್ತು ಎಲ್ಲವನ್ನೂ ಗಾಳಿಗೆ ತೂರಿಬಿಡುತ್ತದೆ. ಹೊಲ ಗದ್ದೆ, ಆಫೀಸು, ಸೂಳೆಗೇರಿ, ಸಾರ್ವಜನಿಕ ಸ್ಥಳ-ಯಾವುದೇ ಆಗಿರಲಿ ಪುರುಷನ ಅದಮ್ಯ ಆಕಾಂಕ್ಷೆ, ಅವನ ವಿಕೃತ ಕಾಮ, ಹೆಣ್ಣಿನ ಮೇಲೆ ಅತ್ಯಾಚಾರಕ್ಕೆ ಪ್ರಚೋದಿಸುತ್ತದೆ. ಅವಳ ದೇಹ ಪ್ರದರ್ಶನ ಪುರುಷನ ಸುಪ್ತ ಕಾಮನೆಗಳಿಗೆ ಪ್ರಚೋದನೆ. ಆಹ್ವಾನ ಆಗಬಲ್ಲುದು ಎಂಬ ಸತ್ಯದ ಅರಿವಿದ್ದೂ, ಪ್ರಾಯ ಮತ್ತು ಸೌಂದರ್ಯವಿದ್ದವರು ಅತಿ ಹೆಚ್ಚಿನ ಹಣ ಗಳಿಕೆಯ ಸುಲಭೋಪಾಯವಾಗಿರುವುದರಿಂದ ಸ್ವ-ಇಚ್ಛೆಯಿಂದ ಯಾವ ಬಗೆಯ ಪ್ರದರ್ಶನಕ್ಕಾದರೂ ಸಿದ್ಧವಾಗಿ ತಮ್ಮನ್ನು ಒಡ್ಡಿಕೊಳ್ಳುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ನಮ್ಮ ಸ್ತ್ರೀವಾದಿಗಳು ಹೆಣ್ಣಿನ ಮಾನರಕ್ಷಣೆಗಾಗಿ, ಅಶ್ಲೀಲ ಜಾಹಿರಾತುಗಳು ಅಶ್ಲೀಲ ಪೋಸ್ಟರ್‌ಗಳು – ಇವುಗಳ ವಿರುದ್ಧ ದನಿಯೆತ್ತಿ ಹೋರಾಟ ಮಾಡುವುದು ಮಾಡುತ್ತಿರುವುದು ದುರಂತ ವ್ಯಂಗ್ಯವೆನಿಸುತ್ತದೆ. ಸ್ತ್ರೀ ಸ್ವಾತಂತ್ರ್ಯ, ಸ್ತ್ರೀ ಸ್ವೇಚ್ಛೆಯಾಗಿ ಪರಿವರ್ತನೆಯಾಗುತ್ತಿದೆ. ಹೆಣ್ಣಿನ ದೇಹ ಸೌಂದರ್ಯದ ವೃದ್ಧಿಗಾಗಿ ಏನೆಲ್ಲ ಸೌಂದರ್ಯ ವರ್ಧಕಗಳು ಮಾರುಕಟ್ಟೆಯಲ್ಲಿ ಹೇರಳವಾಗಿ ನುಗ್ಗಿ ಧಾಳಿ ಮಾಡಿ ಸ್ಪರ್ಧಾತ್ಮಕವಾದ ಪ್ರಚಾರವನ್ನು ನಡೆಸುತ್ತಿವೆ. ಮಡಿವಂತಿಕೆಯ ಮಧ್ಯಮ ವರ್ಗದ ಮತ್ತು ಕೆಳಮಧ್ಯಮ ವರ್ಗದ ಹೆಣ್ಣುಮಕ್ಕಳು ನಮ್ಮ ಸಾಂಪ್ರದಾಯಿಕ ಪರಿಭಾಷೆ ಪ್ರಕಾರ ಎಷ್ಟೇ ಚೆಲುವೆಯರಾಗಿದ್ದರೂ ಸ್ಪರ್ಧೆಗಳಿಂದ, ರೂಪದರ್ಶಿಗಳಾಗುವ ವೃತ್ತಿಯಿಂದ ದೂರವಿರುತ್ತಾರೆ. ಉಚ್ಚಮಧ್ಯಮವರ್ಗದ, ವಿದ್ಯಾವಂತ ವರ್ಗದ ಹೆಣ್ಣುಮಕ್ಕಳು ಫ್ಯಾಷನ್ ಜಗತ್ತಿನ ಮಿನುಗು ತಾರೆಗಳಾಗಲು, ಸೌಂದರ್ಯ ರಾಣಿಯರಾಗಲು ಹೆಚ್ಚು ಹೆಚ್ಚು ಉತ್ಸುಕರಾಗುತ್ತ ಅದಕ್ಕೆ ಬೇಕಾದ ಎಲ್ಲ ರೀತಿಯ ಸಿದ್ಧತೆಗಳಿಗೆ ತಮ್ಮನ್ನು ಸಜ್ಜುಗೊಳಿಸಿಕೊಳ್ಳುತ್ತಿದ್ದಾರೆ.

ದೇಹ ಕಾಣಿಸಬಾರದೆಂದು ಮೈತುಂಬ ಸೆರಗು ಹೊದ್ದು, ಹರಿಹಾಯುವ ಮತ್ತು ಆದಷ್ಟು ಪುರುಷರು ಇರುವ ಸ್ಥಳಗಳಲ್ಲಿ ಕಾಣಿಸಿಕೊಳ್ಳದಿರುವ ಪ್ರಯತ್ನದಲ್ಲಿ ಇರುತ್ತಿದ್ದ ಯುವತಿಯರು ಇದ್ದ ಒಂದು ಕಾಲವಿತ್ತು. ಆದರೆ ಈಗ ನಾಚಿಕೆ, ಸಂಕೋಚಗಳು ಸವಕಲು ಶಬ್ದಗಳಾಗಿ ಅರ್ಥಕಳೆದುಕೊಂಡಿವೆ. ಎಷ್ಟೆಷ್ಟು ದೇಹ ಸೌಂದರ್ಯವನ್ನು ಪ್ರದರ್ಶಿಸಲು ಮುಂದಾಗುವ ದಿಟ್ಟತನ ತೋರುತ್ತಾರೋ ಅಷ್ಟಷ್ಟು ಬೇಡಿಕೆ ಅಂಥವರಿಗೆ ಸಾಧ್ಯವಾಗುತ್ತದೆ.

ಹೆಣ್ಣಿನ ಮೇಲೆ ಪುರುಷನ ಅಧಿಕಾರವನ್ನು ವಿರೋಧಿಸುತ್ತಲೇ ವ್ಯಾಪಾರ ಜಗತ್ತಿನಲ್ಲಿ ಸ್ವ-ಇಚ್ಛೆಯಿಂದಲೇ ದೇಹದ ಮೇಲಿನ ಅಧಿಕಾರವನ್ನು ಪುರುಷರಿಗೆ ಒಪ್ಪಿಸಿ ಅವರ ನಿರೀಕ್ಷೆಗಳಿಗೆ ತಕ್ಕಂತೆ ತಮ್ಮ ದೇಹಗಳನ್ನು ಅಳವಡಿಸುತ್ತಿರುವುದು ವಿಪರೀತ ವ್ಯಂಗ್ಯವೆನಿಸುತ್ತದೆ. ಇಲ್ಲಿ ಹೆಣ್ಣಿಗೆ ಮುಖ್ಯವಾಗುವುದು ಹಣವೇ ಹೊರತು ದೇಹವಲ್ಲ.

ತನ್ನ ದೇಹ ಸೌಂದರ್ಯದಿಂದ ಪುರುಷ ಜಗತ್ತನ್ನು, ಜಾಹಿರಾತು ಜಗತ್ತನ್ನೂ, ಫ್ಯಾಷನ್ ಜಗತ್ತನ್ನೂ ಸೂತ್ರಧಾರಿಣಿಯಾಗಿ ಆಡಿಸುತ್ತಿರುವ ಹೆಣ್ಣು, ಇನ್ನೂ ಕೆಲವು ಕ್ಷೇತ್ರಗಳಲ್ಲಿ, ಮನೆಗಳಲ್ಲಿ ಪುರುಷ ದೌರ್ಜನ್ಯ ದಬ್ಬಾಳಿಕೆಗೆ ಒಳಗಾಗಿರುವುದು, ಒಳಗಾಗುತ್ತಿರುವುದು ಬಗೆ ಹರಿಯದ ಪ್ರಶ್ನೆಯಾಗಿ ನಿಂತಿದೆ !

❑

೫೧, ೧ ಎ ಕ್ರಾಸ್, ೩೦ನೇ ಮೈನ್, ಭವಾನಿಲೇಔಟ್, ಅತ್ತಿಮಬ್ಬೆ ರಸ್ತೆ, ಬನಶಂಕರಿ ೩ನೇ ಹಂತ, ಬೆಂಗಳೂರು ೮೫

೩

ಕಾಮ ಮತ್ತು ಶಾಸ್ತ್ರ

ಜಿ.ಎಂ. ಕೃಷ್ಣಮೂರ್ತಿ

ಸುಮಾರು ಐವತ್ತು ವರ್ಷಗಳ ಹಿಂದಿನ ಸಂಗತಿ : ನಾನು ಆಗ ಪ್ರೌಢಶಾಲೆಯಲ್ಲಿ ಓದುತ್ತಿದ್ದೆ. ಒಂದು ದಿನ ನಮ್ಮ ಬಯಾಲಜಿ ಮೇಸ್ಟ್ರು 'ಸಂತಾನೋತ್ಪತ್ತಿ' ಕುರಿತಂತೆ ಪಾಠವನ್ನಾರಂಭಿಸಿದರು. ಸ್ತ್ರೀಯ ಜನನೇಂದ್ರಿಯದ ಚಿತ್ರ ಬರೆದು ವಿವರಿಸಲಾರಂಭಿಸಿದರು. ಇಡೀ ತರಗತಿ 'ಶವದ ಮನೆಯಂತೆ' ಮೌನವಾಗಿತ್ತು. ಮುಂದೆ ಕುಳಿತಿದ್ದ ವಿದ್ಯಾರ್ಥಿನಿಯರು ತಲೆತಗ್ಗಿಸಿದ್ದರೆ, ವಿದ್ಯಾರ್ಥಿಗಳು 'ಆಕಾಶ ತಲೆಮೇಲೆ ಕಳಚಿ ಬಿದ್ದಂತೆ' ಮುಖ ಒಣಗಿಸಿಕೊಂಡು ಕೂತಿದ್ದರು. ಮೇಸ್ಟ್ರು ಪದೇ ಪದೇ ನಮ್ಮನ್ನು ಎಚ್ಚರಿಸುತ್ತಿದ್ದರು ; ಹಸಿವು, ಬಾಯಾರಿಕೆಗಳಂತೆ ಗಂಡು–ಹೆಣ್ಣು ಕೂಡುವುದು ಪ್ರಕೃತಿಯ ನಿಯಮ. ಹಸಿವಾದಾಗ ಊಟಮಾಡುವಂತೆ, ಬಾಯಾರಿಕೆಯಾದಾಗ ನೀರು ಕುಡಿಯುವಂತೆ, ಮಿಲನದ ಸುಖ ಬೇಕೆನಿಸಿದಾಗ ಆ ಸುಖ ಪಡೆಯಬೇಕು. ಅದು ಕೂಡಾ ಪ್ರಕೃತಿಯ ನಿಯಮ. ಅದು ಸಹಜವಾಗಿರುವ ದೈಹಿಕ ಕ್ರಿಯೆ. ನಾಚಿಕೊಳ್ಳಬೇಕಾಗಿಲ್ಲ, ಹೆದರಬೇಕಾಗಿಲ್ಲ. ಅಂದು ಆ ಮೇಸ್ಟ್ರು ಕೊಟ್ಟ ಉಪದೇಶದಲ್ಲಿ ನಮಗೆ ಎಷ್ಟು ಅರ್ಥವಾಯಿತೋ . . . ತಿಳಿಯದು. ಆದರೆ ಈಗ ಮತ್ತೆ ಅವರ ಮಾತುಗಳನ್ನು ನೆನಪಿಗೆ ತಂದುಕೊಳ್ಳಬೇಕಾಗಿದೆ. ಸಮಾಜ ಎಷ್ಟು ಬದಲಾಗಬೇಕೋ ಅಷ್ಟು ಬದಲಾಗಿಲ್ಲ, ಎನಿಸುತ್ತಿದೆ. ನಮ್ಮಲ್ಲಿ ಈಗ ಲೈಂಗಿಕ ಶಿಕ್ಷಣ ಕುರಿತಂತೆ ಚರ್ಚೆ ನಡೆಯುತ್ತಿದೆ. ಮಡಿವಂತರು, ಆಚಾರವಂತರು, ಸಮಾಜದ ನೈತಿಕತೆಯ ಜವಾಬುದಾರಿಯನ್ನು ತಾವೇ ಹೊತ್ತುಕೊಂಡಿದ್ದೇವೆ ಎಂದು ಬೀಗುತ್ತಿರುವ ಹಿರಿಯರು ಕಡೆಗೂ ಲೈಂಗಿಕ ಶಿಕ್ಷಣ ಜಾರಿಗೆ ಬರದಂತೆ ತಡೆಯುವಲ್ಲಿ ಯಶಸ್ವಿಗಳಾಗಿದ್ದಾರೆ.

'ಲೈಂಗಿಕತೆ' ಎಂದಾಕ್ಷಣ ಕೆಲವರು ಬಾಯಿ ಚಪ್ಪರಿಸಿಕೊಂಡು ಪುಳಕಿತರಾದರೆ, ಇನ್ನು ಕೆಲವರು ಮುಖವನ್ನು ಓರೆಮಾಡಿಕೊಂಡು 'ಛೀ... ಥೂ' ಎನ್ನುತ್ತಾರೆ. ಅವರ ದೃಷ್ಟಿಯಲ್ಲಿ ಲೈಂಗಿಕ ಶಿಕ್ಷಣ ಎಂದರೆ ಕೇವಲ ಸಂಭೋಗದ ವಿವರಣೆ. ಪಶು ಪ್ರಾಣಿಗಳಿಗೆ ಯಾರಾದರೂ ಸಂಭೋಗದ ಪಾಠ ಕಲಿಸುತ್ತಾರೆಯೇ . . . ಬೆಳೆದು ನಿಂತಿರುವ ಗಂಡು–ಹೆಣ್ಣಿಗೆ ಅದನ್ನು ಕಲಿಸಬೇಕೆ ? ಎಂಬಂತಹ ಬಾಲಿಶ ಪ್ರಶ್ನೆಗಳನ್ನು ಕೇಳುವವರಿದ್ದಾರೆ. ಕತ್ತಲೆ ತುಂಬಿರುವ ಕೊಠಡಿಯಲ್ಲಿ ನಡೆಯುವ ವ್ಯವಹಾರ ಬೆಳಕಿಗೆ ಬರಬೇಕೆ ಎಂದು ಪ್ರಶ್ನಿಸುವವರು ಇದ್ದಾರೆ. ಅವರ ಪ್ರಕಾರ ಹೆಣ್ಣು–ಗಂಡಿನ ಮಿಲನ ಮಲಗಿ ನಿದ್ರಿಸುವ ಮುಂಚಿನ ಒಂದು ಸಾಮಾನ್ಯ ಕ್ರಿಯೆ. ಆದರೆ ಏಡ್ಸ್‌ನಂತಹ ಮಹಾಮಾರಿ ಜಗತ್ತನ್ನು ಹಿಂಡಲು ಆರಂಭಿಸಿದಾಗ ಪ್ರಾಯಶಃ ಅನೇಕರಲ್ಲಿ ಈ ಬಗ್ಗೆ ಸ್ವಲ್ಪಮಟ್ಟಿನ ಎಚ್ಚರ ಹುಟ್ಟಿಕೊಂಡಿದೆ. ಏಡ್ಸ್ ಬಗ್ಗೆ ಎಚ್ಚರಿಸುವ ಅನೇಕ ಪ್ರಕಟಣೆಗಳು, ಜಾಹೀರಾತುಗಳು 'ಸುರಕ್ಷಿತ ಸಂಭೋಗ', 'ಏಕಸಂಗಾತಿಯನ್ನು ಕೂಡುವುದು', 'ಸುರಕ್ಷಿತ ಸಾಧನಗಳನ್ನು ಬಳಸಿಕೊಳ್ಳುವುದು' ಮುಂತಾದವುಗಳ ಬಗ್ಗೆ ಜನರಲ್ಲಿ ಎಚ್ಚರವನ್ನು ಹುಟ್ಟಿಸುತ್ತಿವೆ. ಆದರೆ ಒಬ್ಬ ಚಿಕ್ಕ ಬಾಲಕ ಇಲ್ಲವೇ ಚಿಕ್ಕ ಬಾಲಕಿ ತಮ್ಮ ತಂದೆ–ತಾಯಿಯರನ್ನು 'ಸುರಕ್ಷಿತ ಸಂಭೋಗ ಎಂದರೇನು ? ಕೃತಕ ಸಾಧನಗಳು ಎಂದರೇನು ?' ಎಂದು ಪ್ರಶ್ನಿಸಿದರೆ ಆ ತಂದೆ–ತಾಯಿಯರು ಏನು ಉತ್ತರಿಸುತ್ತಾರೆ ? ನನ್ನ ಸಂಬಂಧದ ಮಹಿಳೆಯೊಬ್ಬಳು ನನಗೆ ಇಂತಹ ಪ್ರಶ್ನೆ ಹಾಕಿದ್ದಳು. ಜತೆಯಲ್ಲಿ ಇಂದಿನ ಸಿನಿಮಾಗಳು

(ಜಾಗತೀಕರಣದ ಛಾಯೆಯಡಿಯಲ್ಲಿ ಇಂದು ಯಾರು ಬೇಕಾದರೂ ಪಶ್ಚಿಮ ಜಗತ್ತಿನ ಲಘು ಸಿನಿಮಾಗಳನ್ನು ಧಾರಾಳವಾಗಿ ನೋಡಬಹುದಾಗಿದೆ.), ಜಾಹೀರಾತುಗಳು, ಧಾರಾವಾಹಿಗಳು, ಕಿರು ಚಿತ್ರಗಳು–ಹೀಗೆ ಅನೇಕ ಮಾಧ್ಯಮಗಳು ಹೆಣ್ಣಿನ ಮಾದಕ ಶರೀರವನ್ನು ಮತ್ತು ಗಂಡು–ಹೆಣ್ಣಿನ ಮಿಲನದ ಚಿತ್ರಗಳನ್ನು ಧಾರಾಳವಾಗಿ ಪ್ರದರ್ಶಿಸುತ್ತಿವೆ. ಪ್ರಸಕ್ತ ಸನ್ನಿವೇಶ ಹೀಗಿರುವಾಗ ನಮ್ಮ ಹಿರಿಯರು 'ವೈಜ್ಞಾನಿಕ ರೀತಿಯಲ್ಲಿ ಲೈಂಗಿಕ ಶಿಕ್ಷಣ' ಬೇಡವೆನ್ನುತ್ತ, ಅದೇ ಸಮಯದಲ್ಲಿ ಕಿರಿಯರ ಮನಗಳ ಮೇಲೆ ಕೆಟ್ಟ ಪ್ರಭಾವ ಬೀರುವ ಸಾಧನಗಳನ್ನು ನಿಯಂತ್ರಿಸಲಾರದೇ ಕೈ, ಕೈ ಹಿಸುಕಿಕೊಳ್ಳುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ನಮ್ಮ ಪ್ರಾಚೀನ ಕಾಮಶಾಸ್ತ್ರಜ್ಞ ವಾತ್ಸಾಯನ ಮಹಾಮುನಿ ಹಾಗೂ ಅವನ ಮಹೋನ್ನತ ಕೃತಿ 'ಕಾಮಸೂತ್ರ'ದ ಕಡೆಗೆ ಗಮನ ಹರಿಸೋಣ : ವಾತ್ಸಾಯನ ಭಾರತದ ಪ್ಲೇಟೋ ಎಂದು ಖ್ಯಾತನಾಗಿದ್ದಾನೆ. ಅವನು ಪ್ರಾಚೀನ ಭಾರತದ ಅತ್ಯಂತ ಪ್ರಮುಖ ತತ್ವಜ್ಞಾನಿಗಳಲ್ಲೊಬ್ಬ ಹಾಗೂ ತರ್ಕಶಾಸ್ತ್ರದಲ್ಲಿ ಅಪ್ರತಿಮ ವಿದ್ವಾಂಸನಾಗಿದ್ದ. ಪ್ರಾಯಃ ಈ ವಿದ್ವಾಂಸ ಸುಮಾರು ಕ್ರಿ.ಶ. ೪೫೦ರ ಸುಮಾರಿನಲ್ಲಿದ್ದನೆಂದು ಊಹಿಸಲಾಗಿದೆ. ಆತ ತನ್ನ ಮೇರು ಗ್ರಂಥ 'ಕಾಮಸೂತ್ರ'ದಲ್ಲಿ ಶಾತವಾಹನ ಅರಸುಗಳ ಬಗ್ಗೆ ಉಲ್ಲೇಖಿಸಿದ್ದಾನೆ. ಶಾತವಾಹನರು ದಕ್ಷಿಣ ಭಾರತದಲ್ಲಿ ಆಳಿದ್ದರಿಂದ ಪ್ರಾಯಃ ಈತ ದಕ್ಷಿಣ ಭಾರತದವನೇ ಇರಬೇಕು ಎಂದು ವಿದ್ವಾಂಸರುಗಳು ಊಹಿಸಿದ್ದಾರೆ. ಈತ ವಾರಣಾಸಿಯಲ್ಲಿ ಧಾರ್ಮಿಕ ಅಧ್ಯಯನದಲ್ಲಿ ತೊಡಗಿದ್ದಾಗ 'ಕಾಮಸೂತ್ರ' ಬರೆದ ಎನ್ನಲಾಗಿದೆ. ಲೈಂಗಿಕ ಜೀವನದ ಬಗ್ಗೆ ಪ್ರಾಚೀನ ಭಾರತದಲ್ಲಿ ರಚಿತವಾಗಿದ್ದ ಗ್ರಂಥಗಳಲ್ಲಿ ಖಂಡಿತವಾಗಿಯೂ ವಾತ್ಸಾಯನನ 'ಕಾಮಸೂತ್ರ' ಪ್ರಮುಖವಾದದ್ದು. ಇವನ ತರುವಾಯ ಕಾಮಶಾಸ್ತ್ರದ ಬಗ್ಗೆ ಬರೆದಿರುವವರೆಲ್ಲರೂ ಇವನಿಗೆ ಋಣಿಯಾಗಿದ್ದಾರೆ. ಇವನನ್ನು ಅನುಸರಿಸಿದ್ದಾರೆ. ವಾತ್ಸಾಯನನ ದೃಷ್ಟಿ ಸಮನ್ವಯದ್ದು. ಕಾಮಕ್ಕೆ ಜೀವನದಲ್ಲಿ ಪ್ರಮುಖ ಸ್ಥಾನವಿದೆ ಎಂಬುದನ್ನು ತೂಕ ತಪ್ಪದೇ ವಿಶ್ಲೇಷಿಸಿದ್ದಾನೆ. ಈ ಕೃತಿಯ ಅನುವಾದಗಳು ಅನೇಕ ದೇಶಿ ಹಾಗೂ ವಿದೇಶಿ ಭಾಷೆಗಳಲ್ಲಿ ಹೊರಬಂದಿವೆ. ಇವನ ಕೃತಿಯ ಜನಪ್ರಿಯತೆಗೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಿಲ್ಲ. ಇವನ ಸಮತೂಕದ ವಿಶ್ಲೇಷಣೆಗೆ, ಇವನು ಗೌತಮನ 'ನ್ಯಾಯಸೂತ್ರ'ದ ಬಗ್ಗೆ ಬರೆದಿರುವ ವ್ಯಾಖ್ಯಾನವನ್ನು ನೋಡಬಹುದು. ದೇವರಲ್ಲಿ ವಿಶ್ವಾಸವಿದ್ದರೂ ವೇದಗಳು ದೇವಸೃಷ್ಟಿ ಎನ್ನದೇ ಮಹರ್ಷಿಗಳೇ ವೇದವನ್ನು ರಚಿಸಿದರು ಎಂದು ವಾತ್ಸಾಯನ ಅಭಿಪ್ರಾಯಪಟ್ಟಿದ್ದಾನೆ.

ಸುಖಮಯವಾಗಿರುವ ದಾಂಪತ್ಯ ಜೀವನ ಸುಸ್ಥಿತಿಯಲ್ಲಿರುವ ಸಮಾಜಕ್ಕೆ ಕಾರಣ ಎಂದು ನಮ್ಮ ಹಿರಿಯರು ಭಾವಿಸಿದ್ದರು. ನಮ್ಮ ನಾಲ್ಕು ವೇದಗಳಲ್ಲಿ ಕಡೆಯದಾಗಿರುವ ಅಥರ್ವವೇದದಲ್ಲಿ ಈ ವಿಚಾರ ಬಂದಿದೆ ಎಂದು ವಿದ್ವಾಂಸರುಗಳು ತಿಳಿಸಿದ್ದಾರೆ. ಈ ವಿಚಾರವೇ ಮುಂದೆ 'ಕಾಮಶಾಸ್ತ್ರ'ದ ರಚನೆಗೆ ಕಾರಣವಾಯ್ತು ಎಂದು ಅಭಿಪ್ರಾಯಪಡಲಾಗಿದೆ. ಅಂದರೆ ನಮ್ಮ ಪ್ರಾಚೀನರು ತಮ್ಮ ಚಿಂತನೆಯಲ್ಲಿ ಎಂದೂ ಕಾಮವನ್ನು ಕಡೆಗಣಿಸಿರಲಿಲ್ಲ. ಕಾಮ ಮೋಕ್ಷಕ್ಕೆ ತಡೆಯೊಡ್ಡುವುದು ಎಂಬ ಅಭಿಪ್ರಾಯವನ್ನು ಮತ್ತೆ ಮತ್ತೆ ವಿಮರ್ಶೆಗೆ ಒಡ್ಡುವುದು ಒಳ್ಳೆಯದು. ಶರಣರು ಹೇಳಿರುವಂತೆ 'ಹೆಣ್ಣು ಮಾಯೆಯಲ್ಲ... ಮನದ ಮುಂದಿನ ಆಸೆಯೇ ಮಾಯೆ'. ಮಧ್ಯಪ್ರದೇಶದಲ್ಲಿರುವ ಖಜುರಾಹೋ ತುಂಬಾ ಚರ್ಚೆಯಲ್ಲಿರುವುದು ಅಲ್ಲಿರುವ ಮಿಥುನ ಶಿಲ್ಪಗಳಿಂದ. ಅನೇಕ ದೇವಾಲಯಗಳಲ್ಲಿ ಇಂತಹ ಶಿಲ್ಪಗಳು ಕೆಲವಾದರೂ ಕಂಡುಬಂದರೂ ಈ ಪ್ರದೇಶಗಳಲ್ಲಿರುವ ಅನೇಕ ದೇವಾಲಯಗಳಲ್ಲಿ ಇಂತಹ ಶಿಲ್ಪಗಳು ಕಂಡುಬರುವುದರಿಂದ ಒಟ್ಟಿನಲ್ಲಿ ಖಜುರಾಹೋನಲ್ಲಿ ಈ ಶಿಲ್ಪಗಳು ಅಧಿಕವಾಗಿವೆ ಎಂದು ಹೇಳಲಾಗುತ್ತಿದೆ. ಹಾಗಿದ್ದರೂ ಈ ಶಿಲ್ಪಗಳ ಉದ್ದೇಶ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ನಮ್ಮ ಪ್ರಾಚೀನ ಶಿಲ್ಪಗಳು ಮತ್ತು ದೇವಾಲಯಗಳನ್ನು ಕಟ್ಟಿಸಿದವರು ಏನೂ ಉದ್ದೇಶವಿಲ್ಲದೇ ಈ ಶಿಲ್ಪಗಳಿಗೆ ದೇವಾಲಯಗಳಲ್ಲಿ ಸ್ಥಳ ಒದಗಿಸಿಕೊಟ್ಟರು ಎಂದು ಹೇಳಿದರೆ ಅದು ಬಾಲಿಶವಾಗುತ್ತದೆ. ಪ್ರಾಯಃ ಜನಸಾಮಾನ್ಯರಿಗೆ ಲೈಂಗಿಕ ಶಿಕ್ಷಣ ಕೊಡುವ ಉದ್ದೇಶದಿಂದ ಈ ಶಿಲ್ಪಗಳು ರಚಿತವಾಗಿವೆ ಎಂದು ಕೆಲವರು ಭಾವಿಸಿದ್ದಾರೆ. ಏನೇ ಇರಲಿ ನಮ್ಮ ಪ್ರಾಚೀನರು ಲೈಂಗಿಕತೆಗೆ ಜೀವನದಲ್ಲಿ ಪ್ರಮುಖ ಸ್ಥಾನವನ್ನು ಕೊಟ್ಟಿದ್ದರು ಮತ್ತು ಅದು ಪಾಪಕಾರ್ಯ ಎಂದಾಗಲೀ ಅದೊಂದು ಲಘುವ್ಯವಹಾರ ಎಂದಾಗಲೀ ಭಾವಿಸಿರಲಿಲ್ಲ. ಮಹಾದೇವನ ವಾಹನವಾದ 'ನಂದಿ' ಕಾಮಶಾಸ್ತ್ರವನ್ನು ಬರೆದ ಎಂಬ ಐತಿಹ್ಯ ಕೂಡಾ ಇದೆ. ಒಂದು ಸಾವಿರ ಪ್ರಕರಣವಿರುವ ಈ ಕೃತಿಯನ್ನು ಮುಂದೆ ಉದ್ಧಾಲಕನ ಮಗನಾದ ಶ್ವೇತಕೇತು ಐನೂರು ಪ್ರಕರಣಗಳಲ್ಲಿ ಸಂಕ್ಷೇಪಿಸಿದ. ವೇಶ್ಯೆಯರ ಸಂಬಂಧದ

ಪ್ರಕರಣವನ್ನು ದತ್ತಕನೆಂಬುವವನು ಪಾಟಲೀಪುತ್ರದ ವೇಶ್ಯೆಯರ ವಿನಂತಿಯ ಮೇರೆಗೆ ಬರೆದ ಎನ್ನಲಾಗಿದೆ. ಇವೆಲ್ಲವನ್ನೂ ಒಟ್ಟಾಗಿ ಸಂಕಲಿಸಿ 'ಕಾಮಸೂತ್ರ' ಕೃತಿಯನ್ನು ವಾತ್ಸಾಯನ ರಚಿಸಿದ. ಚಾರಾಯಣ, ಸುವರ್ಣನಾಭ, ಗೋನರ್ದೀಯ, ಘೋಟಕಮುಥ, ಗಣೆಕಪುತ್ರ, ಕುಚುಮಾರ ಎಂಬ ವಿದ್ವಾಂಸರುಗಳು ಕೂಡಾ ಕಾಮಶಾಸ್ತ್ರದ ಗ್ರಂಥಗಳನ್ನು ರಚಿಸಿದ್ದಾರೆ. ಅನೇಕ ಪ್ರಕರಣಗಳನ್ನು ಬೇರೆ ಬೇರೆ ಮಾದರಿಗಳಲ್ಲಿ ಬರೆದಿದ್ದಾರೆ. ಆದರೆ ವಾತ್ಸಾಯನನ 'ಕಾಮಸೂತ್ರ' ಕಾಮಶಾಸ್ತ್ರದ ಪೂರ್ಣ ಜ್ಞಾನವನ್ನು ಕೊಡುವುದರಲ್ಲಿ ಸಫಲವಾಗಿದೆ ಎಂದು ವಿದ್ವಾಂಸರುಗಳು ಭಾವಿಸಿದ್ದಾರೆ.

ಮನುಷ್ಯನ ಆಯಸ್ಸು ನೂರು ವರ್ಷಗಳಿದ್ದು ಆ ನೂರು ವರ್ಷಗಳಲ್ಲಿ ಅವನು ಧರ್ಮ-ಅರ್ಥ-ಕಾಮಗಳನ್ನು ಒಂದಕ್ಕೊಂದು ಸಂಬಂಧವಿಟ್ಟುಕೊಂಡು ಒಂದು ಮತ್ತೊಂದನ್ನು ಹಾನಿ ಮಾಡದಂತೆ ಎಚ್ಚರವಹಿಸುತ್ತ ಅವುಗಳನ್ನು ಅನುಭವಿಸಬೇಕು. ವಾತ್ಸಾಯನ ಹೀಗೆ ಹೇಳುತ್ತಾನೆ : 'ಈ ಕಾಮಶಾಸ್ತ್ರವನ್ನು ನಿಜವಾಗಿ ಬಲ್ಲ ಜ್ಞಾನಿಗಳು ಧರ್ಮ, ಅರ್ಥ, ಕಾಮ – ಇವುಗಳಲ್ಲಿ ತಮ್ಮ ಆತ್ಮವಿಶ್ವಾಸ ಮತ್ತು ಜಗತ್ತಿನ ಆಚಾರಗಳನ್ನು ನೋಡಿಕೊಂಡು ಕಾರ್ಯ ಪ್ರವೃತ್ತರಾಗುತ್ತಾರೆ. ಇವರು ರಾಗಾಂಧತೆಯಿಂದ ಎಂದಿಗೂ ಏನನ್ನೂ ಮಾಡುವುದಿಲ್ಲ'. ಮುಖ್ಯವಾಗಿ ಕಾಮಸೂತ್ರಕಾರನು ಕೆಲವು ವಿಚಾರಗಳನ್ನು ಸ್ಪಷ್ಟಪಡಿಸುತ್ತಾನೆ : ಯಾರಿಗೆ ರಾಗ ಅಂದರೆ ಪ್ರೀತಿ, ಒಲವು ಹೆಚ್ಚಾಗಬೇಕೆಂದಿದೆಯೋ ಮತ್ತು ಪ್ರೀತಿ ಹೆಚ್ಚದಿದ್ದರೆ ಯಾರಿಗೆ ಸುಖ ಸಿಗುವುದಿಲ್ಲವೋ ಅಂತಹವರಿಗಾಗಿ ಪ್ರೀತಿಯನ್ನು ಹೆಚ್ಚಿಸಿಕೊಳ್ಳುವ ಅನೇಕ ವಿಧಾನಗಳನ್ನು ಹೇಳಲಾಗಿದೆ. ಪ್ರೀತಿಯಿಂದ ಉನ್ಮತ್ತರಾಗುವವರು ಅದನ್ನು ಪ್ರಯತ್ನಪೂರ್ವಕವಾಗಿ ನಿವಾರಿಸಿಕೊಳ್ಳುವ ಅನೇಕ ಸೂಚನೆಗಳನ್ನು ಕೂಡಾ ನೀಡಲಾಗಿದೆ. ಕಾಮಶಾಸ್ತ್ರದಲ್ಲಿ ಅನೇಕ ಪ್ರಯೋಗಗಳನ್ನು ಹೇಳಿದ್ದರೂ ಅವನ್ನು ಪ್ರತಿಯೊಬ್ಬರೂ ಅನುಸರಿಸಲು ಸಾಧ್ಯವಾಗದು. ಕೆಲವು ಪ್ರಯೋಗಗಳು ಕೆಲವರಿಗೆ ಮೀಸಲು.

ಶಾಸ್ತ್ರಗಳನ್ನು ಅರಿತವನು ಮೊದಲು ತನ್ನ ಸ್ಥಿತಿ ಯಾವುದು ಎಂಬುದನ್ನು ಕುರಿತು ಚಿಂತಿಸುತ್ತಾನೆ. ನಂತರ ಧರ್ಮವನ್ನು ಕುರಿತು ಚಿಂತಿಸುತ್ತಾನೆ. ಧರ್ಮ ಮಾರ್ಗವನ್ನು ಮೀರಿದರೆ ಪಾಪಕೂಪದಲ್ಲಿ ಬೀಳಬಹುದು ಎಂದು ಅಂಜುತ್ತಾನೆ. ತರುವಾಯ ಅವನ ಲಕ್ಷ ಅರ್ಥದತ್ತ ಹೊರಳುತ್ತದೆ. ನಂತರ ಆತನ ದೃಷ್ಟಿ ಕಾಮದತ್ತ ಹೊರಳುತ್ತದೆ. ಈ ಎಲ್ಲ ವಿಚಾರ ಅರಿತವನು ಸಂಯಮಿಯಾಗುತ್ತಾನೆ. ಆತ ಎಂದೂ ವ್ಯಭಿಚಾರಿಯಾಗುವುದಿಲ್ಲ. . ಸೂತ್ರಕಾರನು ಕಾಮಶಾಸ್ತ್ರದ ಮಹತ್ವವನ್ನು ಹೀಗೆ ವಿವರಿಸಿದ್ದಾನೆ : 'ಯಾವ ವಿದ್ವಾಂಸನು ಕಾಮಶಾಸ್ತ್ರ ಕುಶಲಿಯಾಗಿ ಧರ್ಮ ಹಾಗೂ ಅರ್ಥಗಳ ಕಡೆಗೆ ಲಕ್ಷವಿಟ್ಟು ಉಚಿತವಾಗಿ ಪ್ರಯೋಗಗಳನ್ನು ನಡೆಸುತ್ತಾನೋ ಅವನಿಗೆ ಖಂಡಿತವಾಗಿಯೂ ಸಿದ್ಧಿಯಾಗುತ್ತದೆ'. ಅಂದರೆ ಕೆಲವರು ಭಾವಿಸಿರುವಂತೆ ಕಾಮ ಎನ್ನುವುದು ಧರ್ಮ ಅಥವಾ ಅರ್ಥಕ್ಕೆ ವಿರೋಧವಾಗಿಲ್ಲ. ಒಂದು ಮತ್ತೊಂದನ್ನು ಅತಿಕ್ರಮಿಸದಂತೆ ಎಲ್ಲವನ್ನೂ ಮನುಷ್ಯ ಅನುಭವಿಸಬಹುದು. ಕಾಮಶಾಸ್ತ್ರದ ಅಧ್ಯಯನದಿಂದ ಪುರುಷ ಇಲ್ಲವೇ ಸ್ತ್ರೀ ಮಿಲನ ಸುಖವನ್ನು ಅನುಭವಿಸಬಹುದು. ಆಶ್ರಮಗಳಲ್ಲಿ ಗೃಹಸ್ಥಾಶ್ರಮಕ್ಕೆ ವಿಶಿಷ್ಟ ಸ್ಥಾನವಿದೆ. ಗೃಹಸ್ಥ ಇಲ್ಲವೇ ಗೃಹಿಣಿ ಧರ್ಮವನ್ನು ಅನುಸರಿಸುತ್ತ ಸಂಪತ್ತನ್ನು ಗಳಿಸಿಕೊಳ್ಳಬಹುದು ಮತ್ತು ಕಾಮವನ್ನು ಅನುಭವಿಸಬಹುದು. ಲೈಂಗಿಕ ಶಿಕ್ಷಣ ಖಂಡಿತವಾಗಿಯೂ ಒಬ್ಬಾತ ಇಲ್ಲವೇ ಒಬ್ಬಾಕೆಯನ್ನು ಅತಿಗೆ ಹೋಗದಂತೆ ಕಾಪಾಡುವುದು. ಕಾಮಶಾಸ್ತ್ರ ಆ ಬಗ್ಗೆ ಎಚ್ಚರವನ್ನು ಕೊಡುತ್ತ, ತಮ್ಮಲ್ಲಿರುವ ನ್ಯೂನತೆಗಳನ್ನು ಹೋಗಲಾಡಿಸಿಕೊಂಡು ಮಿಲನದ ಸುಖವನ್ನು ಅನುಭವಿಸುವುದರ ಬಗ್ಗೆ ಮಾರ್ಗದರ್ಶನ ನೀಡುವುದು.

ನಮ್ಮ ಕನ್ನಡ ಸಾರಸ್ವತ ಲೋಕದಲ್ಲಿ 'ಮದನತಿಲಕ' ಎಂಬ ಗ್ರಂಥ ಕಂಡುಬರುತ್ತದೆ. ಅದನ್ನು ಚಂದ್ರರಾಜನೆಂಬ ಕವಿ (ಕ್ರಿ.ಶ. ೧೦೭೯) ಬರೆದಿದ್ದಾನೆ. ಈ ಕೃತಿ ಖಂಡಿತವಾಗಿಯೂ ಕಾಮಶಾಸ್ತ್ರ ಎಂದು ವಿದ್ವಾಂಸರುಗಳು ತಿಳಿಸಿದ್ದಾರೆ. ಆತ ತನ್ನ ಕೃತಿಯಲ್ಲಿ ಸಂಸ್ಕೃತದಲ್ಲಿ ಕಾಮಶಾಸ್ತ್ರ ಬರೆದಿರುವ ಅನೇಕ ಕವಿಗಳನ್ನು ನೆನೆಸಿಕೊಂಡಿದ್ದಾನೆ. ಪ್ರಾಯಃ ಇವನ ಕೃತಿಗೆ ವಾತ್ಸಾಯನನ 'ಕಾಮಸೂತ್ರ' ಆಧಾರವಾಗಿದ್ದಿರ ಬಹುದು ಎಂದು ಅನೇಕ ವಿದ್ವಾಂಸರುಗಳು ಭಾವಿಸಿದ್ದಾರೆ. ಹಾಗಿದ್ದರೂ ಆ ಎಲ್ಲ ಕೃತಿಗಳು ಇಂದು ನಮಗೆ ಲಭ್ಯವಾಗಿಲ್ಲ. ಆದರೆ ಅದೃಷ್ಟವಶಾತ್ ವಾತ್ಸಾಯನನ 'ಕಾಮಸೂತ್ರ' ನಮ್ಮಲ್ಲಿ ಇನ್ನೂ ಉಳಿದುಕೊಂಡಿರುವುದರಿಂದ ಅದರ ಅಧ್ಯಯನ ಪ್ರಸಕ್ತ ಸನ್ನಿವೇಶದಲ್ಲಿ ಅತ್ಯವಶ್ಯಕ. □

೨೫, ಶ್ರೀವರಸಿದ್ಧಿ ವಿನಾಯಕ ದೇವಸ್ಥಾನದ ರಸ್ತೆ, ಹನುಮಗಿರಿ, ಚಿಕ್ಕಕಲ್ಲಸಂದ್ರ, ಬೆಂಗಳೂರು ೫೬೦ ೦೬೧

೪

ಆರೋಗ್ಯ ಮನಸ್ಸು

ಎಂ.ಎಸ್. ತಿಮ್ಮಪ್ಪ

ಆರೋಗ್ಯ ಎಂದರೆ ಯಾವುದೇ ರೋಗ-ರುಜನೆ, ನೋವು ತಾಪಗಳಿಲ್ಲದೆ ಶರೀರದ ಎಲ್ಲಾ ಅಂಗಾಂಗಗಳ ವ್ಯಾಪಾರ, ಕ್ರಿಯೆ ಕ್ರಮಬದ್ಧವಾಗಿ ಸಾಮರಸ್ಯದಿಂದ ನಡೆಯುತ್ತಿರುವ ಸ್ಥಿತಿ ಎನ್ನಬಹುದು. ಇನ್ನೂ ಸರಳವಾಗಿ ಆರೋಗ್ಯ ಎಂದರೆ ಸುಖದಿಂದಿರುವುದು ಎನ್ನಬಹುದು. ಇಂತಹ ಆರೋಗ್ಯ ಸ್ಥಿತಿಗೆ ಸಾಮಾನ್ಯವಾಗಿ ಒಳ್ಳೆಯ ಗಾಳಿ, ಆಹಾರ, ವ್ಯಾಯಾಮ, ವಾತಾವರಣ, ಕೆಲಸ, ದೇಹದಾರ್ಢ್ಯವೇ ಮೊದಲಾದವುಗಳು ಕಾರಣವೆಂದು ಹೇಳುತ್ತೇವೆ. ಅನಾರೋಗ್ಯ ಅಥವಾ ದೈಹಿಕ ಕಾಯಿಲೆ ಆರೋಗ್ಯ ಸ್ಥಿತಿಗೆ ವಿರುದ್ಧವಾಗಿರುವುದು ಮತ್ತು ಅಂತಹ ಕಾಯಿಲೆಗಳು ಕ್ರಿಮಿಕೀಟಗಳಿಂದಲೂ, ಸೂಕ್ಷ್ಮಾಣುಗಳಿಂದಲೂ, ಜೀವಿಕ ಅಂಶಗಳ ನ್ಯೂನತೆಯಿಂದಲೂ ಆಘಾತ, ಪ್ರಯಾಸಗಳಿಂದಲೂ ಉಂಟಾಗುತ್ತವೆ ಎನ್ನುತ್ತೇವೆ. ಮನಸ್ಸು ಎಂದರೆ ನಮ್ಮ ಆಚಾರ-ವಿಚಾರಗಳು, ಬುದ್ಧಿ-ಭಾವನೆಗಳು, ನೋವು-ನಲಿವು, ಕ್ರಿಯ-ಸಾಮರ್ಥ್ಯ ಮುಂತಾದವುಗಳನ್ನು ಒಳಗೊಂಡಿರುತ್ತವೆ. ಮನಸ್ಸಿನ ಸ್ವರೂಪ, ಬೆಳವಣಿಗೆ ನಮ್ಮ ಮಾನವಿಕ, ಸಾಮಾಜಿಕ-ಸಾಂಸ್ಕೃತಿಕ ಸಂದರ್ಭ, ಅವುಗಳೊಡನೆ ಇರುವ ನಮ್ಮ ಸಂಬಂಧ ಹಾಗೂ ಇವುಗಳಿಂದ ನಮ್ಮ ನಮ್ಮ ಮೂಲಭೂತ ಬಯಕೆಗಳ ಪೂರೈಕೆಗಳನ್ನು ಅವಲಂಬಿಸಿರುತ್ತದೆ. ಈ ಮನಸ್ಸಿಗೂ, ದೈಹಿಕ ಆರೋಗ್ಯಕ್ಕೂ ಸಂಬಂಧವಿದೆಯೇ? ಇದಕ್ಕೆ ಸಾಮಾನ್ಯವಾದ ಒಂದು ಉತ್ತರ : ಇಲ್ಲ. ಮನಸ್ಸು-ದೇಹ ಬೇರೆ ಬೇರೆ; ಅವುಗಳ ಹುಟ್ಟು, ಬೆಳವಣಿಗೆ, ರೂಪ ಎಲ್ಲವೂ ಬೇರೆ ಬೇರೆ. ಮನಸ್ಸು ಸೂಕ್ಷ್ಮ, ಪರರಿಗಂತೂ ಅಗೋಚರ; ದೇಹ ಸ್ಥೂಲ, ದೃಢ, ಕಾಣುವಂತಹುದು; ಆದ್ದರಿಂದ ಅವುಗಳ ಸಂಬಂಧವೂ ಗೌಣ. ದೈಹಿಕ ಆರೋಗ್ಯದಲ್ಲಿ ಮನಸ್ಸಿನ ಪಾತ್ರವೂ ಅಷ್ಟಾಗಿ ಇಲ್ಲ. ಇಂತಹ ವಾದವನ್ನು ನಂಬದವರೂ ಕೂಡ ಕಾಯಿಲೆ ಬಂದಾಗ ಮನಸ್ಸಿನ ಪ್ರಭಾವದ ಕಡೆ ಗಮನ ಹರಿಸುವುದಿಲ್ಲ, ಅವರು ಕಾಯಿಲೆ ನಿವಾರಿಸಲು ಕೈಗೊಳ್ಳುವ ಕ್ರಮಗಳೆಲ್ಲಾ 'ದೈಹಿಕ ಕಾಯಿಲೆ ಜೈವಿಕ, ಭೌತಿಕ ಅಂಶಗಳಿಂದ ಬರುವುದು, ಅಂತಹ ಕ್ರಮಮಾತ್ರ ತೆಗೆದುಕೊಂಡರೆ ಸಾಕು' ಎಂಬಂತಿರುತ್ತದೆ. ಆದರೆ ಇಂತಹ ವಾದ ಎಷ್ಟೊಂದು ಸಾಧು?

ಮನಸ್ಸು-ದೇಹದ ಸಂಬಂಧ ಯಾವಾಗಲೂ ಅತಿ ನಿಕಟವಾಗಿಯೇ ಇರುತ್ತದೆ. ದಿನ ನಿತ್ಯದ ವ್ಯಾಪಾರವನ್ನೇ ತೆಗೆದುಕೊಳ್ಳೋಣ. ದುಃಖವಾದಾಗ ಕಣ್ಣೀರಿಡುವುದು ಮನಸ್ಥಿತಿಯಿಂದ ಉಂಟಾದ ದೈಹಿಕ ಕ್ರಿಯೆಯಲ್ಲವೇ? ಹಾಗೆಯೇ ದೇಹ ಸ್ಥಿತಿಯೂ ಮನೋವ್ಯಾಪಾರಗಳನ್ನು ನಿಯಂತ್ರಿಸಬಲ್ಲದು. ದೇಹಕ್ಕೆ ಆಯಾಸ, ಮಂಪರು ಬಂದಾಗ ಯಾವುದೇ ಮಾನಸಿಕ ಕ್ರಿಯೆಯೂ ಪ್ರಯಾಸವಾಗುತ್ತದೆ. ಮತ್ತು ದೇಹ ಸ್ಥಿತಿ ಅತಿ ಉದ್ರಿಕ್ತವಾದಾಗಲು ಅಥವಾ ಅತಿ ಕ್ಷೀಣ ವಾದಾಗಲೂ ಮಾನಸಿಕ ವ್ಯಾಪಾರದ ಸಫಲತೆ ಕುಂಠಿತವಾಗಿಯೋ ಅಥವಾ ಗೊಂದಲಮಯವಾಗಿಯೊ ಇರುತ್ತದೆ. ಈ ಎರಡು ಅತಿರೇಕ ಸ್ಥಿತಿಗೆ ಹೊರತಾದ, ಮಧ್ಯದ ಸ್ಥಿತಿಯಲ್ಲಿ ಮಾತ್ರ ಕಾರ್ಯದ ಉಗಮ, ಸಫಲತೆ ಸಾಧ್ಯ. ಸ್ವಾಭಾವಿಕವಾಗಿ ದಿನನಿತ್ಯದಲ್ಲಿ ದೇಹ-ಮನಸ್ಸು ಪರಸ್ಪರ ಬೆಸೆದುಕೊಂಡೇ ಕಾರ್ಯಮಾಡುತ್ತವೆ; ಹಾಗಿದ್ದಾಗಲೇ ಬದುಕು ಪ್ರಪಂಚದೊಡನೆ ಹೊಂದಾಣಿಕೆ ಸಾಧ್ಯ. ಭಯವಾದಾಗ ಹೃದಯ ಬಡಿತ ಏರಿ, ದೇಹ ಉದ್ರಿಕ್ತವಾಗಿದ್ದರೆ ಭಯವನ್ನು ಎದುರಿಸಲಿಕ್ಕೂ ಅಥವಾ ಅಂತಹ ಸನ್ನಿವೇಶಗಳಿಂದ ತಪ್ಪಿಸಿಕೊಳ್ಳಲಿಕ್ಕೂ ಅಸಾಧ್ಯವಾಗುತ್ತದೆ: ಹೃದಯ ಬಡಿತದಿಂದ ರಕ್ತ ಸಂಚಾರ ಹೆಚ್ಚಾಗಿ, ಅಡ್ರಿನಲ್ ದ್ರವಸ್ರವಿಸಿ, ಪಿತ್ತಕೋಶ ಪ್ರಚೋದನೆಯಿಂದ ಸಕ್ಕರೆ ಬಿಡುಗಡೆಯಾಗಿ ಹೆಚ್ಚು ಶಕ್ತಿ, ಸಾಮರ್ಥ್ಯ ಆ ಕ್ಷಣಕ್ಕಾದರೂ ದೊರಕುತ್ತವೆ. ಮನಸ್ಸಿಗೂ, ದೈಹಿಕ ಕ್ರಿಯೆಗೂ ಇಷ್ಟೊಂದು ನಿಕಟ ಸಂಪರ್ಕವಿರುವಾಗ ಮನಸ್ಸಿನ ಪ್ರಭಾವ ದೈಹಿಕ ಆರೋಗ್ಯದ ಮೇಲೆ ಇರದಿರಲು ಹೇಗೆ ಸಾಧ್ಯ?

ಮನಸ್ಸಿನ ಪ್ರಭಾವ ಸಾಮಾನ್ಯವಾಗಿ ಎಲ್ಲಾ ಕಾಯಿಲೆಗಳಲ್ಲಿ ಕಂಡುಬಂದರೂ, ಮುಖ್ಯವಾಗಿ, ಅಸ್ಪಷ್ಟವಾಗಿ ಅಂತಹ ಪ್ರಭಾವವನ್ನು ಆಧುನಿಕ ವೈದ್ಯಕೀಯ ಕಂಡು ಹಿಡಿದ ದೈಹಿಕ ಮನೋರೋಗಗಳಲ್ಲಿ (psycho-

physiological or psychosomatic disorders) ಕಾಣಬಹುದು. ಇವುಗಳಲ್ಲಿ ಮೂಲಭೂತವಾಗಿ ಮಾನಸಿಕ ಕಾರಣಗಳೇ ದೈಹಿಕ ರೋಗವನ್ನು ಉಂಟುಮಾಡಿರುತ್ತವೆ. ಇಂತಹ ಕಾಯಿಲೆಗಳು ಇತ್ತೀಚೆಗೆ ಹಲವಾರು ಕಂಡುಬಂದರೂ, ಮುಖ್ಯವಾಗಿ ಈ ನಾಲ್ಕು ಕಾಯಿಲೆ ಹೆಚ್ಚಾಗಿ ಮನೋವಿಜ್ಞಾನಿಗಳ, ವೈದ್ಯರ ಗಮನ ಸೆಳೆದಿವೆ: ಅವೆಂದರೆ, ಮೂಲ ಅತಿ ರಕ್ತ ಒತ್ತಡ (essential hypertension). ಮೈಗ್ರೇನ್ ತಲೆ ನೋವು (migraine headache), ಜಠರದ ಹುಣ್ಣು (peptic ulcer) ಮತ್ತು ಶ್ವಾಸಾಂಗ ಉಬ್ಬಸ (bronchial asthma).

ಮೂಲ ರಕ್ತ ಒತ್ತಡದಲ್ಲಿ ರೋಗಿಗೆ ದೀರ್ಘ ಕಾಲದಿಂದ ಅತಿ ಹೆಚ್ಚಾದ ರಕ್ತ ಒತ್ತಡವಿರುತ್ತದೆ. ಇದು ರಕ್ತನಾಳಗಳ ಸಂಕುಚಿತದಿಂದಲೂ ಮತ್ತು ರಕ್ತ ಒತ್ತಡವನ್ನು ಮಿದುಳಿಗೆ ತಿಳಿಸುವ ನರಗಳ ಕ್ರಿಯಾಹೀನತೆಯಿಂದಲೂ ಆಗಿರುತ್ತದೆ. ಆದರೆ ಹೀಗಾಗಲು ದೈಹಿಕವಾದ ಕಾರಣಗಳಾವುವೂ ಕಂಡುಬಂದಿಲ್ಲ. ಮಾನಸಿಕ ತುಮುಲ, ಘರ್ಷಣೆಯೊ, ಅಸಮರ್ಪಕ ಕಲಿಕೆಯಿಂದ ಆದ ಅಸಂಬದ್ಧ ಹೊಂದಾಣಿಕೆಯೊ ಇಂತಹ ಖಾಯಿಲೆಗಳ ಮೂಲ. ಹಲವು ತಜ್ಞರ ಪ್ರಕಾರ ಸದಾ ತಮ್ಮ ರೋಷ–ಕೋಪ ಭಾವನೆಗಳನ್ನು ದಮನ ಮಾಡುವುದರಿಂದ ಯಾವ ರೀತಿಯಲ್ಲೂ ವ್ಯಕ್ತಪಡಿಸಲಾರದೆ ಒಳಗೆ ಅದುಮಿಟ್ಟುಕೊಂಡರೆ ಈ ತರಹ ರಕ್ತ ಒತ್ತಡಕ್ಕೆ ಎಡೆಮಾಡಿಕೊಡುತ್ತದೆ.

ಮೈಗ್ರೇನ್‌ನಲ್ಲಿ ಅರೆ ತಲೆನೋವು, ಓಕರಿಕೆ–ವಾಂತಿ, ಕಣ್ಣು ಮೂಗುಗಳ ತೊಂದರೆಗಳ ತೋರಿಬರುತ್ತವೆ. ತಲೆಯಲ್ಲಿರುವ ರಕ್ತ ನಾಳಗಳು ಊದಿಕೊಂಡು, ಮಿದುಳಿನ ಕುಳಿಯಲ್ಲಿ ಜಲಾಂಶ ಹೆಚ್ಚಾಗಿ ಅದರಿಂದ ಮಿದುಳಿನಲ್ಲಿ ಉಂಟಾಗುವ ಒತ್ತಡವೇ ಇಂತಹ ತಲೆ ನೋವಿಗೆ ದಾರಿ. ಇಲ್ಲಿಯೂ ಯಾವುದೇ ಶಾರೀರಿಕ ದೋಷ ಪ್ರಧಾನವಲ್ಲ. ಇಂತಹ ಖಾಯಿಲೆ ಸಾಮಾನ್ಯವಾಗಿ ಮೇಧಾವಿಗಳು, ಆದರೆ ನಿಷ್ಠುರ ಸ್ವಭಾವದವರಲ್ಲಿ, ಸದಾ ಪರಿಪೂರ್ಣರಾಗಿರಬೇಕೆನ್ನುವವರಲ್ಲಿ, ಯಾರೂ ಸಾಮಾನ್ಯವಾಗಿ ಸಾಧಿಸಲಾರದಷ್ಟು ಹೆಚ್ಚು ಸಾಧನೆ ಮಾಡಬಯಸುವವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಅಲ್ಲದೆ ಇವರೂ ಕೂಡ ತಮ್ಮ ವಿರೋಧಿ ಭಾವಗಳನ್ನು ವ್ಯಕ್ತಪಡಿಸುವವರಲ್ಲ, ಅಂಥ ಭಾವನೆಗಳು ತಮ್ಮಲ್ಲಿವೆಯೆಂದೂ ಅರಿತಿರುವುದಿಲ್ಲ. ಅನುಭವದ ಯಾವ ಹಂತದಲ್ಲಿ ಈ ಕ್ರೋಧದ ದಮನವಾಗುತ್ತದೆ ಎಂಬುದೂ ಗಮನಿಸಬೇಕಾದ ಅಂಶ. ಯಾವುದೇ ಅನುಭವದ ವಿಧಾನದಲ್ಲಿ ವಸ್ತು–ಸಂಗತಿ–ವ್ಯಕ್ತಿಯ ವಿಚಾರ, ನಂತರ ಅವು ಮೂಡಿಸುವ ಭಾವ ಹಾಗೂ ತನ್ಮೂಲಕ ಏರ್ಪಡುವ ಕ್ರಿಯೆ ಇವು ಹಾಸುಹೊಕ್ಕಾಗಿರುತ್ತವೆ. ವಿಚಾರದ ಹಂತದಲ್ಲೇ ಕ್ರೋಧ ಉಂಟಾಗಿ ಅಲ್ಲೇ ಅದುಮಿ ಹೋಗುತ್ತಿದ್ದರೆ ತಲೆನೋವೂ, ವಿಚಾರ ರೋಷ ಭಾವ ಸ್ಫುರಿಸಿ, ಅನುಭವಿಸಿ ಆದರೆ ಅದು ಹೊರಗೆಡಹದೆ ಅಲ್ಲೇ ಅದುಮಿ ಹೋದರೆ ರಕ್ತ ಒತ್ತಡವೂ, ವಿಚಾರ ಭಾವನೆಯಾಗಿ ಅನುಭವಿಸುವ ಕ್ರಿಯೆಗೆ ಪರಿವರ್ತಿತವಾಗದ ಸಂದರ್ಭದಲ್ಲಿ ಅದುಮಿ ಹೋದರೆ, ಕ್ರಿಯೆಯಾಗಿ ಪರ್ಯವಸಾನವಾಗದಿದ್ದಾಗ ಸಂಧಿವಾತ ರೋಗವೂ (rheumatic arthritis) ಉಂಟಾಗಬಹುದು. ಅನುಭವ ಕ್ರಿಯೆಯಲ್ಲಿ ಪರ್ಯವಸಾನವಾದಾಗಲೇ ಆರೋಗ್ಯ

ಜಠರದ ಹುಣ್ಣು ಕೆಲವು ಬಾರಿ ರಕ್ತಸ್ರಾವಕ್ಕೂ ಎಡೆಕೊಡುತ್ತದೆ. ಇದು ಬಹಳ ಕಾಲದಿಂದ ಅತಿಯಾಗಿ ಸ್ರವಿಸುತ್ತಿರುವ ಜೀರ್ಣಕಾರಿ ಜಠರರಸ ಗ್ರಂಥಿಗಳಿಂದ ಉಂಟಾಗುತ್ತದೆ. ಸಾಮಾನ್ಯವಾಗಿ ಆಹಾರ ಜಠರಕ್ಕೆ ಸೇರಿದಾಗ ಗ್ರಂಥಿ ಸ್ರವಿಸಿ ಆಹಾರ ಜೀರ್ಣವಾಗಲು ಸಹಾಯ ಮಾಡುತ್ತದೆ. ಆದರೆ ಈ ಖಾಯಿಲೆಯವರಲ್ಲಿ ಆಹಾರ ಜಠರದಲ್ಲಿ ಇರಲಿ, ಇಲ್ಲದಿರಲಿ ಗ್ರಂಥಿ ಮಾತ್ರ ಸ್ರವಿಸುತ್ತಲೇ ಇರುತ್ತದೆ. ಈ ಅತಿಸ್ರಾವ ಆಹಾರ ವಿಲ್ಲದಿದ್ದಾಗ ಜಠರದ ಗೋಡೆಯನ್ನೇ ತಿಂದು ಜೀರ್ಣ ಮಾಡಿಬಿಡುತ್ತದೆ: ಇಂತಹ ಖಾಯಿಲೆ ಕೆಲವೊಂದು ವಿಶಿಷ್ಟ ಮಾನಸಿಕ ಲಕ್ಷಣವಿರುವವರಲ್ಲಿ ಹೆಚ್ಚಾಗಿ ಕಂಡುಬರುತ್ತದೆಂದೂ ಹಲವರ ಮತ. ಇವರು ತೋರಿಕೆಗೆ ಸ್ವಾವಲಂಬನ, ಸ್ವಪ್ರತಿಷ್ಠಿತರಂತೆ ಕಂಡರೂ ಆಂತರ್ಯದಲ್ಲಿ ಪ್ರಬಲವಾದ ಪರಾಶ್ರಯದ ಅಗತ್ಯ ಹೊಂದಿರುವವರಾಗಿರುತ್ತಾರೆ. ದೀರ್ಘ ಕಾಲದಿಂದ ಹುದುಗಿಟ್ಟ ದಿಗಿಲು, ಅಭದ್ರತೆಗಳನ್ನೂ ಇವರಲ್ಲಿ ಕಾಣಬಹುದು.

ಉಬ್ಬಸ ರೋಗದಲ್ಲಿ ಶ್ವಾಸಾಂಗದ ವ್ಯಾಸ ಸಂಕುಚಿತವಾಗಿ ಉಸಿರಾಟಕ್ಕೆ ತೊಂದರೆ, ಗುರುಗುಟ್ಟುವ ಸದ್ದಿನ ಉಸಿರಾಟ, ಗಾಳಿಗಾಗಿ ಮೇಲುಸಿರು, ಉಸಿರು ಕಟ್ಟಿದಂತಾಗುವುದು, ಇವೇ ಮೊದಲಾದ ಚಿಹ್ನೆಗಳಿರುತ್ತವೆ. ಇಂಥವರು ಮಾತ್ರ ವಾತ್ಸಲ್ಯಕ್ಕಾಗಿ ತೀವ್ರವಾಗಿರುವ ತಮ್ಮ ಹಂಬಲವನ್ನು ಅದುಮಿಟ್ಟಿರುತ್ತಾರೆ. ಆ ಅಳು

ಉಬ್ಬಸವಾಗಿ ಹೊರಬಂದಂತೆ ಕಾಣುತ್ತದೆ. ಎಲ್ಲಿ ಜನ ತಮ್ಮ ಕೈಬಿಡುತ್ತಾರೊ, ತಿರಸ್ಕರಿಸುತ್ತಾರೊ ಎನ್ನುವ ಭಯವೂ ಇವರನ್ನು ಕಾಡುತ್ತಿರುತ್ತದೆ.

ಈ ಎಲ್ಲ ಕಾಯಿಲೆಗಳಲ್ಲೂ ಒಂದು ಕಡೆ ಮಾನಸ ಬೆಳವಣಿಗೆಯಲ್ಲಿ ವ್ಯಕ್ತಿ ವಿಕಾಸದಲ್ಲಿ ಬರುವ ಸಂಕಷ್ಟಗಳು ಕಾರಣವಾದರೆ ಇನ್ನೊಂದು ಕಡೆ ಹುಟ್ಟಿನಿಂದ ಬಂದ ಶಾರೀರಿಕ ದುರ್ಬಲತೆಯೂ ಸೇರಿಕೊಳ್ಳುತ್ತದೆ. ದೀರ್ಘವಾದ ಮಾನಸಿಕ ಒತ್ತಡದ, ಘರ್ಷಣೆಯ ಅನುಭವದಿಂದ ಹುದುಗಿದ್ದ ಶಾರೀರಿಕ ದೌರ್ಬಲ್ಯ ಹೊರಹೊಮ್ಮಿ ಆ ಜಾಗದಲ್ಲಿ ರೋಗ ಕಾಣಿಸಿಕೊಳ್ಳುತ್ತದೆ.

ಈ ರೀತಿ ಮಾನಸಿಕ–ದೈಹಿಕ ಕ್ರಿಯೆಗಳ ಪರಸ್ಪರ ಸಂಪರ್ಕದಿಂದ ಉಂಟಾಗುವ ಖಾಯಿಲೆಗೆ ಶ್ರೀಮತಿ ವಂದನಾ ಒಂದು ಉತ್ತಮ ನಿದರ್ಶನ:

ವಂದನಾ ಅತಿ ಚೂಟಿಯಾದ ಬುದ್ಧಿವಂತ ಹುಡುಗಿ. ಐದು ಮಕ್ಕಳ ಸಂಸಾರದಲ್ಲಿ ಇವಳು ಮಧ್ಯದವಳು. ಬಾಲ್ಯದಲ್ಲಿ ಆರೋಗ್ಯವಾಗಿಯೇ ಇದ್ದಳೂ. ಶೈಶವದಲ್ಲಿ ಹಲವು ಹನ್ನೊಂದು ಕೆಲಸ ಹಚ್ಚಿಕೊಂಡು ಕಾಲಕ್ಕೆ ಸರಿಯಾಗಿ ಮುಗಿಸುವ ಅವಸರದಲ್ಲೇ ಸದಾ ತೊಡಗಿರುತ್ತಿದ್ದಳು. ಅವಳ ಮೊಟ್ಟ ಮೊದಲ ಮನೋದೈಹಿಕ ಖಾಯಿಲೆ ಬಂದಾಗ ಆಕೆಗೆ ೧೫ ವರ್ಷ. ಆಗ ತಾನೆ ಅವಳ ತಂದೆ ತೀರಿಕೊಂಡಿದ್ದರು. ಸಂಸಾರ ಛಿದ್ರ, ಬಡತನ; ಅಲ್ಲದೆ ತಾಯಿ ಸಾವಿನ ದವಡೆಯಲ್ಲಿದ್ದರು. ಪೇಟೆಗೆ ಹೋಗುತ್ತಿದ್ದಾಗ ವಂದನಾ ದಾರಿಯಲ್ಲಿ ತಲೆ ಸುತ್ತು ಬಂದು, ಮೈಯಲ್ಲೆಲ್ಲಾ ಬೊಕ್ಕೆ ಉರಿಬಂದು ಕೆಲವು ನಿಮಿಷಗಳ ನಂತರ ಪ್ರಜ್ಞೆ ತಪ್ಪಿ ಬಿದ್ದಳು. ಹತ್ತಿರವಿದ್ದ ಕ್ಲಿನಿಕ್‌ನಲ್ಲಿ ಸೌಮ್ಯ ಸಾಂತ್ವನ ಔಷಧಗಳಿಂದಲೂ, ಹಾಸಿಗೆ–ವಿಶ್ರಾಂತಿಯಿಂದಲೂ ಇರಿಸಿ ಚಿಕಿತ್ಸೆಮಾಡಲಾಯಿತು. ನಂತರ ೨–೩ ತಿಂಗಳವರೆಗೂ ಹಲವು ಬಾರಿ ದಿಗಿಲಿನಿಂದ ಮತ್ತು ಉಸಿರಾಡಲು ಸಾಧ್ಯವಿಲ್ಲವೆಂಬ ಅಥವಾ ತಾನು ಸಾಯುತ್ತಿದ್ದೇನೆ ಎಂಬ ಭಾವನೆಗಳಿಂದ ನರಳುತ್ತಿದ್ದಳು.

ಮುಂದೆ, ಅವಳು ೨೭ನೇ ವರ್ಷದವರೆವಿಗೂ ಆರಾಮವಾಗಿಯೇ ಇದ್ದಳು. ಎಂದೋ ಒಮ್ಮೊಮ್ಮೆ ಖಿನ್ನ ಮನಃಸ್ಥಿತಿ ಆವರಿಸುತ್ತಿತ್ತು–ಅಷ್ಟೆ. ೨೭ನೇ ವಯಸ್ಸಿನಲ್ಲಿ ಅವಳ ಮೈಗ್ರೇನ್ ಪ್ರಾರಂಭವಾಗಿ ವಿಪರೀತ ಮಿಡಿಯುವ ತಲೆನೋವು ಮತ್ತು ಓಕರಿಕೆಯಿಂದ ನರಳಿದಳು. ಹೊರ ಊರಿನಲ್ಲಿ ಇರಲು ವ್ಯವಸ್ಥೆ ಮಾಡಿಕೊಳ್ಳುತ್ತಿರುವಾಗ ಇದ್ದಕ್ಕಿದ್ದಂತೆ ತಲೆನೋವು ಕಾಣಿಸಿಕೊಂಡಿತು. ವರ್ಷವಿಡೀ ತಲೆನೋವು ಹೆಚ್ಚಾಗಿ, ಪದೇ ಪದೇ ಬರುತ್ತಲೇ ಇತ್ತು. ಆಗ ಆಕೆ ತನ್ನ ದೀರ್ಘಕಾಲದ ಬಿರುಸಿನ ಪ್ರೇಮ ಪ್ರಕರಣವೊಂದನ್ನು ಮುರಿಯುವುದರಲ್ಲಿಯೂ, ಅತಿ ಒತ್ತಡದ ಸಂಪಾದಕೀಯ ಕೆಲಸದಲ್ಲೂ ನಿರತಳಾಗಿದ್ದಳು. ತಲೆನೋವು ಮೊದಮೊದಲ ವಾರಾಂತ್ಯದಲ್ಲಿ ಮಾತ್ರ ಬರುತ್ತಿದ್ದುದು ನಂತರ ಶುಕ್ರವಾರ, ಗುರುವಾರಗಳಲ್ಲೇ ಬರಲಾರಂಭಿಸಿತು. ಸಾಮಾನ್ಯವಾಗಿ ಬಳಸುವ ರಕ್ತನಾಳ–ಸಂಕುಚನ ಔಷಧಗಳಿಂದ ಚಿಕಿತ್ಸೆಮಾಡಿದಾಗ ಹಲವೊಮ್ಮೆ ನೋವು ಮೊಟಕಾಗುತ್ತಿತ್ತೇ ವಿನಾ ನೋವು ಬರುವುದನ್ನು ತಡೆಯಲಾಗಲಿಲ್ಲ. ಆ ಕೆಲಸ ಬಿಟ್ಟು ಬೇರೆ ನಗರದಲ್ಲಿ ವಾಸಿಸತೊಡಗಿದಾಗ ತಲೆನೋವು ಕಡಿಮೆಯಾಯಿತು. ಇಲ್ಲಿ ಆಕೆಗೆ ಕೆಲಸಸಿಗುವುದೇ ಕಷ್ಟವಾಯಿತು. ಅಲ್ಲಿ ಹೆಂಗಸರಿಗೆ ಉತ್ತಮ ಕೆಲಸ ಕೊಡುತ್ತಿರಲಿಲ್ಲ. ಕಡಿಮೆ ದರ್ಜೆ ಕೆಲಸಕ್ಕೆ ಆಕೆಯ ಅರ್ಹತೆ ಅತಿ ಹೆಚ್ಚಿನದು ಎನ್ನುತ್ತಿದ್ದರು. ಆಗಾಗ ಖಿನ್ನಳಾಗಿ, ಸುಸ್ತಾದಮತೆ ಇರುತ್ತಿದ್ದಳು. ಕೆಲಸವಿಲ್ಲದೆ ೬ ತಿಂಗಳು ಕಳೆದ ನಂತರ, ವಾರಕ್ಕೆ ೧೦೦ ಘಂಟೆ ಕಾರ್ಯವಿರುವ ಎರಡು ಕೆಲಸ ತೆಗೆದುಕೊಂಡಳು. ಒಂದರಲ್ಲಿ ಆಗಾಗ ಯಜಮಾನನಲ್ಲಿ ವಾಗ್ಯುದ್ಧ ನಡೆಸಬೇಕಾಗುತ್ತಿತ್ತು. ಆತನಿಗೆ ಹೆಂಗಸರು ಕೆಲಸ ಮಾಡುವುದರಲ್ಲೇ ನಂಬಿಕೆಯಿರಲಿಲ್ಲ. ಒಮ್ಮೊಮ್ಮೆ ತಲೆನೋವು ಕಾಣಿಸಿಕೊಳ್ಳುತ್ತಿತ್ತು. ಆದರೆ ಅದಕ್ಕಿಂತಲೂ ಮಿಗಿಲಾಗಿ ತುಂಬಾ ಸುಸ್ತಾಗುತ್ತಿದ್ದಳು. ಅತಿ ಕೆಲಸದಿಂದ ಈ ಸುಸ್ತು ಎಂದುಕೊಂಡು ಯಾವ ವೈದ್ಯರನ್ನೂ ಕಾಣಲಿಲ್ಲ. ಒಮ್ಮೆ ಕೆಲಸದಲ್ಲಿದ್ದಾಗ ಪ್ರಜ್ಞೆ–ತಪ್ಪಿತು. ಪರೀಕ್ಷಿಸಿದಾಗ ಜಠರದ ಹುಣ್ಣಿನಿಂದ ರಕ್ತಸ್ರಾವವಾಗುವುದು ಕಂಡುಬಂತು. ಈ ಸ್ರಾವ ಕೆಲವು ತಿಂಗಳಿಂದಲೇ ಇದ್ದಿರಬೇಕು. ಅವಳ ಆ ಸುಸ್ತು ಅತಿ ಪ್ರಯಾಸದ ಕೆಲಸ ಮತ್ತು ರಕ್ತ ಹೀನತೆಯಿಂದ ಆಗಿತ್ತು. ೧೨ ದಿನ ಆಸ್ಪತ್ರೆ; ೬ ಪಿಂಟ್ಸ್ ರಕ್ತ ತೆಗೆದುಕೊಳ್ಳಬೇಕಾಯಿತು. ನಿದ್ರೆ ಗುಳಿಗೆ, ಸಾದಾ ಆಹಾರ, ಆಂಟಾಸಿಡ್ಸ್ ಕೊಡುವುದರ ಜೊತೆಗೆ ವೈದ್ಯರು ಆ ಅತಿಪ್ರಯಾಸದ ಕೆಲಸ ಬಿಡಲೇ ಬೇಕೆಂದೂ ಹೇಳಿದರು.

ಕೆಲಸವೇನೋ ಬದಲಾಯಿಸಿದಳು: ಆದರೆ ಜಠರ ಹುಣ್ಣಿನ ದಿನಗಳಲ್ಲಿ ಮಾಯವಾಗಿದ್ದ ತಲೆನೋವು ಪುನಃ ಆಗಾಗ ಕಾಣಿಸಿಕೊಳ್ಳತೊಡಗಿತು: ಅದೂ ಅವಳ ಮುಟ್ಟಿನ ಸಮಯದಲ್ಲಿ ಅತಿ ಹೆಚ್ಚಾಗಿ ತೋರಿಬರುತ್ತಿತ್ತು.

ಎರಡು ವರ್ಷ ಪಾಠ ಹೇಳುವ ಕೆಲಸ ಮಾಡಿದ ನಂತರ ಪಿಹೆಚ್‌ಡಿ ಮಾಡಲು ನಿರ್ಧರಿಸಿದಳು. ಈ ಉನ್ನತ ಶಿಕ್ಷಣದ ಒತ್ತಡದಿಂದ ಈ ಉದ್ವೇಗದ, ಶ್ರೇಷ್ಠ ಸಾಧನೆಯ ಹಂಬಲದ ವಂದನಾ ಇನ್ನೊಂದು ಮನೋದೈಹಿಕ ರೋಗ ಅಂಟಿಸಿಕೊಂಡಳು. ಈ ಶಿಕ್ಷಣದ ನಾಲ್ಕು ವರ್ಷಗಳಿಂದ ವಿಪರೀತ ತುರಿಕೆಯ ಚರ್ಮ-ಬೊಕ್ಕೆಗಳನ್ನೂ ಹೃದಯ ಬಡಿತದ ಉದ್ವೇಗ ವೈಪರೀತ್ಯವನ್ನೂ ಮತ್ತು ಅತಿ ರಕ್ತಒತ್ತಡವನ್ನೂ ಅನುಭವಿಸಿದಳು. ಹೃದಯದ ಅತಿ ಬಡಿತ ಅವಳ ಪರೀಕ್ಷೆ ಸಮಯದಲ್ಲಿ, ಅವಳು ಕೆಲಸಕ್ಕಾಗಿ ಇಂಟರ್‌ವ್ಯೂಗೆ ಹೋದಾಗ ಅತಿಯಾಗಿತ್ತು. ತಂದೆ-ತಾಯಿಗಳೂ ಹೃದಯಾಘಾತದಿಂದಲೇ ಸತ್ತಿದ್ದರಿಂದ ಇವಳಿಗೆ ಅತಿಯಾಗಿಯೇ ಗಾಬರಿಯಾಗಿತ್ತು; ಆದರೆ ಪರೀಕ್ಷಿಸಿದಾಗ ಹೃದಯವೇನೋ ಸರಿಯಾಗಿದ್ದು-ಅತಿರಕ್ತ ಒತ್ತಡ ಮಾತ್ರ ಇದ್ದಿತು. ಶಿಕ್ಷಣ ಮುಗಿದಾಗ ಅವಳ ಈ ಎಲ್ಲಾ ಚಿಹ್ನೆಗಳೂ ವಾಸಿಯಾದವು. ಇದು ವಂದನಾಳ ಬವಣೆ. ಅವಳ ವ್ಯಕ್ತಿತ್ವ ಮತ್ತು ಜನರೊಡನೆಯ ಸಂಬಂಧ, ಕೆಲಸ ಹಾಗೂ ಸಾಮಾಜಿಕ ಸಂದರ್ಭ ಎಲ್ಲವೂ ಒಡಗೂಡಿ ಅವಳ ಮನೋದೈಹಿಕ ರೋಗಗಳಿಗೆ ಕಾರಣವಾದವು.

ಇತ್ತೀಚೆಗೆ ಪ್ರಾಣಿಗಳ ಮೇಲ ನಡೆಸಿದ ನೀಲ್ ಮಿಲ್ಲರ್‌ನ ಪ್ರಯೋಗಗಳಿಂದ ದೈಹಿಕ ಆರೋಗ್ಯದಲ್ಲಿ ಮನಸ್ಸಿನ ಪಾತ್ರದ ಮತ್ತೊಂದು ಆಯಾಮ ಕಾಣಬಹುದು. 'ಮನಸ್ಸು ಎಲ್ಲಾ ಶಾರೀರಿಕ ಕ್ರಿಯೆಗಳನ್ನೂ ನಿಯಂತ್ರಿಸಬಲ್ಲದು' ಎಂಬುದೇ ಈತನ ಸಂಶೋಧನೆಯ ಸಾರಾಂಶ (ತಂತ್ರ, ಹಠಯೋಗ ನೆನಪಾಗುವುದಲ್ಲವೆ?). ಉದಾ ಹರಣೆಗೆ ಹೃದಯ ಬಡಿತವನ್ನೇ ತೆಗೆದುಕೊಳ್ಳೋಣ. ಇದು ಸ್ವಾಭಾವಿಕವಾಗಿ ಪ್ರಕೃತಿದತ್ತವಾದದ್ದಷ್ಟೆ. ಮಿಲ್ಲರ್‌ನ ಪ್ರಯೋಗದಲ್ಲಿ ಒಂದು ಗುಂಪಿನ ಇಲಿಗೆ ಹೃದಯ ಮಿಡಿತ ಹೆಚ್ಚಾದಾಗ ಆ ಇಲಿಗೆ ಪ್ರಬಲನೆ (ಪ್ರತಿಫಲ) ಕೊಡುತ್ತಾನೆ. ಮಿದುಳಿನ ಒಂದು ಭಾಗ ಪ್ರಚೋದಿಸಿದರೆ ಅದು ಇಲಿಗೆ ತುಂಬಾ ಅಪೇಕ್ಷಣೀಯವಾಗಿರುತ್ತದೆಂದೂ, ಅಂತಹ ಪ್ರಚೋದನೆಯಾದಾಗ ಇಲಿ ಸದಾ ಅದನ್ನೇ ಅರಸುತ್ತಿರುತ್ತದೆಂದೂ ಆಗಲೇ ಕಂಡುಹಿಡಿದಿದ್ದರಿಂದ, ಮಿದುಳಿನ ಆ ಪ್ರಚೋದನೆಯನ್ನೇ ಪ್ರಬಲನೆಗಾಗಿ ತೆಗೆದುಕೊಂಡ. ಅಂದರೆ ಹೃದಯ ಮಿಡಿತ ಹೆಚ್ಚಾದಾಗಲೆಲ್ಲಾ ಇಲಿಯ ಮಿದುಳನ್ನು ಪ್ರಚೋದಿಸಿ ಅದಕ್ಕೆ "ಖುಷಿ' ಕೊಡಲಾಯಿತು. ಕ್ರಮೇಣ ಅತಿ ಹೃದಯ ಬಡಿತದ ಪರಿಣಾಮ ಅತಿ ಖುಷಿ ಎನ್ನುವ ಸಂಬಂಧ ಬೇರೂರಿ ಇಲಿಯಲ್ಲಿ ಸದಾ ಅತಿ ಬಡಿತವೇ ಹೃದಯದ 'ಸ್ವಭಾವ'ವಾಗಿಬಿಟ್ಟಿತು. ಇದರ ಪರಿಣಾಮ ಅತಿ ರಕ್ತಒತ್ತಡವಲ್ಲದೆ ಇನ್ನೇನು? ಹಾಗೆಯೇ ಇಲಿಯ ಹೃದಯ ಬಡಿತ ಅತಿ ಕಡಿಮೆಯಾದಾಗ ಹಿಂದೆ ಹೇಳಿದ ರೀತಿಯಲ್ಲೇ ಅದನ್ನು ಪ್ರೋತ್ಸಾಹಿಸಿದರು. ಕ್ರಮೇಣ ಇಲಿಗಳ ಹೃದಯ ಬಡಿತ ಎಷ್ಟೊಂದು ಕಡಿಮೆಯಾಯಿತೆಂದರೆ ಅವು ಯೋಗಿಗಳಂತೆ ಶಾಂತ ಸ್ಥಿತಿಯಲ್ಲಿರುತ್ತಿದ್ದವು. ಇದರಿಂದ ಹೃದಯ ಬಡಿತದ ಗತಿ ಮಾನಸಿಕ ಸ್ಥಿತಿಯಿಂದ ನಿಯಂತ್ರಿತವಾಗಬಲ್ಲದು ಎಂಬುದು ಸ್ಪಷ್ಟವಾಗುತ್ತದೆ. ಮಗು ತನ್ನ ವಾತಾವರಣದಲ್ಲಿ ತನ್ನ ಹೃದಯ ಮಿಡಿತ ಹೆಚ್ಚು ಮಾಡಿಕೊಂಡಾಗಲೇ (ಅಂದರೆ ಅತ್ತು ಕಿರಿಚಿಕೊಂಡಾಗಲೋ, ಕೋಪ-ರಂಪಾಟದಿಂದಲೋ) ಆತನಿಗೆ ಬೇಕಾದದ್ದು ಸಿಗುತ್ತದೆ ಎಂತಾದರೆ ಕ್ರಮೇಣ ಆತನ ಹೃದಯ ಮಿಡಿತದ ಗತಿ ಸದಾ ಹೆಚ್ಚಾಗಿಯೇ ಇರತೊಡಗುತ್ತದೆ. ಇವನು ಮುಂದೆ ಹೃದ್ರೋಗಿಯಾದರೆ ಯಾವ ಅಚ್ಚರಿಯೂ ಆಗಲಾರದಷ್ಟೆ.

ಮಿಲ್ಲರ್‌ನ ಇಂತಹವೇ ಹಲವು ಪ್ರಯೋಗಗಳ ಆಧಾರದ ಮೇಲೆ biofeedback ಎಂಬ ಚಿಕಿತ್ಸಾ ಕ್ರಮ ರೂಪುಗೊಂಡಿದೆ. ಉದಾಹರಣೆಗೆ, ತಲೆನೋವಿರುವವರಲ್ಲಿ ಮಿದುಳಿನ ಆಲ್ಫಾ ಅಲೆಗಳು ಕಡಿಮೆಯಾಗಿರುತ್ತವೆ ಎಂದು ಕಂಡುಬಂದಿದೆ. ಈ ಆಲ್ಫಾ ಅಲೆ ಯಾವಾಗಲೂ ದೇಹ-ಮನಸ್ಸು ಎಚ್ಚರವಾಗಿದ್ದು ಶಾಂತ ಹಾಗೂ ಸಡಿಲ ಸ್ಥಿತಿಯಲ್ಲಿದ್ದಾಗ ಹೆಚ್ಚಾಗಿರುತ್ತದೆ. ಮಿದುಳಿಗೆ ಅಂಟಿಸಿದ E.E.G. ಯಿಂದ ರೋಗಿಗೆ ಆತನ ಮಿದುಳಿನಲ್ಲಿ ಆಲ್ಫ ಯಾವಾಗ ಬರುತ್ತಿದೆ, ಯಾವಾಗ ಬರುತ್ತಿಲ್ಲ ಎಂಬುದನ್ನು ತೋರಿಸಿಕೊಡಲಾಗುವುದು. ಆಗ ಆಲ್ಫಾ ಅಲೆ ಬಂದಾಗಲೆಲ್ಲಾ ತನ್ನೊಳಗೆ ಶಾಂತ ಸ್ಥಿತಿ ಇರುವುದರ ಅರಿವೂ, ಆಲ್ಫಾ ಇಲ್ಲದಿದ್ದಾಗ ಇರುವ ಉದ್ವೇಗ ಚಿತ್ತದ ಅರಿವೂ ಉಂಟಾಗುತ್ತದೆ. ಕ್ರಮೇಣ, ಆಲ್ಫಾ ಅಲೆ ಬಂದಾಗ ಹಿತಕರವಾದ ಅನುಭವವೂ ಆಗಿದ್ದ ರಿಂದ ಆಲ್ಫಾ ಅಲೆಗಳೇ ಹೆಚ್ಚು ಹೆಚ್ಚಾಗಿ ಮೂಡಿಬರಲು ಆ ಅರಿವು ಸಹಾಯ ಮಾಡುತ್ತದೆ; ಆಗ ಖಾಯಿಲೆಯೂ ವಾಸಿಯಾದಂತೆ. ಇಂತಹುದೇ ವಿಧಾನಗಳನ್ನು ಹೃದಯ ಬಡಿತ, ಸ್ನಾಯು ಸೆಳೆತ ಇತ್ಯಾದಿ ಶಾರೀರಕ ಕ್ರಿಯೆಗಳಿಗೂ ಅನ್ವಯಿಸಿ ಅವುಗಳನ್ನು ಆರೋಗ್ಯದ ದಿಸೆಗೆ ನಿಯಂತ್ರಿಸಬಹುದು. ರೋಗಿ ಯಲ್ಲದವರೂ biofeedback ಉಪಯೋಗಿಸಿಕೊಂಡು ತಮ್ಮೆಲ್ಲ ಶಾರೀರಕ ಕ್ರಿಯೆಗಳನ್ನು ಇನ್ನೂ ಉತ್ತಮ ಸ್ಥಿತಿಗೆ ಕೊಂಡೊಯ್ದು ಸಮಸ್ಥಿತಿಯ ದೇಹ, ಸಮರಸದ ಮನಸ್ಸು, ಬಾಳ್ವೆ

ರೂಪಿಸಿಕೊಳ್ಳಬಹುದು. ಅದಕ್ಕೇ ಒಮ್ಮೊಮ್ಮೆ ಅಮೆರಿಕನ್ನರು beofeedbackನ್ನು ಎಲೆಕ್ಟ್ರಾನಿಕ್ ಯೋಗ, ದಿಢೀರ್ ಯೋಗ ಎಂದು ಕರೆಯುವುದು. ಅದೇನೇ ಇರಲಿ ಮನಸ್ಸು ದೇಹಗಳ ಪರಸ್ಪರ ಅನ್ಯೋನ್ಯತೆ, ಅದನ್ನು ಕುದುರಿಸಿಕೊಂಡು ಸ್ವಾಸ್ಥ್ಯ ಹಾಗೂ ಸಫಲತೆ ಪಡೆಯಬಹುದು ಎಂಬುದು ಇಂತಹ ಪ್ರಯೋಗಗಳಿಂದ ಸ್ಪಷ್ಟವಾಗಿದೆ.

ಸಂದರ್ಭ–ಸನ್ನಿವೇಶಗಳು, ಸಂಬಂಧ–ನಡವಳಿಕೆಗಳು, ಗತಿಸಿದ ಕಾಲದಿಂದ ರೂಢಿಯಾದ ಅಭ್ಯಾಸ–ಹವ್ಯಾಸಗಳು ಹಾಗೂ ಆಸೆ–ನಿರೀಕ್ಷೆಗಳು ಮನಸ್ಸನ್ನು ತಳ್ಳಣಗೊಳಿಸಿ ದೈಹಿಕ ಪರಿಣಾಮವಾದಾಗ ಅಂತಹ ಭಾವನೆ, ನಡವಳಿಕೆ, ಸಂಬಂಧಗಳ ಶೋಧನೆ, ತಿಳುವಳಿಕೆ ಮತ್ತು ಹೊಸ ರೂಢಿಗಳನ್ನು ಅಳವಡಿಸಿ ಖಾಯಿಲೆ ಶಮನ ಮಾಡುವುದೇ ಈಗಿರುವ ಚಿಕಿತ್ಸಾ ವಿಧಾನಗಳು. ಆದರೆ ಎಲ್ಲ ಸ್ಥಿತಿ–ಪರಿಸ್ಥಿತಿ, ವ್ಯಕ್ತಿಗತ ಆಚಾರ–ವಿಚಾರಗಳೆಲ್ಲವನ್ನೂ ಕಳಚಿ ಅದರಾಚೆ ನಮ್ಮಗಳಿಗೆ, ಸಂಪತ್ತು, ಯಶಸ್ಸು, ಸ್ಥಾನ–ಮಾನ–ಅಂತಸ್ತುಗಳು, ಸಂಬಂಧಗಳು, ಬುದ್ಧಿ–ಭಾವಗಳು ಇವೆಲ್ಲದರ ಆಚೆ ಆದರೆ ನಮ್ಮೊಳಗೆ ಅವೆಲ್ಲವುದರ ಜೊತೆಗೇ ಆಳದಲ್ಲಿ ಹುದುಗಿರುವ ಅಂತಃಸತ್ವ ಒಂದನ್ನೂ ಈ ವಿಜ್ಞಾನ ಈಗ ಗುರುತಿಸಿದೆ. ಅದು ನಮ್ಮೆಲ್ಲರ ತೋರುಗಾಗೇನೆ, ದೈನದಂದಿನ ವ್ಯವಹಾರದ ಸತ್ಯಗಿಂತ ಸೂಕ್ಷ್ಮ ಗಟ್ಟಿ ಹಾಗೂ ವಿಸ್ತಾರಉಳ್ಳದಾಗಿದೆ. ಅದಕ್ಕೆ ನಮ್ಮನ್ನು ಜೋಡಿಸಿಕೊಂಡಾಗ ತಕ್ಷಣ ಮನ–ದೇಹದ ಬಿಗು, ಸೆಳೆತ ನಶಿಸಿ, ಶಾಂತಿ, ತೃಪ್ತಿ, ಸಮೃದ್ಧಿ "ಅಕಾರಣ"ವಾಗಿ ನಮ್ಮ ಅಂತರಂಗದಲ್ಲಿ ಇದ್ದಕ್ಕಿದ್ದಂತೇ ಗೋಚರವಾಗುವುದನ್ನು ಮನೋಪಚಾರಿಗಳು ಕಂಡುಕೊಳ್ಳುತ್ತಿದ್ದಾರೆ. ಈ ದಿಸೆಯಲ್ಲಿ ಇನ್ನು ಹೆಚ್ಚು ಸಂಗ್ರಹ ಸಂಶೋಧನೆ ಅಗತ್ಯವಾಗಿದೆ. ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಆಧ್ಯಾತ್ಮದ ಎಲ್ಲತಿರುಳನ್ನು ಆಯ್ದು ಸ್ವಂತ ಅನುಭವದ ಮುಸೆತದಿಂದ ಹೊರಬಂದ ಅನೇಕ ಕೃತಿಗಳು ಇಂತಹ ಸಂಶೋಧನೆಗೆ ಬುನಾದಿ ಆಗಬಲ್ಲದು; ಉದಾಹರಣೆಗೆ ಎಕ್ಹರ್ಟ್ ಟೊಲ್ಲೆ ಅವರ 'ದ ಪವರ್ ಆಫ್ ನೌ' (power of new).

ಟಿಪ್ಪಣಿ : ಮನೋದೈಹಿಕ ಖಾಯಿಲೆಗಳ ಬಗ್ಗೆ ಅಕ್ಟೋಬರ್ ೧೯೮೩ರ 'ಸಾಕ್ಷಿ'ಯಲ್ಲಿ ಈ ವಿಷಯದ ನನ್ನ ಲೇಖನ ಪ್ರಕಟವಾಗಿತ್ತು. ಅದರ ಪ್ರಸ್ತುತತೆ ಇಂದಿಗೂ ಮನಗೊಂಡು ಅದರಲ್ಲಿ ಪ್ರಸ್ತಾಪವಾಗದ ಒಂದು ಅಂಶವನ್ನು ಸೇರಿಸಿ ತಮ್ಮೆಲ್ಲರ ಗಮನಕ್ಕೆ ತರುವುದೇ ಇದರ ಉದ್ದೇಶ.

❑

ಭಾರದ್ವಾಜ, ೪೯, ೫ನೇ ಮೈನ್, ಆಂಜನೇಯನಗರ, ಬನಶಂಕರಿ ೩ನೇ ಸ್ಟೇಜ್, ಬೆಂಗಳೂರು ೫೬೦ ೦೮೫

ಹೋಮಿಯೋಪತಿ : ಪರಿಚಯ

ಮಾಲತೇಶ ನಾಡಿಗೇರ

ದೇಹ ಸ್ವಾಸ್ಥ್ಯ, ಸದೃಢತೆ, ಮನೋಲ್ಲಾಸ ಮತ್ತು ಸಮ–ಚಿತ್ತ ಇವುಗಳನ್ನು ಕಾಪಾಡಿಕೊಂಡು ಬರುವುದು, ಇಂದಿನ ಜೀವನ ಶೈಲಿಯಲ್ಲಿ ಅತ್ಯಗತ್ಯ ಮತ್ತು ಅಷ್ಟೇ ದುಸ್ತರವಾಗಿ ಪರಿಣಮಿಸಿದೆ. ನಮ್ಮ ದೈನಂದಿನ ಚಟುವಟಿಕೆಗಳು ಸಂಕೀರ್ಣ ಸ್ವರೂಪವನ್ನು ಪಡೆದು, ನಮ್ಮ ಕೆಲಸಗಳನ್ನು ನಿರಾತಂಕವಾಗಿ ನಡೆಸಿಕೊಂಡು ಹೋಗುವುದು ಒಂದು ಸವಾಲಾಗಿದೆ. "Health is wealth" ಎನ್ನುವ ನಾಣ್ನುಡಿ ಪ್ರಾಮುಖ್ಯತೆಯನ್ನು ಪಡೆದಿದೆ. ಏಕೆಂದರೆ, ಈಗಿನ ಔಷಧೋಪಚಾರ ತಪಾಸಣೆ, ಓಡಾಟ, High-Tech ರೋಗ ನಿದಾನ ಪದ್ಧತಿಗಳು wealth (ಧನ)ನ್ನು ನುಂಗಿ ಬಿಡುತ್ತವೆ. ಜನಸಾಮಾನ್ಯರಿಗೆ ಆಸ್ಪತ್ರೆ ವೆಚ್ಚದೊಟ್ಟಿಗೆ ಸಂಸಾರ ನಿರ್ವಹಣೆ ಸರಿದೂಗಿಸಿಕೊಂಡು ಹೋಗುವುದು ಕಠಿಣವಾಗಿದೆ.

ವೈದ್ಯಕೀಯರಂಗದಲ್ಲಿ ಹೇಗೆ ಹೊಸ ವಿಧಾನಗಳು, ಹೊಸ ಸಂಶೋಧನೆಗಳು, ಹೊಸ ಔಷಧಗಳು

ಹುಟ್ಟುತ್ತಿವೆಯೋ, ಹಾಗೆಯೇ, ಸಮರೋಪಾದಿಯಲ್ಲಿ ಹೊಸ ಹೊಸ ರೋಗಗಳು ಕಾಣಿಸಿಕೊಳ್ಳುತ್ತಿವೆ. ಇತ್ತೀಚಿನ ಏಡ್ಸ್, ಚಿಕೂನ್‌ಗುನ್ಯ, ಡೆಂಗೂ ಇತ್ಯಾದಿಗಳು ಉದಾಹರಣೆ. ಇದು ಒಂದು ರೀತಿಯಾದರೆ, ಇನ್ನೊಂದು ರೀತಿಯಲ್ಲಿ ಎಲ್ಲ ಔಷಧೋಪಚಾರ, ಚಿಕಿತ್ಸೆ ಪಡೆದರೂ ; ರೋಗಿ ಸಂಪೂರ್ಣ ಗುಣಮುಖಿ ರಾಗುವುದಿಲ್ಲ. ಅನೇಕ ಜನ ಹಣ ಮತ್ತು ಮನಶ್ಯಾಂತಿಯನ್ನು ಕಳೆದುಕೊಂಡು, ರೋಗ ನಿವಾರಣೆ ಆಗದೇ ಕಂಗಾಲಾಗಿ, ತೊಂದರೆ ಅನುಭವಿಸುತ್ತಾರೆ.

ಸಧ್ಯದ ಪರಿಸ್ಥಿತಿಯಲ್ಲಿ ಅಲೋಪತಿ (ಇಂಗ್ಲಿಷ್ ಔಷಧ) ಪದ್ಧತಿ ಜಗತ್ತಿನಾದ್ಯಂತ ಒಂದು ಬೃಹತ್ ವೈದ್ಯಕೀಯ ಪದ್ಧತಿಯಾಗಿದ್ದು, ಪ್ರತಿಶತ ೮೦ಕ್ಕಿಂತ ಮೇಲ್ಪಟ್ಟು ಜನ ಈ ಪದ್ಧತಿಯನ್ನೇ ಅವಲಂಬಿಸಿರುತ್ತಾರೆ. ಆದರೆ ಅಲೋಪತಿ ಪದ್ಧತಿ ತನ್ನದೇ ಆದ ಪರಿಮಿತಿಯನ್ನು ಹೊಂದಿದ್ದು ಅಲ್ಲದೇ, ಅನೇಕ ಬಾರಿ ವಿಷಪೂರಿತ ರಾಸಾಯನಿಕಗಳಿಂದ ಕೂಡದ ಔಷಧೋಪಚಾರಗಳಿಂದ ದುಷ್ಪರಿಣಾಮ ಬೀರುವ ಸಾಧ್ಯತೆಗಳು ಬೆಳಕಿಗೆ ಬಂದಿವೆ. ಹಾಗೂ ಅನೇಕರಿಗೆ ದುಬಾರಿಯಾಗಿದ್ದು, ಚಿಕಿತ್ಸೆ ಕೈಗೆಟುಕದಂತೆ ಆಗಿದೆ.

ಅನೇಕ ರೋಗಿಗಳು ವರ್ಷಗಟ್ಟಲೆ ಔಷಧವನ್ನು ಸೇವಿಸಿ ಗುಣಮುಖರಾಗುವುದಿಲ್ಲ ಅಥವಾ ದೇಹದ ಮೇಲೆ ಅನ್ಯ ಪರಿಣಾಮಗಳು ಕಾಣಿಸಿಕೊಳ್ಳುತ್ತವೆ. ಕೆಲವರಿಗೆ ದುಬಾರಿ ಔಷಧೋಪಚಾರ, ಚಿಕಿತ್ಸೆ, ಕೈಗೆ ಎಟುಕುವುದಿಲ್ಲ. ಇಂಥ ಸಂದರ್ಭಗಳಲ್ಲಿ ಜನ ಬೇರೆ ಔಷಧ ಪದ್ಧತಿಗಳಿಗೆ ಮಾರುಹೋಗುವುದು ರೂಢಿ. ಕೇವಲ ಕೆಲವರು ಮಾತ್ರ ಪ್ರಾರಂಭದಿಂದಲೇ ಅಲೋಪತಿ ಹೊರತುಪಡಿಸಿ ಇತರ ಔಷಧೋಪಚಾರಗಳನ್ನು ಮಾಡಿಕೊಂಡಿರುತ್ತಾರೆ.

ಅಲೋಪತಿ ಒಂದು ಬೃಹತ್ ಪ್ರಮಾಣದ ಮತ್ತು ಬಹುಪಾಲು ಜನ ಜಗತ್ತಿನಾದ್ಯಂತ ಅನುಸರಿಸುತ್ತಿರುವ ವೈದ್ಯಕೀಯ ಪದ್ಧತಿ ಆದ್ದರಿಂದ, ಬೇರೆ ವೈದ್ಯಕೀಯ ಪದ್ಧತಿಗಳಾದ ಆಯುರ್ವೇದ, ಹೋಮಿಯೋಪತಿ, ಯುನಾನಿ ಇತ್ಯಾದಿ ಪದ್ಧತಿಗಳಿಗೆ ಪರ್ಯಾಯ ವೈದ್ಯಕೀಯ ಪದ್ಧತಿ (Alternate System of medicines) ಎಂದು ಭಾರತದಲ್ಲಿ ಗುರುತಿಸಲಾಗಿದೆ. ಔಷಧ ರೂಪದಲ್ಲಿ ಅಲ್ಲದೇ ಬೇರೆ ವಿಧಾನಗಳಿಂದ ರೋಗ ನಿವಾರಣೆ ಮಾಡುವ ಪದ್ಧತಿಗಳೂ ಪ್ರಚಲಿತದಲ್ಲಿವೆ. ಅವುಗಳೆಂದರೆ ; ಆಕ್ಯುಪ್ರೇಷರ್, ಆಕ್ಯುಪಂಕ್ಚರ್, ರೆಖಿ, ಅಯಸ್ಕಾಂತ ಇತ್ಯಾದಿ. ಅಲೋಪತಿಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗದೇ ಬೇರೆ ಪದ್ಧತಿಗಳಿಂದ ಚಿಕಿತ್ಸೆ ಪಡೆದು ಗುಣಮುಖರಾದ ಘಟನೆಗಳು ಅನೇಕ. ಈ ನಿಟ್ಟಿನಲ್ಲಿ ಹೋಮಿಯೋಪತಿ ಒಂದು ಪರಿಣಾಮಕಾರಿ ವೈದ್ಯ ಪದ್ಧತಿಯಾಗಿ ರೂಪುಗೊಂಡಿದೆ. ಭಾರತದಲ್ಲಿ ಜನ ಈಗ ಹೋಮಿಯೋಪತಿ ಪದ್ಧತಿಯಲ್ಲಿ ವಿಶ್ವಾಸ ಹೊಂದುತ್ತಿರುವುದು ಒಂದು ಉತ್ತಮ ಬೆಳವಣಿಗೆ.

ಹೋಮಿಯೋಪತಿ ಭಾರತದಲ್ಲಿ ಬೆಳಕಿಗೆ ಬಂದದ್ದು ೧೮೩೯ರಲ್ಲಿ, ಆಗಿನ ಲಾಹೋರ್‌ನ ಮಹಾರಾಜ ರಣಜಿತ್ ಸಿಂಗ್ ಅನೇಕ ವರ್ಷಗಳಿಂದ ವಾಸಿಯಾಗದ ಕಾಯಿಲೆ (Chronic disease)ಯನ್ನು ಹೋಮಿಯೋಪತಿ ಚಿಕಿತ್ಸೆ ಪಡೆದು ಗುಣಮುಖರಾದಾಗ. ಹೀಗೆ ಹೋಮಿಯೋಪತಿ ಸ್ವಾತಂತ್ರ್ಯಪೂರ್ವ ಪಂಜಾಬ್ ಮೂಲಕ ಭಾರತದಲ್ಲಿ ಪ್ರಚಾರಕ್ಕೆ ಬಂದಿತು.

ಹೋಮಿಯೋಪತಿ ಪಂಜಾಬ್, ಪಶ್ಚಿಮ ಬಂಗಾಳ, ಒರಿಸ್ಸಾ, ಆಂಧ್ರಪ್ರದೇಶ, ಮಹಾರಾಷ್ಟ್ರ ರಾಜ್ಯಗಳಲ್ಲಿ ಶತಮಾನಗಳಿಂದ ಪ್ರಚಲಿತವಿದೆ. ಕರ್ನಾಟಕದಲ್ಲೂ ಕೂಡ ಅನೇಕ ವರ್ಷಗಳಿಂದ ಜನ ಹೋಮಿಯೋಪತಿ ಔಷಧಗಳನ್ನು ಉಪಯೋಗಿಸುತ್ತಿದ್ದು, ಇತ್ತೀಚೆಗೆ ಜನಪ್ರಿಯವಾಗುತ್ತಿದೆ.

ಈ ಒಂದು ಹಿನ್ನೆಲೆಯಲ್ಲಿ, ಹೋಮಿಯೋಪತಿ ವೈದ್ಯ ಪದ್ಧತಿಯ ಬಗ್ಗೆ ಒಂದು ಕಿರುಪರಿಚಯ ಮಾಡಿಕೊಡುವುದು ಮತ್ತು ಇದರ ವಿಶೇಷತೆಗಳನ್ನು, ಉಪಯೋಗಗಳನ್ನು ತಿಳಿಸುವುದು ಈ ಲೇಖನದ ಉದ್ದೇಶ.

ಹೋಮಿಯೋಪತಿ ವೈದ್ಯಪದ್ಧತಿಯ ಜನಕ ಜರ್ಮನ್ ದೇಶದವರಾದ ಡಾ. ಸ್ಯಾಮ್ಯುಯಲ್ ಹನೆಮನ್ (೧೭೫೫-೧೮೪೩)ರವರು. ಡಾ. ಸ್ಯಾಮ್ಯುಯಲ್ ಹನೆಮನ್‌ರವರು ೧೭೯೬ರಲ್ಲಿ ಹೋಮಿಯೋಪತಿ ವೈದ್ಯಕೀಯ ಪದ್ಧತಿಯನ್ನು ಬೆಳಕಿಗೆ ತಂದರು. ಡಾ. ಹನೆಮನ್‌ರವರು ವೈದ್ಯಕೀಯ ಪದ್ಧತಿಯಲ್ಲಿ ಎಂ.ಡಿ. ಪದವಿಯನ್ನು ಪಡೆದು, ಆಗಿನ ಸಂಪ್ರದಾಯ (Orthodox) ಪದ್ಧತಿಯನ್ನು ಅನುಸರಿಸಿ ಹೆಸರು ಪಡೆದವರಾಗಿದ್ದರು. ಡಾ. ಹನೆಮನ್‌ರವರು ಒಬ್ಬ ಮೇಧಾವಿ, ಚಿಂತಕ ಮತ್ತು ಮಾನವತಾವಾದಿಯಾಗಿದ್ದರು.

ರೋಗಿಗಳನ್ನು ಸಂಪೂರ್ಣ ಗುಣಮುಖರನ್ನಾಗಿ ಮಾಡುವುದೇ ಅವರ ಅವಿರತ ಶ್ರಮ ಮತ್ತು ಗುರಿಯಾಗಿಟ್ಟುಕೊಂಡಿದ್ದರು.

ಆದರೆ ಅವರ ಕಾಲದಲ್ಲಿ ಸಂಪ್ರದಾಯ ಪದ್ಧತಿಯಲ್ಲಿ ಪ್ರಚಲಿತವಿದ್ದ ಕೆಲವು ಚಿಕಿತ್ಸಾ ಪದ್ಧತಿಗಳು ತರ್ಕಬದ್ಧ ಮತ್ತು ವ್ಯವಸ್ಥಿತವಾಗಿಲ್ಲದ್ದರಿಂದ ಅವರಿಗೆ ಸರಿಕಂಡುಬರಲಿಲ್ಲ. ಹಲವಾರು ರೋಗಿಗಳಿಗೆ ಚಿಕಿತ್ಸೆಗೆಂದು ರಕ್ತಹೀರುವುದು (Blood letting) ವಾಂತಿ (Vomitting) ಮಾಡಿಸುವುದು, ಭೇದಿ (Losse motion) ಮಾಡಿಸುವುದು ಇತ್ಯಾದಿ ಆಚರಣೆಗಳು ಪ್ರಕೃತಿಗೆ ವಿರುದ್ಧವಾದ ಆಚರಣೆ ಎಂದು ತಿಳಿದಿದ್ದರು. ಮುಖ್ಯವಾಗಿ ಒಂದು ಬಾರಿ ಔಷಧೋಪಚಾರ ಕೊಟ್ಟ ಮೇಲೆ ಪದೇ-ಪದೇ ಅದೇ ರೋಗಿ, ಅದೇ ರೋಗದಿಂದ ನರಳುತ್ತಿರುವುದು ಅವರಿಗೆ ಮುಜುಗರವಾಗಿ, ಈ ಪದ್ಧತಿಯಲ್ಲಿ ಕೆಲವು ನ್ಯೂನ್ಯತೆಗಳಿವೆ ಎಂದು ಪರಿಗಣಿಸಿದರು. ಆ ಕಾಲದಲ್ಲಿ ಒಂದು ತರ್ಕಬದ್ಧವಾದ ವ್ಯವಸ್ಥಿತವಾದ ವೈದ್ಯ ಪದ್ಧತಿ ಇಲ್ಲ ಎಂದು ನಂಬಿದ್ದರು. ರೋಗಿಗಳಿಗೆ ಸಹಾಯಕ್ಕಿಂತ ಹಾನಿ, ಹಿಂಸೆ ಮಾಡುತ್ತಿದ್ದೇನೆಂದು ತಿಳಿದು ಅಸಹಾಯಕತೆಯನ್ನು ಅನುಭವಿಸುತ್ತಿದ್ದರು. ಈ ಎಲ್ಲ ವಿಷಯಗಳಿಂದ ಬೇಸತ್ತು, ತಪ್ಪಾಗಿ ಚಿಕಿತ್ಸೆ ನೀಡಿ ಜನರಿಗೆ ತೊಂದರೆಯಾಗುತ್ತದೆಂದು ತಿಳಿದು, ಅವರು ವೈದ್ಯಕೀಯ ವೃತ್ತಿಯನ್ನು ತ್ಯಜಿಸಿದರು.

ಡಾ. ಹನೆಮನ್‌ರವರು ಬಹುಭಾಷಾ ತಜ್ಞರಾಗಿದ್ದರು. ಹೀಗಾಗಿ, ಉಪಜೀವನಕ್ಕಾಗಿ ಭಾಷಾಂತರ ವೃತ್ತಿಯನ್ನು ಅವಲಂಬಿಸಿದರು. ಅವರಿಗೆ ವೈದ್ಯಕೀಯ ರಂಗದಲ್ಲಿ ಪ್ರಸಿದ್ಧ ಗ್ರಂಥಗಳನ್ನು ಭಾಷಾಂತರ ಮಾಡುವ ಅವಕಾಶಗಳು ದೊರೆತವು. ಒಂದು ದಿನ ಪ್ರೊ. ವಿಲಿಯಮ್ಸ್ ಕಲೆನ್ಸ್ ರವರ ಪ್ರಸಿದ್ಧ ಗ್ರಂಥ ಔಷಧ ವಸ್ತು ಶಾಸ್ತ್ರ (Prof. William Cullen's material medica : curative properties of numerous medical substances) ಎನ್ನುವ ಪುಸ್ತಕವನ್ನು ಭಾಷಾಂತರ ಮಾಡುತ್ತಿದ್ದರು. ಆ ಸಮಯದಲ್ಲಿ ಒಂದು ವಸ್ತುವಿನ ಗುಣದ ಬಗ್ಗೆ ಭಾಷಾಂತರ ಮಾಡುವಾಗ ಒಂದು ವಾಕ್ಯ ಅವರ ತೀವ್ರ ಗಮನ ಸೆಳೆದು, ನಿಗೂಢವಾಗಿ ಕಂಡು ಬಂದಿತು. ಮತ್ತು ಅವರ ಅನುಮಾನಕ್ಕೆ ಎಡೆ ಮಾಡಿಕೊಟ್ಟಿತು. ಆ ವಾಕ್ಯ ಏನೆಂದರೆ "ಸಿಂಕೋನಾ (Peruvian bark) ದಿಂದ ಮಲೇರಿಯಾ ಕಾಯಿಲೆ ವಾಸಿಯಾಗುತ್ತದೆ. ಏಕೆಂದರೆ ಅದರ ಕಹಿ ಗುಣವೇ ಕಾರಣ". ಡಾ. ಹನೆಮನ್‌ರವರಿಗೆ ಒಂದು ಅನುಮಾನ ತಲೆದೋರಿತು. ಅದೇನೆಂದರೆ ಸಿಂಕೋನಾದಷ್ಟೇ ಅಥವಾ ಅದಕ್ಕಿಂತ ಕಹಿಯಾದ ಅನೇಕ ವಸ್ತುಗಳು ಲಭ್ಯವಿವೆ. ಸಿಂಕೋನಾ ಮರದ ಕಹಿ ಒಂದೇ ಏಕೆ ಮಲೇರಿಯಾವನ್ನು ವಾಸಿಮಾಡಬೇಕು, ಬೇರೆ ವಸ್ತುಗಳು ಏಕೆ ಮಲೇರಿಯಾವನ್ನು ವಾಸಿಮಾಡಲಾರವು ? ಈ ಅನುಮಾನದಿಂದ ಅವರು ಭಾಷಾಂತರವನ್ನು ಮುಂದುವರಿಸದೇ ಅಲ್ಲಿಗೇ ನಿಲ್ಲಿಸಿ, ಸ್ವತಃ ತಮ್ಮ ಮೇಲೆ ಒಂದು ಪ್ರಯೋಗ ಪ್ರಾರಂಭ ಮಾಡಿದರು. (ಆಗಿನ ಕಾಲದಲ್ಲಿ ಮಲೇರಿಯಾ ಜ್ವರದಿಂದ ಪೀಡಿತರಾದವರಿಗೆ, ಸಿಂಕೋನಾಮರದ ತೊಗಟೆಯ ಕಷಾಯ ಕುಡಿಸುತ್ತಿದ್ದರು).

ಡಾ. ಹನೆಮನ್‌ರವರು ಅಂದಿನಿಂದ ಸಿಂಕೋನಾ ಮರದ ತೊಗಟೆಯ ಕಷಾಯವನ್ನು ಪ್ರತಿದಿನ ಬೆಳಿಗ್ಗೆ ಮತ್ತು ಸಾಯಂಕಾಲ ಕುಡಿಯಲು ಪ್ರಾರಂಭಿಸಿದರು. ಇದರಿಂದ ಅವರಿಗೆ ಕೆಲವು ದಿನಗಳ ನಂತರ ಮಲೇರಿಯಾ ತರಹದ ರೋಗದ ಲಕ್ಷಣಗಳನ್ನು ಅನುಭವಿಸಲು ಪ್ರಾರಂಭಿಸಿದರು. ನಂತರ ಕಷಾಯ ಕುಡಿಯುವುದನ್ನು ನಿಲ್ಲಿಸಿದಾಗ, ನಿಧಾನವಾಗಿ ಆ ಲಕ್ಷಣಗಳು ಮಾಯವಾದವು. ಈ ಪ್ರಯೋಗದಿಂದ ಅವರು ಊಹಿಸಿದ್ದೇನೆಂದರೆ "ಈ ವಸ್ತುವು ಮಲೇರಿಯಾ ತರಹದ ರೋಗ ಚಿಹ್ನೆಗಳನ್ನು ಉತ್ಪತ್ತಿ ಮಾಡುವ ಗುಣ ಹೊಂದಿರುವುದರಿಂದ ಇದೇ ವಸ್ತುವು ಮಲೇರಿಯಾ ರೋಗ ನಿವಾರಣೆ ಮಾಡುವ ಸಾಮರ್ಥ್ಯವನ್ನೂ ಹೊಂದಿದೆ." ಈ ರೀತಿ "Law of Similars" ತತ್ತ್ವವನ್ನು ಆಧಾರವನ್ನಾಗಿಟ್ಟುಕೊಂಡು ಡಾ. ಹನೆಮನ್‌ರವರು ಮತ್ತು ಅವರ ಅನುಯಾಯಿಗಳು ಔಷಧೋಪಯುಕ್ತವಾದ ಅನೇಕ ವಸ್ತುಗಳನ್ನು ಸ್ವತಃ ಸೇವಿಸಿ, ಅವುಗಳ ರೋಗ ಲಕ್ಷಣಗಳನ್ನು ಅನುಭವಿಸಿ, ಗುರುತಿಸಿ, ದಾಖಲಿಸಿ, ಪ್ರಪ್ರಥಮವಾಗಿ "Materia Medica Pura" ಎನ್ನುವ ಹೊಸಗ್ರಂಥವನ್ನೇ ತಯಾರು ಮಾಡಿದರು. ಅನೇಕ ವರ್ಷಗಳ ಅವಿರತ ಪ್ರಯೋಗದಿಂದ ವೈದ್ಯಕೀಯ ರಂಗದಲ್ಲಿ ಒಂದು ಸಿದ್ಧಾಂತವನ್ನೇ ಪ್ರತಿಪಾದಿಸಿದರು. "Similia Similibus Curantur", "Like Cures Like" ಎನ್ನುವ ಸಿದ್ಧಾಂತದ ತಳಹದಿಯ ಮೇಲೆ ಹೋಮಿಯೋಪತಿ ವೈದ್ಯ ಪದ್ಧತಿ ಅವರಿಂದ ಸ್ಥಾಪಿಸಲ್ಪಟ್ಟಿತು. ಈ ಸಿದ್ಧಾಂತವನ್ನು ಸ್ಥಿರಪಡಿಸಲು ಅವರು ಅನೇಕ ವರ್ಷಗಳ ಕಾಲ ಅವಿಶ್ರಾಂತವಾಗಿ ದುಡಿದರು.

ಈ ಸಿದ್ಧಾಂತವನ್ನು ನಮ್ಮ ಪರಿಭಾಷೆಯಲ್ಲಿ ಹೇಳಬೇಕೆಂದರೆ "ಉಷ್ಣಂ ಉಷ್ಣೇನ ಶೀತಲಃ", "ಮುಳ್ಳನ್ನು ಮುಳ್ಳಿನಿಂದಲೇ ತೆಗೆ" ಎಂದು ತಿಳಿಸಬಹುದು. ಉದಾಹರಣೆಗೆ ಹೇಳಬೇಕೆಂದರೆ ಒಬ್ಬ ವ್ಯಕ್ತಿಗೆ ಬಾಳೆಹಣ್ಣು ತಿನ್ನುವುದರಿಂದ ಕೆಮ್ಮು, ನೆಗಡಿ, ಗಂಟಲು ಬೇನೆ ಬರುತ್ತದೆ. ಆ ವ್ಯಕ್ತಿ ಬಾಳೆಹಣ್ಣನ್ನು ಔಷಧರೂಪದಲ್ಲಿ ತಯಾರಿಸಿ ಸೇವಿಸಿದರೆ, ಮೇಲೆ ತಿಳಿಸಿದ ರೋಗಗಳಿಂದ ಮುಕ್ತನಾಗುತ್ತಾನೆ. ಯಾವ ವಸ್ತು ರೋಗ ಚಿಹ್ನೆಗಳನ್ನು (Symptoms) ಉಂಟು ಮಾಡಲು ಕಾರಣವಾಗುತ್ತದೆಯೋ, ಅದೇ ವಸ್ತುವಿನಿಂದ ತಯಾರಿಸಿದ ಔಷಧ, ಈ ರೋಗದ ಚಿಹ್ನೆಗಳಿರುವ ಕಾಯಿಲೆಗಳನ್ನು ಗುಣಪಡಿಸುತ್ತದೆ. ಗೃಹಿಣಿಯರು ಮನೆಯಲ್ಲಿ ಈರುಳ್ಳಿ ಹೆಚ್ಚುವಾಗ ಕಣ್ಣು, ಮೂಗಿನಲ್ಲಿ ನೀರು, ಕಣ್ಣುರಿ ಇತ್ಯಾದಿ ನೆಗಡಿರೂಪದ (hay fever) ಚಿಹ್ನೆಗಳು ಕಾಣುತ್ತವೆ. ಇದೇ ಈರುಳ್ಳಿಯಿಂದ ತಯಾರಿಸಿದ ಹೋಮಿಯೋಪತಿ ಔಷಧ "ಅಲಿಯಂ ಸೇಪ" ಇದೇ ರೋಗ ಚಿಹ್ನೆ ಇರುವ ನೆಗಡಿಯನ್ನು ನಿವಾರಣೆ ಮಾಡುತ್ತದೆ.

ಡಾ. ಸ್ಯಾಮ್ಯುಯಲ್ ಹನೆಮನ್‌ರವರು ಮತ್ತು ಅವರ ಅನುಯಾಯಿಗಳು ಅನೇಕ ಔಷಧೋಪಯುಕ್ತವಾದ, ವಿಷಪೂರಿತವಾದ ಗಿಡಮೂಲಿಕೆಗಳನ್ನು ವಸ್ತುಗಳನ್ನು ಮೂಲರೂಪದಲ್ಲಿ ಸ್ವತಃ ಸೇವಿಸಿ ರೋಗದ ಚಿಹ್ನೆಗಳನ್ನು ದಾಖಲಿಸಿ, ಔಷಧವನ್ನು ತಯಾರಿಸಿ, ಮಾನವ ಜನಾಂಗಕ್ಕೆ ಉಪಕಾರ ಮಾಡಿದ್ದಾರೆ. ಈ ಪ್ರಯೋಗ ಯಾವುದೇ ಮೂಕ ಪ್ರಾಣಿಯ ಮೇಲೆ ಮಾಡದೇ ಆರೋಗ್ಯವಂತರಾದ ಮನುಷ್ಯರು ಸೇವಿಸಿ, ಅವುಗಳ ರೋಗ ನಿವಾರಣಾ ಸಾಮರ್ಥ್ಯವನ್ನು ಗುರುತಿಸಿ ದಾಖಲಿಸಿದ್ದಾರೆ. ಈ ಅಂಶ ಹೋಮಿಯೋಪತಿಯ ವಿಶಿಷ್ಟತೆಗಳಲ್ಲಿ ಒಂದು.

ಡಾ. ಹನೆಮನ್‌ರವರಿಗೆ ಹೋಮಿಯೋಪತಿ ಪದ್ಧತಿಯನ್ನು ಜನರಿಗೆ ತಲುಪಿಸುವುದು, ಮನವರಿಕೆ ಮಾಡಿಕೊಡುವುದು ಅಷ್ಟು ಸುಲಭವಾದ ಕೆಲಸವಾಗಲಿಲ್ಲ. ಅವರು ಅನೇಕರಿಂದ ಅನುಮಾನ, ಅವಮಾನ, ವಿರೋಧ, ಖಂಡನೆಗಳನ್ನು ಎದುರಿಸಬೇಕಾದ ಪ್ರಸಂಗ ಹಲವಾರು. ಕೆಲವು ಸಂದರ್ಭಗಳಲ್ಲಿ ಅವರಿಗೆ ಕೆಟ್ಟ ಹೆಸರು ತರುವ, ಅವರನ್ನು ಖಂಡಿಸುವ ಉದ್ದೇಶವನ್ನಾಗಿಟ್ಟುಕೊಂಡು ಕೆಲವರು ಅವರ ಗ್ರಂಥಗಳನ್ನು ಅವಲೋಕನಮಾಡಿ, ದೀರ್ಘವಾಗಿ ಅಧ್ಯಯನ ಮಾಡಿ ಅವರ ತತ್ವ ಸಿದ್ಧಾಂತ ಸರಿ ಎಂದು ಒಪ್ಪಿ ಅವರ ಶಿಷ್ಯರಾಗಿರುವ ಸಂದರ್ಭಗಳೂ ಇವೆ. ಅನೇಕ ಸಂದರ್ಭಗಳಲ್ಲಿ, ಸಾಂಪ್ರದಾಯಿಕ ಪದ್ಧತಿ ಗುಣಪಡಿಸಲಾಗದ ಕೆಲವು ರೋಗಗಳನ್ನು ಹೋಮಿಯೋಪತಿ ಮೂಲಕ ಗುಣಪಡಿಸಿ ಹೆಸರು ಪಡೆದಿರುವ ಸಂದರ್ಭಗಳೂ ಬಂದವು.

ಡಾ. ಸ್ಯಾಮ್ಯುಯಲ್ ಹನೆಮನ್‌ರವರು ಅವಿಶ್ರಾಂತ ಪರಿಶ್ರಮ ಮತ್ತು ಸಂಶೋಧನೆಗಳಿಂದ ಹೋಮಿಯೋಪತಿಯಲ್ಲಿ ಹೊಸ ಆಯಾಮಗಳನ್ನು, ವಿಷಯಗಳನ್ನು ಬೆಳಕಿಗೆ ತಂದರು. ಅವುಗಳಲ್ಲಿ ಅತಿ ಮುಖ್ಯವಾದುದೆಂದರೆ, ಅನೇಕ ದಿನಗಳ ದೀರ್ಘಕಾಲದ (Chronic) ರೋಗಗಳಿಗೆ ಮನಸ್ಸೇ ಕಾರಣವೆಂದೂ, ಉದ್ವೇಗ, ಉದ್ರೇಕ, ಆತಂಕ, ಆವೇಗ, ಕೋಪ, ಭಯ ಇತ್ಯಾದಿಗಳು, ದೈಹಿಕ ರೋಗಕ್ಕೆ ಮೂಲ ಕಾರಣವೆಂದು ಪರಿಗಣಿಸಿ, ಒಬ್ಬ ರೋಗಿಯನ್ನು ಪರಿಶೀಲಿಸುವಾಗ ಒಟ್ಟಾರೆ ಮಾನಸಿಕ ಮತ್ತು ದೈಹಿಕ ರೋಗಲಕ್ಷಣಗಳನ್ನು ಅಭ್ಯಸಿಸಿ, ಚಿಕಿತ್ಸೆ ನೀಡಿದರೆ ಮಾತ್ರ ಸಂಪೂರ್ಣ ಆರೋಗ್ಯ ಮರಳಲು ಸಾಧ್ಯ ಎಂದು ಘೋಷಿಸಿದರು. ಇದರಿಂದ ಹೋಮಿಯೋಪತಿಯ ಒಂದು ವೈಶಿಷ್ಟ್ಯವೆಂದರೆ ಒಬ್ಬ ರೋಗಿಗೆ ಚಿಕಿತ್ಸೆ ಕೊಡುವಾಗ ರೋಗಿಯ ಒಟ್ಟಾರೆ ಮಾನಸಿಕ ಮತ್ತು ದೈಹಿಕ ರೋಗ ಲಕ್ಷಣಗಳನ್ನು ಒಟ್ಟಾರೆ ಪರಿಶೀಲಿಸಿ ಔಷಧವನ್ನು ನಿರ್ಧರಿಸುವುದು.

ಹೋಮಿಯೋಪತಿಯಲ್ಲಿ ಪ್ರತಿಯೊಂದು ಔಷಧವೂ ಮಾನಸಿಕ ಲಕ್ಷಣಗಳನ್ನೂ ಒಳಗೊಂಡು, ದೇಹದ ಎಲ್ಲಾ ಭಾಗಗಳ (ಅಂದರೆ ; ತಲೆ, ಕೂದಲು, ಕಿವಿ, ಕಣ್ಣು, ಮೂಗು, ಹೃದಯ, ಶ್ವಾಸನಾಳ, ಗಂಟಲು, ಕಾಲು, ಉದರ ಇತ್ಯಾದಿ) ರೋಗಗಳನ್ನು ಗುಣಪಡಿಸುವ ಸಾಮರ್ಥ್ಯ ಹೊಂದಿವೆ. ಅಂದರೆ, ದೇಹದ ಪ್ರತಿಯೊಂದೂ ಭಾಗದ ರೋಗ ನಿವಾರಣೆಗೂ ಎಲ್ಲ ಹೋಮಿಯೋಪತಿ ಔಷಧಗಳು ಅನ್ವಯವಾಗುತ್ತವೆ. ಹಾಗಾದರೆ, ಒಬ್ಬ ರೋಗಿಯು ವ್ಯಕ್ತಪಡಿಸುವ ಹಲವಾರು ರೋಗ ಲಕ್ಷಣಗಳಿಗೆ ಒಂದೇ ಔಷಧವನ್ನು ಗುರುತಿಸುವುದು ಹೇಗೆ ? ಇದು ಕೇವಲ ರೋಗಿ ವ್ಯಕ್ತಪಡಿಸುವ ರೋಗ ಲಕ್ಷಣ (Symptoms)ಗಳ ಆಧಾರದಿಂದ ಮಾತ್ರ

ಒಬ್ಬ ಹೋಮಿಯೋಪತಿ ವೈದ್ಯರಲ್ಲಿ ಮೂರು ಜನ ತಲೆನೋವಿನ ಔಷಧ ಪಡೆಯಲು ಬಂದರೆ, ಮೂರೂ ಜನಕ್ಕೂ ಮೂರು ಬೇರೆ ಬೇರೆ ಔಷಧಗಳನ್ನು ಕೊಡುವ ಸಾಧ್ಯತೆ ಇದೆ. ಏಕೆಂದರೆ, ಮೂರೂ

ಜನರ ತಲೆನೋವಿನ ಲಕ್ಷಣಗಳು ಭಿನ್ನವಾಗಿರುವುದೇ ಕಾರಣ. ಇದೆಲ್ಲದರ ಒಟ್ಟಾರೆ ಅರ್ಥವೇನೆಂದರೆ ಒಬ್ಬ ರೋಗಿಗೆ ಔಷಧ ನಿರ್ಧಾರ ಮಾಡುವ ಕೆಲಸ ಕೇವಲ ರೋಗಿ ವ್ಯಕ್ತ ಪಡಿಸುವ ರೋಗ ಲಕ್ಷಣಗಳ ಮೇಲೆ ಅವಲಂಬಿತವಾಗಿದೆ. ಆದ್ದರಿಂದ ರೋಗ ಲಕ್ಷಣಗಳು ಹೋಮಿಯೋಪತಿಯಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಹೋಮಿಯೋಪತಿಯಲ್ಲಿ ಒಂದು ಸಾವಿರಕ್ಕೂ ಮೇಲ್ಪಟ್ಟು ಔಷಧಗಳು ಲಭ್ಯವಿವೆ ಮತ್ತು ಹೊಸ ಔಷಧಗಳ ಸಂಶೋಧನೆಗಳು ಜಾರಿಯಲ್ಲಿವೆ. ಹೋಮಿಯೋಪತಿ ಔಷಧಿಗಳು ಪ್ರಕೃತಿಯ ಪ್ರಮುಖವಾದ ಮೂರು ವರ್ಗಗಳಿಂದ ಉತ್ಪತ್ತಿಯಾಗುತ್ತವೆ. ಸಸ್ಯ ರಾಶಿ, ಖನಿಜ ರಾಶಿ ಮತ್ತು ಪ್ರಾಣಿಗಳು, ಇವೇ ಹೋಮಿಯೋಪತಿ ಔಷಧಗಳ ಮೂಲ.

ಹೋಮಿಯೋಪತಿ ಔಷಧಗಳ ತಯಾರಿಕೆ ಮತ್ತೊಂದು ವಿಶಿಷ್ಟ ವಿಧಾನ. ಈ ಔಷಧಗಳು ವಿವಿಧ ಸತ್ವ (Potency)ಗಳಲ್ಲಿ ದೊರಕುತ್ತವೆ. ಈ ಲೇಖನದಲ್ಲಿ ಸತ್ವಗಳ ಬಗ್ಗೆ ಚರ್ಚಿಸುವುದು ಸಾಧ್ಯವಾಗದ್ದರಿಂದ, ಪ್ರತಿಯೊಂದೂ ಔಷಧವೂ ಸಾಮಾನ್ಯವಾಗಿ ೩,೬,೩೦,೨೦೦,೧೦೦೦,೧೦೦೦೦, ... ಸತ್ವಗಳಲ್ಲಿ ದೊರಕುತ್ತವೆ ಎಂದು ತಿಳಿಸಿದರೆ ಸಾಕು. ರೋಗಿಯು ವ್ಯಕ್ತ ಪಡಿಸಿದ ರೋಗ ಲಕ್ಷಣಕ್ಕೆ ಅನುಗುಣವಾಗಿ ಸರಿಯಾದ ಔಷಧವನ್ನು ಕಂಡು ಹಿಡಿಯುವುದಲ್ಲದೇ, ತಕ್ಕದಾದ ಸತ್ವವನ್ನೂ ನಿರ್ಧರಿಸುವುದು ಅಷ್ಟೇ ಮುಖ್ಯ. ಈ ನಿರ್ಧಾರ ರೋಗಿಯ/ರೋಗದ ಅನೇಕ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ.

ಹೋಮಿಯೋಪತಿ ಪದ್ಧತಿಯ ಬಗ್ಗೆ ಅನೇಕ ತಪ್ಪು ಕಲ್ಪನೆಗಳಿವೆ. ಅವುಗಳಲ್ಲಿ ಮುಖ್ಯವಾದುದೆಂದರೆ, ಈ ಪದ್ಧತಿಯಿಂದ ರೋಗ ನಿವಾರಣೆ ತುಂಬಾ ನಿಧಾನ, ರೋಗಿ ಬೇಗನೆ ಗುಣಮುಖನಾಗುವುದಿಲ್ಲ ಎಂದು. ಇದು ಸುಳ್ಳು. ಆದರೆ ಈ ವಿಷಯ ರೋಗಿಯ ಮತ್ತು ರೋಗದ ಅನೇಕ ಅಂಶಗಳ ಮೇಲೆ ಅವಲಂಬಿಸಿದೆ. ರೋಗಿಯು ಅನೇಕ ವರ್ಷಗಳಿಂದ ಬಳಲುತ್ತಿದ್ದರೆ ಮತ್ತು ಅನೇಕ ಕಾಯಿಲೆಗಳಿಂದ ಬಳಲುತ್ತಿದ್ದರೆ, ರೋಗ ನಿವಾರಣೆಯನ್ನು ತಕ್ಷಣ ಅಪೇಕ್ಷಿಸುವುದು ಸರಿಯಲ್ಲ. ಆದರೆ ಇಂಥ ಸಂದರ್ಭಗಳಲ್ಲಿ ಸರಿಯಾದ ಔಷಧ ಮತ್ತು ತಕ್ಕುದಾದ ಸತ್ವ (Potency)ವನ್ನು ಹೋಮಿಯೋಪತಿ ವೈದ್ಯ ಆಯ್ಕೆ ಮಾಡಿ ಚಿಕಿತ್ಸೆ ನೀಡಿದರೆ, ರೋಗದ ಲಕ್ಷಣಗಳಲ್ಲಿ ಗುಣಮುಖ ಶೀಘ್ರವಾಗಿ ಕಂಡು ಹಿಡಿಯುವುದು ಖಂಡಿತ. ಇದನ್ನು ರೋಗಿಯು ಕಂಡುಕೊಳ್ಳುತ್ತಾನೆ. ತಾತ್ಕಾಲಿಕ (Acute) ಸಮಸ್ಯೆಗಳಾದ ತಲೆನೋವು, ಹೊಟ್ಟೆನೋವು, ಜ್ವರ, ನೆಗಡಿ, ಗಾಯ ಇತ್ಯಾದಿಗಳನ್ನು ಸಮರ್ಥವಾಗಿ, ಸಮರ್ಪಕವಾಗಿ, ನಿಗದಿತ ವೇಳೆಯೊಳಗೆ ಹೋಮಿಯೋಪತಿ ಪರಿಣಾಮಕಾರಿಯಾಗಿ ಗುಣ ಮಾಡುವ ಸಾಮರ್ಥ್ಯ ಹೊಂದಿದೆ. ಒಬ್ಬ ತಲೆನೋವಿನಿಂದ ನರಳುತ್ತಿರುವ ವ್ಯಕ್ತಿಗೆ ಔಷಧ ಕೊಟ್ಟ ಮೇಲೆ ೩-೪ ದಿನಗಳ ನಂತರ ವಾಸಿಯಾಗುತ್ತದೆ ಎಂದು ಹೇಳುವುದು ಸರಿಯಲ್ಲ ಮತ್ತು ಹೋಮಿಯೋಪತಿಯಲ್ಲಿ ಕೂಡ ಹಾಗಿಲ್ಲ. ಒಟ್ಟಾರೆ ಆಯಾ ರೋಗಗಳ ಅನೇಕ ಅಂಶಗಳ ಪರಿಸ್ಥಿತಿಯನ್ನು ಅನುಸರಿಸಿ ರೋಗ ನಿವಾರಣೆ ಸಾಧ್ಯ ಎಂದು ಹೇಳುವುದೇ ಇದರ ಉದ್ದೇಶ.

ಇನ್ನೊಂದು ತಿಳುವಳಿಕೆ ಎಂದರೆ, ಹೋಮಿಯೋಪತಿ ಕೇವಲ ಕೆಲವು ರೋಗಗಳನ್ನು ಮಾತ್ರ ನಿವಾರಣೆ ಮಾಡಬಹುದು. ಉದಾಹರಣೆಗೆ, ಚರ್ಮರೋಗ, ಉಬ್ಬಸ, ಆಸ್ತಮ, ಇತ್ಯಾದಿಗಳನ್ನು ಎಂದು ವಾದ ಮಾಡುವವರು ಇದ್ದಾರೆ. ಆದರೆ ಹಾಗಿಲ್ಲ. ಹೋಮಿಯೋಪತಿ ಒಂದು ಪರಿಪೂರ್ಣ ವೈದ್ಯ ಪದ್ಧತಿಯಾಗಿದ್ದು, ಕೆಮ್ಮು, ನೆಗಡಿ, ಜ್ವರ, ಗಾಯಗಳಿಂದ ಹಿಡಿದು, ಏಡ್ಸ್ (AIDS)ವರಗೆ ಎಲ್ಲಾ ಕಾಯಿಲೆಗಳನ್ನು ನಿರ್ಮೂಲನ ಮಾಡುವ ಸಾಮರ್ಥ್ಯ ಹೊಂದಿದೆ. ಉದಾಹರಣೆಗೆ ಇತ್ತೀಚೆಗೆ ಅಬ್ಬರಿಸಿದ ಸಾಂಕ್ರಾಮಿಕ ರೋಗಗಳಾದ ಚಿಕೂನ್‌ಗುನ್ಯ, ಡೆಂಗೂ ಜ್ವರಗಳಿಗೂ ಹೋಮಿಯೋಪತಿಯಲ್ಲಿ ರೋಗ ನಿವಾರಕ ಮತ್ತು ರೋಗ ನಿರೋಧಕ (Preventive) ಔಷಧಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ. ಆದರೆ ಹೋಮಿಯೋಪತಿಯಲ್ಲಿ ಈ ಜ್ವರಕ್ಕೆ ಇದೇ ಔಷಧಿಯೆಂದು ಇಲ್ಲದೆ, ರೋಗಿಯು ವ್ಯಕ್ತ ಪಡಿಸುವ ರೋಗ ಚಿಹ್ನೆಗಳ ಮೇಲೆ ಔಷಧಗಳನ್ನು ಆರಿಸಿ ಕೊಡಬೇಕು. ಸಾಂಕ್ರಾಮಿಕ ರೋಗಗಳಲ್ಲಿ ಒಟ್ಟಾರೆ ಆ ಭಾಗದ ರೋಗಿಗಳು ನರಳುವ ಚಿಹ್ನೆಗಳನ್ನು ಆಧರಿಸಿ, ಒಂದು ರೋಗ ನಿರೋಧಕವನ್ನು ಆಯ್ಕೆ ಮಾಡಬಹುದು.

ಹೋಮಿಯೋಪತಿ ವೈದ್ಯರು ಪಥ್ಯ (ನಿಷಿದ್ಧ) ತುಂಬ ಹೇಳುತ್ತಾರೆ. ಅನೇಕ ಆಹಾರಗಳು, ಕಾಫಿ, ಚಹ ವರ್ಜ್ಯ. ಅದ್ದರಿಂದ, ಈ ಔಷಧ ತೆಗೆದುಕೊಳ್ಳುವುದು ತುಂಬಾ ಕಷ್ಟ ಎಂದು ಅನೇಕ ಜನ ನಂಬಿದ್ದಾರೆ. ಆದರೆ ವಾಸ್ತವವೇ ಬೇರೆ. ಯಾವುದೇ ರೋಗಿಯಾಗಲೀ, ಯಾವುದೇ ರೋಗವಾಗಲೀ,

ನಿಯಮಿತ ಆಹಾರ, ವಿಶ್ರಾಂತಿ ಮತ್ತು ಸುಲಭವಾಗಿ ಜೀರ್ಣವಾಗುವ ಆಹಾರವನ್ನು ಸೇವಿಸಿದರೆ, ರೋಗ ನಿವಾರಣೆಗೆ ಇವೆಲ್ಲ ಪೂರಕವಾಗಿ ಕೆಲಸ ಮಾಡುತ್ತವೆ. ಹೀಗಾಗಿ ವೈದ್ಯರು ಸಲಹೆ ನೀಡುತ್ತಾರೆ.

ಹೋಮಿಯೋಪತಿ ವೈದ್ಯ ಪದ್ಧತಿಯ ಕೆಲವು ವಿಶೇಷ/ವಿಶಿಷ್ಟತೆಗಳು :

೧. ಸರಳ, ಸುಲಭ ಮತ್ತು ಪರಿಣಾಮಕಾರಿ.

೨. ಇದೇ ರೋಗಕ್ಕೆ ಇದೇ ಔಷಧವೆನ್ನುವ ನಿಶ್ಚಯವಿಲ್ಲ. ರೋಗಿಯು ವ್ಯಕ್ತಪಡಿಸುವ ರೋಗ ಲಕ್ಷಣಗಳ ಮೇಲೆ ಔಷಧಗಳನ್ನು ಆಯ್ಕೆ ಮಾಡುತ್ತಾರೆ.

೩. ರೋಗ ಲಕ್ಷಣ (Symptoms)ಗಳು ಅತಿ ಮುಖ್ಯ.

೪. ಮನಸ್ಸಿನ ಮತ್ತು ದೈಹಿಕ ರೋಗ ಲಕ್ಷಣಗಳನ್ನು ಒಟ್ಟಾರೆ ಪರಿಶೀಲನೆ ಮಾಡುವುದು ಹೋಮಿಯೋಪತಿಯಲ್ಲಿ ಮಾತ್ರ.

೫. ಅನೇಕ ದೀರ್ಘಕಾಲಿಕ (Chronic) ರೋಗಗಳಿಗೆ ಮನಸ್ಸೇ ಮೂಲ ಕಾರಣ ಎಂದು ತಿಳಿದಿರುವುದು.

೬. ಮನೋವೇದನೆಗಳಿಗೆ ಹೋಮಿಯೋಪತಿ – ಪರಿಣಾಮಕಾರಿ.

೭. ಮನಸ್ಸಿನ ಆಘಾತ, ನಿರಾಶೆ, ದುಃಖ, ಭಯ, ಗಾಬರಿಗಳಿಂದ ಆಗುವ ದೈಹಿಕ ಸಮಸ್ಯೆಗಳಿಗೆ ಹೋಮಿಯೋಪತಿ ಔಷಧ ಪರಿಣಾಮಕಾರಿ.

೮. ಹೋಮಿಯೋಪತಿಯಲ್ಲಿ ಇಂಜಕ್ಷನ್, ಸರ್ಜರಿ, ಅನಸ್ತೆಸಿಯಾಗಳಿಲ್ಲ.

೯. ಟಾನಿಕ್, ಸಿರಪ್, ಮಿಶ್ರಣಗಳಿಲ್ಲ.

೧೦. ವೆಚ್ಚ ಕಡಿಮೆ, ಪರಿಹಾರ/ಪರಿಣಾಮ ಅದ್ಭುತ ಮತ್ತು ಸಂಪೂರ್ಣ.

೧೧. ಹೋಮಿಯೋಪತಿಯಲ್ಲಿ ನಿದ್ದೆ ಬರಿಸುವ, ಮತ್ತುಬರಿಸುವ (Sedatives) ಔಷಧಿಗಳಿಲ್ಲ. ಆದರೆ ನಿದ್ರಾಹೀನತೆ ರೋಗಕ್ಕೆ ಪರಿಣಾಮಕಾರಿ ಔಷಧಗಳಿವೆ.

೧೨. ಎಲ್ಲಾ ಕಾಯಿಲೆಗಳನ್ನೂ ಗುಣಪಡಿಸುವ ಸಾಮರ್ಥ್ಯ ಹೊಂದಿದ್ದು, ಹೋಮಿಯೋಪತಿ ಒಂದು ಪರಿಣಾಮವಾರಿ ವೈದ್ಯ ಪದ್ಧತಿ.

೧೩. ಮಹಾತ್ಮ ಗಾಂಧೀಜಿಯವರಿಗೆ ಹೋಮಿಯೋಪತಿ ವೈದ್ಯಪದ್ಧತಿ ತುಂಬಾ ಪ್ರಿಯವಾದ ವೈದ್ಯ ಪದ್ಧತಿ. ಏಕೆಂದರೆ : ಇಂಜಕ್ಷನ್, ಆಪರೇಶನ್‌ನಂತಹ ಹಿಂಸಾತ್ಮಕ ವ್ಯವಸ್ಥೆ ಇಲ್ಲದೆ, ಅಹಿಂಸಾತ್ಮಕವಾಗಿ ರೋಗಿಯನ್ನು ಔಷಧ ಸೇವೆ ಮೂಲಕ ಗುಣಪಡಿಸುವ ಸಾಮರ್ಥ್ಯ ಹೊಂದಿದೆ ಮತ್ತು ಸುಲಭ ಬೆಲೆಗೆ ದೊರೆಯುತ್ತದೆ.

೧೪. ಹೋಮಿಯೋಪತಿ ವೈದ್ಯರಲ್ಲಿ ದೇಹದ ಭಾಗಕ್ಕೆ ಸಂಬಂಧಪಟ್ಟಂತೆ ಅಥವಾ ರೋಗಗಳಿಗೆ ಸಂಬಂಧಪಟ್ಟಂತೆ ತಜ್ಞರು (Specialists) ಇರುವುದಿಲ್ಲ. ಒಬ್ಬ ಸಮರ್ಥ ಹೋಮಿಯೋಪತಿ ವೈದ್ಯ ಎಲ್ಲ ರೋಗಗಳನ್ನು ಮತ್ತು ಎಲ್ಲ ದೇಹ ಭಾಗಗಳ ರೋಗಗಳನ್ನು ನಿವಾರಣೆ ಮಾಡಬಲ್ಲ. ರೋಗವನ್ನು ಗುಣಪಡಿಸುವುದಲ್ಲ, ರೋಗಿಯನ್ನು ಗುಣಪಡಿಸುವುದೇ ಮೂಲ ಉದ್ದೇಶ (Treat the patient, not the disease).

ಹೋಮಿಯೋಪತಿ ವೈದ್ಯ ಪದ್ಧತಿ ಜಗತ್ತಿನಾದ್ಯಂತ ಬಳಕೆಯಲ್ಲಿದ್ದು, ಸಂಶೋಧನೆ, ಅಭಿವೃದ್ಧಿ ಮತ್ತು ಸರಳೀಕರಣ ನಿರಂತರವಾಗಿ ಜಾರಿಯಲ್ಲಿದೆ.

ಒಟ್ಟಾರೆ, ಹೋಮಿಯೋಪತಿ ವೈದ್ಯ ಪದ್ಧತಿ ಒಂದು ಸಂಪೂರ್ಣ ಹಾಗೂ ಪರಿಣಾಮಕಾರಿ ವೈದ್ಯ ಪದ್ಧತಿಯಾಗಿ ಹೊರಹೊಮ್ಮಿದ್ದು, ಆಧುನಿಕ ಜೀವನ ಶೈಲಿಗೆ ಒಂದು ಸಮರ್ಥ ಪದ್ಧತಿ. ಇಪ್ಪತ್ತೊಂದನೆಯ ಶತಮಾನದಲ್ಲಿ ಮನುಷ್ಯ ಬಹುಶಃ ಮಾನಸಿಕ ಬಳಲಿಕೆಯಿಂದ, ಆಧುನಿಕ ಆಹಾರ, ವಿಹಾರ ಪದ್ಧತಿಯಿಂದ ಜೀವನ ಶೈಲಿಯಿಂದ ರೋಗಗಳನ್ನು ಆಹ್ವಾನಿಸುತ್ತಾನೆ. ಇವೆಲ್ಲವುಗಳ ಪರಿಣಾಮ ದೈಹಿಕ ಅಸ್ವಾಸ್ಥ್ಯ ಹೋಮಿಯೋಪತಿ – ಒಟ್ಟಾರೆ, ಒಂದು ಆಧುನಿಕ ಜಗತ್ತಿಗೆ ಬೇಕೇ ಬೇಕಾದ ವೈದ್ಯ ಪದ್ಧತಿ.

(ಕೃತಜ್ಞತೆಗಳು : ಶ್ರೀ ಪಿ.ವಿ. ಸತ್ಯನಾರಾಯಣ, ಎಚ್.ಎಸ್.ಆರ್.ಎಫ್., ಬೆಂಗಳೂರು)

'ಸಹಸ್ರಶೀರ್ಷ', # ೨೬೧, ಬಿಸಿಸಿಹೆಚ್‌ಎಸ್ ಲೇಔಟ್, ವಾಜರಹಳ್ಳಿ, ತಲಘಟ್ಟಪುರ ಅಂಚೆ, ಬೆಂಗಳೂರು ೬೨

ಹಿಂದೂ, ಬೌದ್ಧ ಸಂಸ್ಕೃತಿಗಳಿಂದ ತೊಯ್ದದೇಶ

ಟಿ.ಎಸ್. ರಾಮಚಂದ್ರಮೂರ್ತಿ

ಕಾಂಬೋಡಿಯಾ ದೇಶಕ್ಕೆ ಹೋಗಬೇಕೆಂಬ ಇರಾದೆ ಬಹಳ ವರ್ಷಗಳಿಂದಲೂ ಇತ್ತು. ಬಹುಶಃ ೧೯೯೭ರಲ್ಲಿ National Geographic ಮೂಲಕ ಈ ದೇಶದ ವಿಷಯವನ್ನು ಸ್ವಲ್ಪ ಸ್ವಲ್ಪವಾಗಿ ತಿಳಿದುಕೊಂಡಿದ್ದೆ. ಅದಾದ ಮೇಲೆ ಟಿ.ವಿ.ಗಳ ಮುಖಾಂತರ ಪದೇ ಪದೇ ಅಲ್ಲಿರುವ ವಿಶಿಷ್ಟವಾದ ದೇವಸ್ಥಾನಗಳ ವಿಷಯದಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ಬರುತ್ತಿದ್ದ ದೃಶ್ಯಗಳನ್ನು ನೋಡಿ ಬೆರಗಾಗುತ್ತಿದ್ದೆ. ಎಂದಾದರೂ ಈ ದೇಶಕ್ಕೆ ಭೇಟಿ ಕೊಡೋಣವೆಂಬ ಉದ್ದೇಶ ನನ್ನದಾಗಿತ್ತು. ಅನೇಕ ದೇಶಗಳನ್ನು ಸುತ್ತಿದ್ದುದರಿಂದ ಈ ದೇಶದ ಭೇಟಿ ಅಸಾಧ್ಯವಾದುದಲ್ಲವೆಂಬುದೂ ನನ್ನ ಅನಿಸಿಕೆ ಆಗಿತ್ತು.

ನಾನು ಮತ್ತು ಕೆಲವು ಸ್ನೇಹಿತರು (ಸಮಾನ ಮನಸ್ಕರು) ಸೇರಿ ಹೋದ ವರ್ಷವೇ ಅಲ್ಲಿಗೆ ಹೋಗುವ ಏರ್ಪಾಟು ಮಾಡಿಕೊಂಡಿದ್ದೆವು. ಆದರೆ ಅದು ಕಾರಣಾಂತರಗಳಿಂದ ತಪ್ಪಿ ಹೋಯಿತು. ಅದೇ ಸಮಯದಲ್ಲಿ ನಾನು ಜಪಾನಿಗೆ ಹೋಗುವ ಅವಕಾಶ ಸಿಕ್ಕಿ ಅಲ್ಲಿಗೆ ಹೋಗಿ ಸುಮಾರು ಒಂದು ತಿಂಗಳ ಕಾಲ ಜಪಾನಿನ ಉದ್ದಗಲಕ್ಕೂ ಅಡ್ಡಾಡಿ ಬಂದಿದ್ದೆ.

೧೯೯೬ರಲ್ಲಿ ಹೋಗಬೇಕಾಗಿದ್ದ ಕಾಂಬೋಡಿಯಾ ಯಾತ್ರೆ ಈಗ ಫಲಿಸಿತು. ನಾನು ಮತ್ತು ನನ್ನ ಸ್ನೇಹಿತರಾದ ಪಿ.ಎನ್. ರಂಗನ್ ('ಮನು' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ) ನಾಲ್ಕೈದು ದಿನಗಳಿಂದ ಇಲ್ಲಿ ವಾಸ್ತವ್ಯಮಾಡಿದ್ದೆ. ಬೆಂಗಳೂರನ್ನು ೨೦೦೭ರ ಫೆಬ್ರವರಿ ೧೫ ರಂದು ಬಿಟ್ಟು ೧೬ನೇ ಶುಕ್ರವಾರ ೯.೩೦ ಗಂಟೆಗೆ ಬ್ಯಾಂಕಾಗ್ ನಗರದ ಮುಖಾಂತರ ಈ ದೇಶದ ಸಿಯಾಂರೀಪ್ ಎಂಬ ಪ್ರಾಂತ್ಯಕ್ಕೆ ಆಗಮಿಸಿ 'ಅಂಗ್ಕೊರ್' ಎಂಬ ಸಣ್ಣ ಪಟ್ಟಣದ ಪಾಂ ವಿಲೆಜ್ (Palm Village) ಎಂಬ ಸುಂದರವಾದ ರೆಸಾರ್ಟ್‌ನಲ್ಲಿ ತಂಗಿದ್ದೆವು. ಬೆಂಗಳೂರಿನಿಂದ ಕೇವಲ ನಾಲ್ಕುವರೆ ಘಂಟೆ ಪ್ರಯಾಣ !

ಈಗಾಗಲೇ ಎಲ್ಲಾ ದೇವಸ್ಥಾನಗಳನ್ನು ಸಂದರ್ಶಿಸಿದ್ದೆವು. ಈ ಊರಿನ ಬೇರೆ ಬೇರೆ ಭಾಗಗಳಲ್ಲಿ ಓಡಾಡಿದ್ದೆವು. ಅನೇಕ ಜನರ ಜೊತೆಯಲ್ಲಿ ಮಾತನಾಡಿದ್ದೆವು. ಯಾವುದೋ ಹೊರಗಿನ ದೇಶದಲ್ಲಿ ಆಡ್ಡಾಡುತ್ತಿದ್ದೇವೆ ಎಂಬ ಭಾವನೆ ನಮಗೆ ಇದುವರೆಗೂ ಬರಲಿಲ್ಲ. ಬೆಂಗಳೂರಿನಲ್ಲೋ, ಮೈಸೂರಿನಲ್ಲೋ ಅಥವಾ ಹೈದರಾಬಾದಿನಲ್ಲೋ ಓಡಾಡಿದ ಅನುಭವವನ್ನು ಇಲ್ಲಿ ಕಂಡೆವು. ಹಿಂದೂ ಮತ್ತು ಬೌದ್ಧ ಸಂಸ್ಕೃತಿಗಳಿಂದ ತೊಯ್ದದೇಶ ಇದಾಗಿದೆ. ಮತ್ತು ಅವುಗಳ ಅಪರೂಪದ ಸಂಗಮವೂ ಕೂಡ. ಇಲ್ಲಿರುವ ಈ ಅದ್ಭುತ ದೇವಸ್ಥಾನಗಳನ್ನು ನೋಡಿದಾಗ ನನ್ನ ಮನಸ್ಸಿನಲ್ಲಿ ಹಾದು ಹೋದ ವಿಷಯ ಇದು.

ನಮ್ಮ ದೇಶದ ಹಂಪೆಯನ್ನು ನಾವು ನೋಡಿದಾಗ ಯಾವ ರೀತಿಯಾಗಿ ಸಂತೋಷ, ದುಃಖ, ಜಿಗುಪ್ಸೆ, ದುಗುಡ, ಕೋಪ ಎಲ್ಲವೂ ಒಟ್ಟಿಗೆ ನಮ್ಮನ್ನು ಕಾಡಿಸುತ್ತೋ ಹಾಗೆಯೇ ಈ ದೇವಸ್ಥಾನಗಳನ್ನು ನೋಡಿದಾಗ ನಾವು ಇಂತಹ ಮನೋವಿಕಾರಕ್ಕೆ ಒಳಗಾಗುತ್ತೇವೆ. ಒಂದೊಂದು ಸಮಯ ಹಾಳು ಹಂಪೆಯನ್ನು ನೋಡಿದಾಗ ಮನಸ್ಸಿಗೆ ನೆಮ್ಮದಿಯನ್ನು ಕೊಡುವ ಕೆಲವು ಸ್ಥಳಗಳನ್ನಾದರೂ ನೋಡುತ್ತೇವೆ. ಹೆಚ್ಚಾಗಿ ನಾಶಕ್ಕೆ ಒಳಗಾಗದ ವಿಜಯ ವಿಠ್ಠಲಮಂದಿರ, ಕಲ್ಲಿನ ರಥ, ಕಮಲಮಹಲು, ರಾಣಿಸ್ನಾನಗೃಹ, ಆನೆಗಳ ಆಲಯ, ಪುರಂದರ ಮಹಲು, ಕಲ್ಯಾಣಿ, ರಾಮನವಮಿದಿಬ್ಬ, ತುಂಗಭದ್ರನದಿ, ಏಕಮುಖ ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ಭವ್ಯವಾಗಿರುವ ವಿರೂಪಾಕ್ಷ ದೇವಸ್ಥಾನ. ಇವುಗಳೆಲ್ಲ ಇರುವುದು ನಮ್ಮ ಪುಣ್ಯ, ದೇಶದ ಭಾಗ್ಯ

ಆದರೆ ಕಾಂಬೋಡಿಯಾದಲ್ಲಿ ಅಂಥ ಉಲ್ಲಾಸಮಯವಾದ ವಾತಾವರಣವನ್ನು ಕಲ್ಪಿಸುವ ಒಂದು ದೇವಸ್ಥಾನವೂ ಇಲ್ಲದೇ ಇರುವುದು ಈ ದೇಶದ ದೌರ್ಭಾಗ್ಯ ಮತ್ತು ಹಿಂದೂ ಧರ್ಮದ ದುರಂತವೆಂದೇ ಹೇಳಬಹುದು.

ಈ ದೇವಸ್ಥಾನದ ಅವಶೇಷಗಳನ್ನು ನೋಡಿದಾಗ ನಮಗಾಗುವ ಯಾತನೆ ಬೇರೆ ದೇಶದ ಜನಕ್ಕೆ ಆಗುವುದು ಅಸಂಭವ. ವಾಸ್ತುಶಿಲ್ಪಕ್ಕೆ ಸಂಬಂಧಪಟ್ಟ ವಿಷಯಗಳೇ ಅವರ ಅಧ್ಯಯನದ ಗುರಿಯಾಗುತ್ತದೆ. ಆ ದೃಷ್ಟಿಯಿಂದ ಅವರ ಅಧ್ಯಯನ, ದೇಗುಲಗಳ ಪುನರುತ್ಥಾನ ಇವೆಲ್ಲವೂ ಮುಖ್ಯವಾಗುತ್ತದೆ. ಆದರೆ ನಮಗೆ ಹೃದಯ ಹೃದಯದ ಬೆಸುಗೆ ಕಳಚಿ ಬಿದ್ದಂತಾಗುತ್ತದೆ. ಇವೇ ನಮಗೂ ಬೇರೆಯವರಿಗೂ ಇರುವ ವ್ಯತ್ಯಾಸ !

ನಾನು ಮೊದಲೇ ತಿಳಿಸಿದಂತೆ ಈಗ ನಾವು 'ಅಂಗ್ಕೊರ್' ಎಂಬ ಸ್ಥಳದಲ್ಲಿದ್ದೇವೆ. "ಅಂಗ್ಕೊರ್ ಆರ್ಕಿಯಾಲಜಿಕಲ್ ಪಾರ್ಕ್" ಎಂಬ ಪ್ರದೇಶ ಸುಮಾರು ಐನೂರು ಎಕರೆಗಳಿಂದ ಕೂಡಿದೆ. ಈ ಪ್ರದೇಶದಲ್ಲಿ ಬಹುತೇಕ ದೇವಸ್ಥಾನಗಳನ್ನು ನೋಡಬಹುದು. ಕೆಲವು ಸಮಯ ಟ್ಯಾಕ್ಸಿಗಳಲ್ಲಿ, ಕೆಲಸಮಯ 'ಟುಕ್‌ಟುಕ್' ಎಂಬ ತ್ರಿಚಕ್ರ ಮೋಟಾರ್ ಸೈಕಲ್‌ಗಳಲ್ಲಿ ಓಡಾಡಿ ಅನೇಕ ದೇವಸ್ಥಾನದ ಸಮುದಾಯಗಳನ್ನು ನೋಡಿ ಅವುಗಳ ವಿಶೇಷತೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ. ಆದರೆ ಅವುಗಳ ವಿಚಾರದಲ್ಲಿ ನಮ್ಮ ಜ್ಞಾನ ಇನ್ನೂ ಸೊನ್ನೆಯೆಂದೇ ಹೇಳಬಹುದು !

ನಮ್ಮಲ್ಲಿರುವ ತಂಜಾವೂರಿನ ಬೃಹದೇಶ್ವರ ದೇವಸ್ಥಾನವಾಗಲಿ, ತಿರುವಣ್ಣಾಮಲೆಯಲ್ಲಿರುವ ಅರುಣಾಚಲ ದೇವಸ್ಥಾನವಾಗಲಿ, ಮಧುರೆ ಮೀನಾಕ್ಷಿ ದೇವಸ್ಥಾನವಾಗಲೀ ಅಥವಾ ಬೇಲೂರು ಹಳೆಬೀಡು ದೇವಸ್ಥಾನಗಳಾಗಲೀ ಒರಿಯಾ ಮತ್ತು ಮಹಾಬಲಿಪುರ ದೇವಸ್ಥಾನಗಳಾಗಲೀ ಇಲ್ಲಿರುವ ದೇವಸ್ಥಾನಗಳಿಗೆ ಹೋಲಿಸುವುದು ಕಷ್ಟವೇ. ಗಾತ್ರದಲ್ಲಿ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಬಹುವಿಭಿನ್ನವಾಗಿ ಕಾಣುತ್ತವೆ. ಅಲ್ಲಿ ಇಲ್ಲಿ ಚೋಳ, ಪಲ್ಲವ, ಹೊಯ್ಸಳ ಅಥವಾ ಒರಿಯಾ ವಾಸ್ತುಶಿಲ್ಪದ ಛಾಯೆ ಅಲ್ಲಲ್ಲಿ ಕಂಡರೂ ಅವುಗಳ intensityಯ ದೃಷ್ಟಿಯಿಂದ ಮತ್ತು ಕಟ್ಟಡದ ದೃಷ್ಟಿಯಿಂದ ಅವು ಬೇರೆಯೆ ಎಂದು ಹೇಳಬಹುದು. ನಮ್ಮ ಕಲ್ಪನೆಯ ಶ್ರೀ ವಿಷ್ಣುವಿನ ವೈಕುಂಠದ ಭವ್ಯತೆ ಮತ್ತು ಪರಶಿವನ ಕೈಲಾಸದ ವಿಸ್ತಾರ ಮತ್ತು ಸೌಂದರ್ಯ ಅಲ್ಲಿನ ದೇವಸ್ಥಾನಗಳಲ್ಲಿ ಕಾಣುವಷ್ಟು ನಮ್ಮಲ್ಲಿ ಕಾಣಲಾರವೆಂಬುದು ನನ್ನ ಅನಿಸಿಕೆ. ಅವುಗಳ ಭವ್ಯವಾದ ಮತ್ತು ಅಗಾಧವಾದ ದೃಶ್ಯವನ್ನು ಕಣ್ಣುಗಳಲ್ಲಿ ಮತ್ತು ಮನಸ್ಸುಗಳಲ್ಲಿ ತುಂಬಿಕೊಳ್ಳುವುದು ಕಷ್ಟದ ಕೆಲಸವೇ !

ಕಾಂಬೋಡಿಯಾ ಅಥವಾ ಕಂಬುಜ ರಾಜ್ಯ ಹೇಗೆ ಸ್ಥಾಪನೆಯಾಯಿತು ಎಂಬುದು ವಿವಾದದ ವಿಷಯ. ಆದರೆ ಪ್ರಚಲಿತವಾಗಿರುವ ಪುರಾಣಕಥೆಗಳಿಂದ ಈ ಕೆಳಗೆ ಕಂಡ ಅಂಶವು ತಿಳಿಯುತ್ತದೆ. ಆರ್ಯಾವರ್ತದಿಂದ ಕಂಬು ಸ್ವಾಯಂಭುವ ಎಂಬ ಶಿವ ಭಕ್ತನೊಬ್ಬನು ತನ್ನ ಪತ್ನಿಯ ಮರಣದಿಂದ ಅತೀವ ದುಃಖಿತನಾಗಿ ಈ ದೇಶಕ್ಕೆ ಬಂದು ಅಲ್ಲಿನ ಮರುಭೂಮಿಯಂತಿರುವ ಪ್ರದೇಶದಲ್ಲಿ ಸಾಯಬೇಕೆಂದು ತೀರ್ಮಾನಿಸುತ್ತಾನೆ. ಆಗ ಇದ್ದಕ್ಕಿದ್ದಂತೆ ಹಾವುಗಳು ಅವನನ್ನು ಕಚ್ಚಲು ಅವನೆಡೆಗೆ ಧಾವಿಸಿ ಬರುವುದನ್ನು ಕಂಡು ಅವುಗಳನ್ನು ಕೊಲ್ಲಲು ಆಯುಧವನ್ನು ಮೇಲೆತ್ತಿದಾಗ ಒಂದು ಸರ್ಪವು ಅವನನ್ನು ಸಮಾಧಾನಮಾಡಿ ತಮ್ಮ ಜೊತೆಯಲ್ಲಿಯೇ ಜೀವನ ಮಾಡಬೇಕೆಂದು ಕೇಳಿಕೊಳ್ಳುತ್ತದೆ. ಅದಕ್ಕೆ ಅವನು ಒಪ್ಪಿಕೊಂಡು ಹಾಗೆಯೇ ಇದ್ದು ಸ್ವಲ್ಪ ಕಾಲಾನಂತರ ಒಬ್ಬ ನಾಗಿಣಿಯನ್ನು ಮದುವೆಯಾಗುತ್ತಾನೆ. ಆಗ ಸರ್ಪಗಳ ರಾಜನು ತನ್ನ ಮಂತ್ರ ಶಕ್ತಿಯಿಂದ ಪ್ರದೇಶವನ್ನು ಆರ್ಯದೇಶದಂತೆಯೇ ಫಲವತ್ತಾಗಿ ಮಾಡುತ್ತಾನೆ. ಅಲ್ಲಿಯೇ ಕಂಬುವು ರಾಜ್ಯವಾಳಿದ್ದರಿಂದ ಆ ಪ್ರದೇಶಕ್ಕೆ ಕಂಬುಜ ಎಂದು ಹೆಸರು ಬರುತ್ತದೆ. ಇದೇ ಈಗಿನ ಕಾಂಬೋಡಿಯ. ಇದು ಈ ಕಥೆಯ ಸಾರಾಂಶ. ಮುಂದೆ ಈ ಪ್ರದೇಶವು ದೊಡ್ಡ ಚಕ್ರಾಧಿಪತ್ಯವಾಗಿ ಕಂಗೊಳಿಸಿತೆಂದು ನಾವು ಅನೇಕ ಶಾಸನಗಳು ಮತ್ತು ಚರಿತ್ರೆಗಳ ಮುಖಾಂತರ ತಿಳಿಯುತ್ತೇವೆ.

ಇದಕ್ಕೆ ಹಿಂದೆ ಇದ್ದ ಫೂನಾನ್ ಎಂಬುದು ಕಂಬುಜದ ಅತಿ ಪ್ರಾಚೀನ ರಾಜ್ಯ. ಈ ರಾಜ್ಯಕ್ಕೆ ಭಾರತದಿಂದ ಬಂದ ಕೌಂಡಿನ್ಯನೆಂಬ ಬ್ರಾಹ್ಮಣ ತನ್ನ ತಪಃಶಕ್ತಿಯಿಂದ ಆ ರಾಜ್ಯದಲ್ಲಿದ್ದ ಲ್ಯೂಜಿ ಎಂಬ ರಾಣಿಯನ್ನು ಸೋಲಿಸಿ ತಾನೇ ರಾಜನಾದನೆಂಬ ಕಥೆ ಪ್ರಚಲಿತವಾಗಿದೆ. ಈತನೇ ಈ ರಾಜ್ಯದಲ್ಲಿ ಒಳ್ಳೆಯ ಸಂಸ್ಕೃತಿಯನ್ನು ಮತ್ತು ಸಂಸ್ಕೃತವನ್ನು ಪ್ರಚಾರಕ್ಕೆ ತಂದನೆಂದು ಚರಿತ್ರೆ ಮತ್ತು ಶಾಸನಗಳ ಮುಖಾಂತರ ಗೋಚರವಾಗುತ್ತದೆ. ಮುಂದೆ ಅಂದರೆ ಮೂರು ಶತಮಾನಗಳ ಚರಿತ್ರೆಯು ಅಷ್ಟು ಸರಿಯಾಗಿ ತಿಳಿಯುವುದಿಲ್ಲ. ನಾಲ್ಕನೆಯ ಶತಮಾನದ ಕೊನೆಯ ಭಾಗದಲ್ಲಿ ಸಮುದ್ರಗುಪ್ತನಿಂದ ಸೋಲನ್ನು ಅನುಭವಿಸಿದ ಕುಷಾನರು ಈ ದೇಶವನ್ನು ಸೇರಿ ಅಲ್ಲಿ ನೆಲಸಿದರೆಂಬುದು ಕೆಲವರ ಅಭಿಪ್ರಾಯ.

ಕ್ರಿ.ಶ. ಐದನೆಯ ಶತಮಾನದ ಆದಿ ಭಾಗದಲ್ಲಿ ಭಾರತದಿಂದ ಮತ್ತೆ ವಲಸೆ ಬಂದ ಇನ್ನೊಬ್ಬ ಕೌಂಡಿನ್ಯನ ಕಥೆಯು ಕೇಳಿಬರುತ್ತದೆ. ಈತನ ಕಾಲದಲ್ಲೇ ಮತ್ತೆ ದಕ್ಷಿಣ ಮತ್ತು ಪೂರ್ವ ಭಾರತದಿಂದ ಕೆಲವು ಬ್ರಾಹ್ಮಣ ಪಂಡಿತರು ಇಲ್ಲಿಗೆ ಬಂದು ತಮ್ಮ ಧರ್ಮ ಮತ್ತು ಸಂಸ್ಕೃತಿಯನ್ನು ಬಿತ್ತಿದರೆಂದು ಅನೇಕ ಚೀನಿ ಗ್ರಂಥಗಳು ಸ್ಪಷ್ಟಪಡಿಸಿದ ಹಾಗೆ ಕಾಣುತ್ತದೆ. ಕೌಂಡಿನ್ಯನ ನಂತರ ಬಂದ ಜಯವರ್ಮನೆಂಬರಾಜನು ಅನೇಕ ಬದಲಾವಣೆಗಳನ್ನು ಜನಗಳ ಜೀವನದಲ್ಲಿ ತಂದನೆಂಬ ವಿಚಾರ ಚೀನಾ ದೇಶದಿಂದ ಬಂದ ರಾಯಭಾರಿಗಳು ಬರೆದ ಮತ್ತು ಅದೇ ದೇಶದ ವಂಶಾನುಚರಿತ್ರೆಗಳಿಂದ ತಿಳಿದುಬರುತ್ತದೆ. ಜಯವರ್ಮನು ಮಡಿದ ಮೇಲೆ (ಕ್ರಿ.ಶ. ೫೧೪) ಅವನ ಮಗ ರುದ್ರವರ್ಮ, ಆಮೇಲೆ ಗುಣವರ್ಮ ಹೀಗೆ ಅನೇಕ ರಾಜರುಗಳು ಆಳಿ ಕಡೆಗೆ ಅಂದರೆ ಏಳನೆಯ ಶತಮಾನದ ಕೊನೆಗೆ ಈ ಪ್ರಾಚೀನ ರಾಜ್ಯ ಕಂಬುಜದ ರಾಜ್ಯಕ್ಕೆ ಸೇರಿ ದೊಡ್ಡ ಚಕ್ರಾಧಿಪತ್ಯವಾಗುತ್ತದೆ. ಈ ಚಕ್ರಾಧಿಪತ್ಯಕ್ಕೆ ಖ್ಮೇರ್ (Khmer) ಚಕ್ರಾಧಿಪತ್ಯವೆಂದು ಮೊದಲಿನಿಂದಲೂ ಕರೆಯಲಾಗಿದೆ. ಈ ಚಕ್ರಾಧಿಪತ್ಯವನ್ನೂ ಆಳಿದ ದೊರೆಗಳ ಹೆಸರುಗಳು ಮತ್ತು ಅವರು ಸ್ಥಾಪಿಸಿದ ದೇವಸ್ಥಾನಗಳ ಹೆಸರು ಈ ರೀತಿಯಾಗಿವೆ.

ಜಯವರ್ಮನ್ II	೭೯೦–೮೩೫	ರಾಂಗ್‌ಚೆನ್–ಕುಟಿಸ್ವರದ ಹತ್ತಿರ
ಜಯವರ್ಮನ್ III	೮೩೫–೮೭೭	ಪ್ರೆಯ್ ಮಾಂಟ್–ಬಾಕಾಂಗ್
ಇಂದ್ರವರ್ಮನ್ I	೮೭೭–೮೮೯	ಪ್ರೆಯ್ ಕೊ–ಬಾಕಾಂಗ್ (ಸ್ಟ್ಯಾಂಡ್ ಸ್ಟೋನ್)
ಯಸೋವರ್ಮನ್ I	೮೮೯–೯೧೫	ಲೊಲ್ಯೆ ಪೂರ್ವದ ಬ್ಯಾರೇ ಸಮೀಪ
ಹರ್ಷವರ್ಮನ್ I	೯೧೫–೯೨೩	ಬಾಕ್ಸಯ್ ಚೆಮ್‌ಕಾಂಗ್–ಪ್ರಸಾತ ಕವನ್
ಈಸಾನ್ ವರ್ಮನ್	೯೨೩–೯೨೮	
ಜಯವರ್ಮನ್ IV	೯೨೮–೯೪೧	
ಹರ್ಷವರ್ಮನ್ II	೯೪೧–೯೪೪	
ರಾಜೇಂದ್ರ ವರ್ಮನ್	೯೪೪–೯೬೮	ಫ್ರೆರಪ್, ಪೂರ್ವ ಮೇಬಾನ್ ಇತ್ಯಾದಿ
ಜಯವರ್ಮನ್ II	೯೬೮–೧೦೦೦	ಟಾಕಿಯೋ–
ಉದಯಾದಿತ್ಯವರ್ಮನ್ I	೧೦೦೧–೧೦೦೨	
ಜಯವೀರವರ್ಮನ್	೧೦೦೨–೧೦೧೦	ಟಾಕಿಯೋ ಮುಂದುವರಿಕೆ
ಸೂರ್ಯವರ್ಮನ್	೧೦೦೨–೧೦೪೯	ದಕ್ಷಿಣ ಕೆಯಾಂಗ್, ಮತ್ತು ಪ್ರೆಯಾವಿಹಾರ್ ಇತ್ಯಾದಿ
ಉದಯಾದಿತ್ಯವರ್ಮನ್ II	೧೦೫೦–೧೦೬೬	ಬಪಾನ್, ಪಶ್ಚಿಮ ಮೆಬಾನ್
ಹರ್ಷವರ್ಮನ್ III	೧೦೬೬/೭–೧೦೮೦	
ಜಯವರ್ಮನ್ VI	೧೦೮೦–೧೧೦೭	
ಧರಣೇಂದ ವರ್ಮನ್ I	೧೧೦೭–೧೧೧೨	
ಸೂರ್ಯವರ್ಮನ್ II	೧೧೧೩–೧೧೫೦	ಅಂಗ್ಕೊರ್ ವಾಟ್, ಕೊ ಮನಾನ್, ಬಂಟೆ ಸಾಮ್ರೆ ಇತ್ಯಾದಿ.
ಯಶೋವರ್ಮನ್ II	೧೧೫೦–೧೧೬೫	ಬೆಂಗ್ ಪಾಲಾಲಿಯ ಚೊಸೆ ಟವೇಡಿಯೊ
ತ್ರಿಭುವನಾದಿತ್ಯವರ್ಮನ್	೧೧೬೫–೧೧೭೭	
ಜಯವರ್ಮನ್ VII		ಟಾಪ್ರೋಮ್, ಜಯತಟಾಕ ಬ್ಯಾರೆ, ಅಂಗ್ಕೊರ್ ಥೊಂ ಇತ್ಯಾದಿ

ಏಳನೆಯ ಜಯವರ್ಮನ ಅನಂತರ ಕಂಬುಜದ ಅವನತಿಯು ಪ್ರಾರಂಭವಾಯಿತು. ಇಂದ್ರವರ್ಮ, ಎಂಟನೆಯ ಜಯವರ್ಮ ಶ್ರೀನ್ದ್ರವರ್ಮನ್, ಶ್ರೀನ್ದ್ರಜಯವರ್ಮನ್ ಮತ್ತು ಜಯವರ್ಮನ್ ಪರಮೇಶ್ವರ ಹೀಗೆ ಈ ರಾಜರುಗಳು ೧೨೨೦ ರಿಂದ ೧೩೨೭ ರವರೆಗೆ ರಾಜ್ಯ ಭಾರಮಾಡಿದರೂ ಹೆಚ್ಚಾಗಿ ಪ್ರಗತಿಯನ್ನು

ಸಾಧಿಸಲಿಲ್ಲ. ಜೊತೆಗೆ ಚಂಪಾ ರಾಜ್ಯವು ಕೈಬಿಟ್ಟು ಹೋಗುತ್ತದೆ. ಅಲ್ಲದೇ ಮಂಗೋಲಿಯನ್ನರ ಕಾಟವೂ ಬೇರೆ !

ಕ್ರಿ.ಶ. ೧೩೫೨ರಲ್ಲಿ ಸಯಾಮಿನ ರಾಜನು ಕಂಬುಜದ ರಾಜನನ್ನೂ ಸೋಲಿಸಿ ತನ್ನ ಮಗನನ್ನೂ ಕಂಬುಜ ರಾಜ್ಯಕ್ಕೆ ಅಧಿಪತಿಯನ್ನಾಗಿ ಮಾಡಿದನಂತೆ. ಇದಾದ ಕೆಲವು ವರ್ಷಗಳ ಮೇಲೆ ಒಳಜಗಳಗಳಿಂದ ಕಂಬುಜದ ರಾಜಧಾನಿ ಹಾಳು ಬೀಳುತ್ತದೆ. ಇಲ್ಲಿಗೆ ಭಾರತೀಯ ಸಂಸ್ಕೃತಿಯ ಪ್ರಭಾವ ಮುಗಿಯಿತೆಂದು ಹೇಳಬಹುದು. ಕ್ರಿ.ಶ. ೧೩೮೭ರ ಮಿಂಗ್ ಚರಿತ್ರೆಯು ಈ ವಿಷಯಗಳನ್ನು ಉಲ್ಲೇಖಿಸಿದೆ.

ಕಂಬುಜದ ಸುಮಾರು ೨೭ ಹಿಂದೂ ದೊರೆಗಳ ಚರಿತ್ರೆಯನ್ನು ಓದಿದಾಗ ನಮ್ಮ ಗಮನವನ್ನು ಸೆಳೆಯುವ ರಾಜರುಗಳು ಯಾರೆಂದರೆ ಸೂರ್ಯವರ್ಮನ್ ಎರಡು ಮತ್ತು ಜಯವರ್ಮನ್ ಏಳು. ಈ ಇಬ್ಬರ ಕೊಡುಗೆಗಳು ಅಸಾಧಾರಣವಾದದ್ದು.

ಸೂರ್ಯವರ್ಮನ ಕಾಲದಲ್ಲಿ ಫ್ನಾಂ ಚಿಸಾರ್, ಫ್ನಾಂ ಸ್ಯಾಂಡಕ್, ವತಪ್ರ, ಪ್ರೈವಿಹಾರ್ ಮುಂತಾದ ಕಡೆಗಳಲ್ಲಿ ದೇವಾಲಯದ ಕಾರ್ಯಗಳು ಬಿರುಸಿನಿಂದ ಸಾಗಿದ್ದಾಗಿ ಕಾಣುತ್ತದೆ. ಆಂಗ್ಕೊರೆ ಥೊಮಿನ ಕೆಲವು ಭಾಗಗಳು ಇವನ ಕಾಲದಲ್ಲಿ ನಿರ್ಮಾಣವಾದವು. ಅತ್ಯಂತ ಮುಖ್ಯವಾದ ಅಂಗ್ಕೊರ್ ವಾಟ್ ಇವನ ಕಾಲದಲ್ಲೇ ಕಟ್ಟಲ್ಪಟ್ಟಿತು. ಇದು ಮಹಾವಿಷ್ಣುವಿನ ದೇವಸ್ಥಾನ. ವೈಷ್ಣವ ಮತಾವಲಂಬಿಯಾಗಿದ್ದ ಈತನ ಮರಣೋತ್ತರ ಹೆಸರು 'ಪರಮವಿಷ್ಣುಲೋಕ' ಎಂದು ಕರೆಯಲ್ಪಟ್ಟಿದೆ. ದಿವಾಕರ ಪಂಡಿತ ಈತನ ಗುರು. ಈತನ ಮಾರ್ಗದರ್ಶನದಲ್ಲಿ ಅನೇಕ ಹೋಮಗಳನ್ನು ಮತ್ತು ಯಜ್ಞಗಳನ್ನು ಮಾಡಿರುವುದಾಗಿ ತಿಳಿದು ಬರುತ್ತದೆ. ಜೊತೆಗೆ ಅಂಗ್ಕೊರ್ ವಾಟ್ ವಾಸ್ತು ಶಿಲ್ಪಗಳಿಗಾಗಿ ಇವನ ಹೆಸರು ಅಜರಾಮರ.

'ದೇವರಾಜ'ನೆಂದೇ ಪ್ರಸಿದ್ಧಿಯನ್ನು ಪಡೆದ ಎರಡನೆಯ ಸೂರ್ಯವರ್ಮನ್ ಅಂಗ್ಕೊರ್ ವಾಟ್ ದೇವಸ್ಥಾನವನ್ನು ೧೧೧೨-೧೧೫೨ರ ಅವಧಿಯಲ್ಲಿ ನಿರ್ಮಿಸಿರುವುದಾಗಿ ಕಾಣುತ್ತದೆ. ಸಹಸ್ರ ಸಹಸ್ರ ಕೆಲಸಗಾರರು ಸುಮಾರು ೪೦ ವರ್ಷಗಳಷ್ಟು ಶ್ರಮಿಸಿ ಈ ದೇವಾಲಯದ ಉಗಮಕ್ಕೆ ಕಾರಣರಾಗಿದ್ದಾರೆ. ಈ ದೇವಸ್ಥಾನದ ಸಮುದಾಯ ಸುಮಾರು ಐನೂರು ಎಕರೆಗಳಲ್ಲಿ ಪ್ರಸರಿಸಿದೆ. ದೇವಾಲಯದ ಗೋಪುರಗಳು ಮತ್ತು ಅದರಲ್ಲಿ ಅಡಗಿರುವ ವಾಸ್ತುಶಿಲ್ಪ ಅತ್ಯಮೋಘವಾಗಿವೆ. ದೇವಸ್ಥಾನದ ಪ್ರಾಕಾರದ ಗೋಡೆಗಳ ಮೇಲಿರುವ ಕೆತ್ತನೆಯ ಕೆಲಸ ಮತ್ತು ಅದರ ವಿನ್ಯಾಸಗಳು ನಮ್ಮ ಮಹಾಕಾವ್ಯಗಳನ್ನು ಪ್ರತಿಬಿಂಬಿಸುವ ದ್ಯೋತಕಗಳಾಗಿವೆ.

ಮಧ್ಯಭಾಗದಲ್ಲಿ ಗರ್ಭಗುಡಿಯಲ್ಲಿ ಅತ್ಯಂತ ಎತ್ತರದಲ್ಲಿ (65mtrs) ಹೊಂದಿರುವ ಈ ದೇವಸ್ಥಾನ ಮೂರು ಹಂತಗಳಲ್ಲಿ ಚೌಕಾಕಾರದ ಪ್ರಾಕಾರಗಳನ್ನು ಹೊಂದಿದೆ. (1km sq). ಮೊದಲಿನ ಪ್ರಾಕಾರದಲ್ಲೇ ನಾವು ನೋಡಬಹುದಾದ ಮತ್ತು ಮಹತ್ತರವಾದ ಕೆತ್ತನೆಯ ಶಿಲ್ಪದ ವಿವರ ಹೀಗಿದೆ. ಉತ್ತರದ ಮಹಾದ್ವಾರದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಬಾಣಾಸುರ ಮತ್ತು ೨೧ ದೇವರುಗಳ ಕಥೆ ಪಶ್ಚಿಮ ಮಹಾದ್ವಾರದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ರಾಮಾಯಣದ ಮತ್ತು ಮಹಾಭಾರತದ ಕಥೆ, ದಕ್ಷಿಣ ಮಹಾದ್ವಾರದ ಪೂರ್ವ ಮತ್ತು ಪಶ್ಚಿಮದ ಭಾಗಗಳಲ್ಲಿ ಸೂರ್ಯವರ್ಮನ ಮತ್ತು ಸ್ವರ್ಗ ಮತ್ತು ಪಾತಾಳಗಳ ಕಥೆ, ಪೂರ್ವ ಮಹಾದ್ವಾರದ ದಕ್ಷಿಣ ಮತ್ತು ಉತ್ತರದ ಭಾಗಗಳಲ್ಲಿ ಸಮುದ್ರಮಂಥನ ಮತ್ತು ದಶಾವತಾರಗಳ ಕಥೆಗಳನ್ನು ಅತ್ಯಂತ ಸುಂದರವಾದ ಶಿಲ್ಪದಲ್ಲಿ ಕಾಣಬಹುದು. ಇವೂ ಅಲ್ಲದೆ ದೇವಸ್ಥಾನದ ಮುಂದಿನ ಭಾಗಗಳಲ್ಲಿ ಕಮಲದ ತಟಾಕಗಳನ್ನು ಕಾಣಬಹುದು. ಜೊತೆಗೆ ಉತ್ತರದ ಮಹಾದ್ವಾರದ ಎರಡು ಪಕ್ಕಗಳಲ್ಲಿ ಪುಸ್ತಕ ಮತ್ತು ತಾಳೆಗರಿಗಳ ಭಂಡಾರಗಳನ್ನು ಕಾಣಬಹುದಾಗಿದೆ. ಈ ದೇವಾಲಯದ ಮುಂಭಾಗದಲ್ಲೇ ಅತ್ಯಂತ ಸುಂದರವಾದ ಬ್ಯಾರೆಗಳನ್ನು (ನೀರಿನ ಕಂದಕಗಳು) ಕಾಣಬಹುದು.

ಈ ದೇವಸ್ಥಾನಗಳ ಸಮುದಾಯದಲ್ಲಿ ಅತ್ಯಂತ ಮುಖ್ಯವಾಗಿ ಗಮನಿಸಬೇಕಾದ ಅಂಶ 'ಸಮುದ್ರ ಮಂಥನ'. ಎಲ್ಲ ದೇವಸ್ಥಾನಗಳ ಪ್ರಾಕಾರಗಳಲ್ಲಿ ಅಥವ ಈ ದೇಗುಲಗಳ ಮುಂದೆ ವಾಸುಕಿಯ ಹೆಡೆಯನ್ನು ಮತ್ತು ದೇಗುಲಗಳನ್ನು ಸುತ್ತಿಕೊಂಡಿರುವ ಬೃಹದಾಕಾರದ ದೇಹವನ್ನು ನೋಡುತ್ತೇವೆ. ಅಂಗ್ಕೊರ್ ವಾಟ್‌ನ ಪೂರ್ವದ ಕೈಸಾಲೆಯಲ್ಲಿ ಈ ಅಪರೂಪದ ಸಮುದ್ರ ಮಂಥನದ ಚಿತ್ರಗಳನ್ನು ಬಿಡಿಸಲಾಗಿದೆ. ಇವುಗಳ ವಿಚಾರದಲ್ಲಿ ಒಬ್ಬ ಪಾಶ್ಚಿಮಾತ್ಯನ ಅನಿಸಿಕೆ ಇದು :

"Taken from the Bhagavata-Purana, this great Hindu creation myth is here spectacularly realized in one continuous 49m panel. By pulling alternately on the body of the giant naga Vasuki, which is coiled around Mount Mandara, the gods and asures rotate the mountain for 1000 years to churn. The cosmic sea-the sea of milk-and so produce amrita, the elixir of immortality. In the event, this cooperation between gods and asures is shattered as soon as the amrita begins to be produced. The gods go back on their promise to give half to the asures, who then try to steal it. The scene here, however, is the actual churning."

ಈ ಕೆತ್ತನೆಯಲ್ಲಿ ಬಹಳ ವಿಚಿತ್ರವಾದ ಸನ್ನಿವೇಶವನ್ನು ಕಾಣಬಹುದು. ಭಾಗವತ ಪುರಾಣದಲ್ಲಿ ಬರುವ ಈ ಪ್ರಸಂಗದ ಜೊತೆಗೆ ರಾಮಾಯಣದಲ್ಲಿ ಬರುವ ರಾವಣ ಮತ್ತು ಹನುಮಂತರನ್ನು ತಂದಿರುವುದು. ಇದು ಒಂದು ಅನಿರೀಕ್ಷಿತವಾದ ಸಂದರ್ಭ. ರಾವಣನು ವಾಸುಕಿಯ ಹೆಡೆಯನು ಹಿಡಿದು ಎಳೆಯುವುದು, ಹನುಮಂತನು ಅದರ ಬಾಲವನ್ನು ಹಿಡಿದು ಎಳೆಯುತ್ತಿರುವುದು ಸೋಜಿಗದ ಸಂಗತಿ. ಆದರೆ ಅದು "Represents the Khmer combining ancient Vedic legend with characters from the Ramayana". ಈ ದೇವಸ್ಥಾನದಲ್ಲಿ ಚಿತ್ರವಿಚಿತ್ರವಾದ ಸಂಗತಿಗಳನ್ನು ನೋಡುವುದರ ಜೊತೆಗೆ, ನಮ್ಮ ವೇದಗಳ, ಪುರಾಣಗಳ ಮತ್ತು ಮಹಾಕಾವ್ಯಗಳ ಪರಿಚಯವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಅಂಗ್ಕೋರ್ ವಾಟ್ ದೇವಸ್ಥಾನದ ವಿಚಾರದಲ್ಲಿ ಇನ್ನೊಬ್ಬ ಪ್ರವಾಸಿಗನ ಅನಿಸಿಕೆ ಇದಾಗಿದೆ :

"Angkor wat is surrounded by a moat and an exterior wall measuring 1300m x1500ms. The temple itself is 1 km sq and consists of three levels surmounted by a central tower. The walls of the temple are covered inside and out with bas relief's and carvings. Nearly 2000 distinctively rendered apsara carvings adorn the walls through out the temple and represent some of the finest examples of apsara carvings in Angkorian era art. And it is the exterior walls of the lower level that display the most extraordinary bas-relief's, depicting stories and characters from Hindu mythology and the historical wars of Suryavarman II. .. The visual impact of Angkor wat, particularly on one's first visit, is awesome."

ಕಾಂಬೋಡಿಯಾದಿಂದ ವಾಪಸ್ಸು ಬರುವಾಗ ನನ್ನ ಪರ್ಯಟನೆಯ ಜ್ಞಾಪಕ ವಸ್ತುವಾಗಿ ಒಂದು ಸುಂದರವಾದ ಅಪ್ಸರೆಯನ್ನು ಹಿಡಿದು ತಂದಿದ್ದೇನೆ !

ನಾವು ಅಲ್ಲಿದ್ದ ಸಮಯದಲ್ಲಿ ಸುಮಾರು ೧೬ ದೇವಸ್ಥಾನಗಳನ್ನು ಸಂದರ್ಶಿಸುವುದಕ್ಕೆ ಸಾಧ್ಯವಾಯಿತು. ನಾವು ಸಂದರ್ಶಿಸಿದ ದೇವಸ್ಥಾನಗಳು ಯಾವುವೆಂದರೆ ; ಬಯಾನ್, ಆನೆಗಳ ಜಗಲಿ ಅಥವ ಕಟ್ಟೆ, ಲೆಪರ್‌ಕಿಂಗ್‌ನ ಕಟ್ಟೆ, ಫೆಮಿನಿಕಾಸ್, ಬಾನ್, ಮೀಕ್ ಪಿಯಾನ್, ಮೇಬೆಗಾನ್, ಟೊಲ್ಸೈ, ಭಾಕಮ್, ಪ್ರೇಕೊ, ಥಮನಾನ್, ಫೇಕಾಂಗ್ ಪರ್ವತ, ಅಂಗ್ಕೋರ್ ವಾಟ್, ಟಾಪ್ರೊಮ್, ಬಂತೇಶ್ರೀ ಮತ್ತು ಬಂತ್ ಸಾಮ್ರೆ (ಇವುಗಳ ಉಚ್ಚಾರದಲ್ಲಿ ಬದಲಾವಣೆ ಇದ್ದರೂ ಇರಬಹುದು. ಸಮಯದ ಅಭಾವದಿಂದ ಅನೇಕ ಪದಗಳ ಉಚ್ಚಾರವನ್ನು ತಿಳಿದುಕೊಳ್ಳಲು ಆಗಲಿಲ್ಲ. ಕ್ಷಮಿಸಬೇಕು)

ನಾವು ನೋಡಿದ ಬಹುತೇಕ ದೇವಸ್ಥಾನಗಳು ಶಿವನಿಗೆ ಅರ್ಪಿತವಾಗಿವೆ. ಮಿಕ್ಕ ಕೆಲವು ಮಹಾವಿಷ್ಣುವಿಗೆ ಅರ್ಪಿತವಾದರೆ ಕೆಲವು ಬುದ್ಧವಿಹಾರಗಳಾಗಿವೆ. ಕೆಲವು ಮೂರು ಗೋಪುರಗಳಿಗೆ ಸೀಮಿತವಾಗಿದ್ದರೆ ಮತ್ತೆ ಕೆಲವು ಐದು ಗೋಪುರಗಳಿಗೆ ಸೀಮಿತವಾಗಿರುತ್ತವೆ. ವಿಧ ವಿಧವಾದ ಪ್ರಾಕಾರಗಳು, ಅವುಗಳ ಕೈಸಾಲೆಯಲ್ಲಿ ವಿಧ ವಿಧವಾದ ಕೆತ್ತನೆಯ ಕೆಲಸಗಳು (ರಾಮಾಯಣ, ಮಹಾಭಾರತ, ದಶಾವತಾರ, ಸಮುದ್ರ ಮಂಥನ, ಬುದ್ಧನ ಕಥೆಗಳಿಗೆ ಸಂಬಂಧಪಟ್ಟಿರುವಂತಹ) ಅನೇಕ ರೀತಿಯ ತಟಾಕಗಳು, ಸರೋವರಗಳ ಮಧ್ಯೆಯಿರುವ ದೇವಸ್ಥಾನಗಳು ಮತ್ತು ಪರ್ವತ ದೇವಸ್ಥಾನಗಳು (Mountain Temples) ಹೀಗೆ

ಹಲವು ಹತ್ತು ರೀತಿಯ ಮತ್ತು ವಾಸ್ತುಶಿಲ್ಪ ಶಾಸ್ತ್ರಕ್ಕೆ ಅನುಗುಣವಾದ ದೇವಸ್ಥಾನಗಳನ್ನು ನಿರ್ಮಿಸಲಾಗಿದೆ. ಜೊತೆಗೆ ಈ ದೇವಸ್ಥಾನಕ್ಕೆ ಸಂಬಂಧಿಸಿದಂತೆ ಅನೇಕ ಬ್ರಾಹ್ಮಿ ಲಿಪಿಯ/ಸಂಸ್ಕೃತದ ಶಾಸನಗಳನ್ನ (ನೂರಾರು) ನೋಡಬಹುದಾಗಿದೆ. ಇವುಗಳ ವಿಚಾರದಲ್ಲಿ ವ್ಯಾಪಕವಾದ ಪರಿಶೋಧನೆ ಮತ್ತು ಎಲೆಯಿಲ್ಲದ ಅಭ್ಯಾಸ ನಿರಂತರವಾಗಿ ನಡೆಯುತ್ತಿದೆ.

ಇನ್ನೊಂದು ಮಾತು. ಪ್ರಪಂಚದ ಅದ್ಭುತಗಳಲ್ಲಿ ಒಂದಾದ ಅಂಗ್ಕೋರ್ ವಾಟ್ ಮತ್ತು ಬೇರೆ ಬೇರೆ ಭವ್ಯ ದೇವಸ್ಥಾನಗಳ ಸಂಕೀರ್ಣದ ಮುಖ್ಯತೆ ಕಡಿಮೆಯಾಗುತ್ತಾ ಹೋದದ್ದು ೧೪೩೧ರಿಂದ ಈಚೆಗೆ. ಕಂಬುಜದೇಶದ ರಾಜಧಾನಿಯನ್ನು ಅಂಗ್ಕೋರ್ ವಾಟ್‌ನಿಂದ (ಸೀಮ್‌ರೀಪ್ ಪ್ರದೇಶದ) ನಾಂ ಪೆನ್‌ಗೆ (Phnom peng) ಬದಲಾಯಿಸಿದ್ದರಿಂದ ಅವುಗಳ ಹೆಚ್ಚಳಿಕೆ ಕಡಿಮೆಯಾಗುತ್ತಾ ಹೋಯಿತು. ಹದಿನಾರನೆಯ ಶತಮಾನವಾದ ಮೇಲೆ ಈ ಮಹತ್ವದ ದೇವಾಲಯಗಳನ್ನು ಭಯಂಕರವಾದ ಕಾಡುಗಳು ಆಕ್ರಮಿಸಿ ಅವುಗಳ ಇರುವಿಕೆಯೇ ಗೊತ್ತು ಆಗದಂತೆ ಮಾಡಿತು ಮತ್ತು ನಿರ್ನಾಮಗೊಳಿಸಿತು. ಆದರೆ ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಫ್ರಾನ್ಸಿನ ಹೆನ್ರಿ ಮೌಹಾಟ್ (Henri Mouhat) ಎಂಬುವನು ಈ ಭಯಂಕರ ಕಾಡಿನ ಮಧ್ಯಭಾಗದಿಂದ ಶಿಥಿಲಗೊಂಡ ಈ ದೇಗುಲಗಳನ್ನು ಹೊರತಂದು ಜಗತ್ತಿನ ಗಮನವನ್ನು ಸೆಳೆದನು. ಅಲ್ಲಿಂದಾಚೆಗೆ ಪ್ರಪಂಚದ ನಾನಾ ಸಂಘ ಸಂಸ್ಥೆಗಳು ಯೂನೆಸ್ಕೋ ಮುಖಾಂತರ ಇದರ ಪುನಃಶ್ಚೇತನದ ಕೆಲಸಕ್ಕೆ ಕೈ ಹಾಕಿದ್ದಾರೆ. ಭಾರತದ ಪುರಾತತ್ವ ಇಲಾಖೆಯು (ASI) ೧೯೮೬ ರಿಂದ ಅಂಗ್ಕೋರ್‌ವಾಟ್ ಮತ್ತು ಬಾಫೂಂ ದೇವಸ್ಥಾನದ ಜೀರ್ಣೋದ್ಧಾರದ ಕೆಲಸದಲ್ಲಿ ತೊಡಗಿದೆ. ಇದೊಂದು ಶ್ಲಾಘನೀಯವಾದ ಕೆಲಸವಾಗಿದೆ.

ಈ ದೇವಸ್ಥಾನಗಳು ಅನೇಕ ಶ್ರೇಣಿ/ಅಂತಸ್ತುಗಳಿಂದ ಕೂಡಿವೆ. ಕೆಲವೊಮ್ಮೆ ಮೂರು ನಾಲ್ಕು ಅಂತಸ್ತುಗಳಿಂದ ಕೂಡಿರುವ ದೇವಸ್ಥಾನಗಳನ್ನು ಹತ್ತುವುದು ಕಷ್ಟವಾಗಿ ತೋರುತ್ತದೆ. ಅಂಗ್ಕೋರ್ ವಾಟ್ ಮತ್ತು ಇನ್ನೂ ಕೆಲವು ದೇವಸ್ಥಾನಗಳ ಗರ್ಭಗುಡಿಯನ್ನು ಮುಟ್ಟುವುದು ಕಷ್ಟ. ಜೊತೆಗೆ ನೇರವಾಗಿ ಏರುವ ಮೆಟ್ಟಿಲುಗಳು, ತೆವಳಿಕೊಂಡೆ ಹೋಗುವ ಸಂದರ್ಭ ಒದಗಿಬರುತ್ತದೆ. ಅಂತಹ ಒಂದು ದೇವಸ್ಥಾನಕ್ಕೆ ಹೋಗಿ ಸುಸ್ತಾಗಿ ವಾಪಸ್ಸು ಬಂದ ಒಂದೆರಡು ಪರಿಸ್ಥಿತಿ ಇವೆ.

ಈ ದೇವಸ್ಥಾನದ ಅಡಿಪಾಯಗಳಲ್ಲಿ ಮತ್ತು ಪ್ರಾಕಾರಗಳಲ್ಲಿ ಬಲಿಷ್ಠವಾದ ಆನೆಗಳು, ಕುದುರೆಗಳು ಮತ್ತು ಸಿಂಹಗಳನ್ನು ಕೆತ್ತಿ ನಿಲ್ಲಿಸಿರುವುದನ್ನು ಕಾಣಬಹುದು, ದೇವಸ್ಥಾನಗಳ ಭದ್ರತೆಗೆ ಇರುವ ಒಂದು ವ್ಯವಸ್ಥೆಯೆಂದು ಕಾಣುತ್ತದೆ. ಇಂತಹ ವ್ಯವಸ್ಥೆಗಳೂ ನಮ್ಮ ದೇಶದ ದೇವಸ್ಥಾನಗಳಲ್ಲೂ ಕಾಣುತ್ತೇವೆ. ಇವು ಶಿಲ್ಪಶಾಸ್ತ್ರಕ್ಕೆ ಅನುಗುಣವಾಗಿರುವಂತೆ ಕಾಣುತ್ತದೆ.

ಹಿಂದೂ ದೇವತೆಗಳನ್ನು ಪೂಜಿಸುತ್ತಿದ್ದ ಹಾಗು ಹಿಂದೂ ಧರ್ಮವನ್ನು ಪಾಲಿಸುತ್ತಿದ್ದ ಕಂಬುಜದ ಖಮರ್ (Khamer) ಮತ್ತು ಮಾನ್ (Mahn) ಜನಾಂಗದವರು ಏಳನೆಯ ಜಯವರ್ಮನ ಸಮಯದಲ್ಲಿ ಬುದ್ಧನ ತತ್ವಗಳಿಗೆ ಮನಸೋತು ಮಹಾಯಾನ ಮತ್ತು ಹೀನಾಯಾನದ (Greater Vehicle and Lesser Vehicle) ಹಾದಿಯನ್ನು ಹಿಡಿಯುತ್ತಾರೆ. ಕಟ್ಟಕಡೆಗೆ ತೇರಾವಾದವೇ (ಹೀನಾಯನ) ಅವರ ಜೀವನದ ಏಕೈಕ ಗುರಿಯಾಗುತ್ತದೆ. ದಕ್ಷಿಣ ಈಶಾನ್ಯ ಏಷ್ಯಾದ (South East Asia) ಬಹುಭಾಗಗಳಲ್ಲಿ ನಾವು ಈ ತೇರಾವಾದದ ಅನುಯಾಯಿಗಳನ್ನೆ ನೋಡುತ್ತೇವೆ. ಈ ರೀತಿಯ ಬದಲಾವಣೆಯು ಹಿಂದೂ ಧರ್ಮದ ಅವನತಿಗೆ ಕಾರಣವಾಗುತ್ತದೆ.

ಕಂಬುಜ ಚಕ್ರಾಧಿಪತ್ಯವು ಈಗಿನ ಕಾಂಬೋಡಿಯ ಮತ್ತು ಮೆಖಾಂಗ್ ನದಿಯ ಕೆಲವು ಪ್ರದೇಶಗಳನ್ನು ಒಳಗೊಂಡಿದ್ದಿತು. ನಮ್ಮ ದೇಶದ ಗಂಗಾ, ಸಿಂಧೂ ನದಿಗಳಂತೆ ಈ ನದಿಯೂ ಕಂಬುಜದ ಚರಿತ್ರೆಯಲ್ಲಿ ಪಾಲ್ಗೊಂಡಿದ್ದೂ ಅಲ್ಲದೆ ಮುಂದೆಯು ಪಾಲ್ಗೊಳ್ಳಲಿದೆ ಎಂದು ಹೇಳಲು ಬಯಸುತ್ತೇನೆ.

ಮೇಲೆ ಹೇಳಿದ ಮಾತುಗಳು ಒಬ್ಬ ಸಾಮಾನ್ಯ ಪ್ರವಾಸಿಗನ (Layman's) ಮೊದಲ ನೋಟದ ಅನಿಸಿಕೆಗಳು ಮಾತ್ರ

❑

೩೬೦, ೬ನೇ ಎ ಕ್ರಾಸ್, ಟಾಟಾ ನಗರ, ಬೆಂಗಳೂರು ೫೬೦ ೦೯೨.

೭

ಶ್ರೀ ಅರವಿಂದರ 'ಸಮಗ್ರಯೋಗ'

ಎಸ್.ಆರ್. ಮಳಗಿ

"ತಾಪಾರ್ತ ಜನಕೆ ನೆರಳಾಗಿ ನೀಡಿ ವಟವೃಕ್ಷವಾದ ಜೀವ;
ತತ್‌ಬ್ರಹ್ಮದಲ್ಲಿ ಬೇರ್ಬಿಟ್ಟು ಇಳಿದ ಅಶ್ವತ್ಥದಂಥ ಭಾವ;
ಧೀಪ್ರಳಯ ಜಲದಿ ತೇಲಾಡುತಿಹುದು ಅರಳೆಲೆಯಲೇನೊ ಒಂದು;
ತಾವಾಗಿ ನಾಳೆ ನವಜೀವಕೋಟಿಯನೆ ಮೆರೆಯಲಿಹುದು ಬಂದು.

....

ಅರವಿಂದವೆಂಬ ಬರಿ ಹೆಸರಿನಲ್ಲೆ ಸೌಗಂಧ ತುಂಬಿಬಹದು
ಚಾರಿತ್ರ್ಯವನ್ನು ನೆನೆಸಿದರೆ ಸಾಕು ಬ್ರಹ್ಮಾಂಡ ಬಿಂಬಿಸುವುದು.
ಆ ಒಂದೆ ರಾತ್ರಿಯಲಿ ಬಯಲು ತುಂಬಿತೋ ಪಾರಿಜಾತ ಕೀರ್ತಿ.
ಈ ವಿಶ್ವದೊಡನೆ ಒಂದಾಗಿ ನಿಂತಿತೋ ಆ ವಿರಾಟ ಮೂರ್ತಿ."

ದ. ರಾ. ಬೇಂದ್ರೆ (ಮಹಾಪ್ರಸ್ಥಾನ, ಹೃದಯ ಸಮುದ್ರ, ೧೯೫೬)

ಶ್ರೀ ಅರವಿಂದರು ೧೯೧೦ಳರಿಂದಲೇ ತಮ್ಮ ನಿರಂತರ ಸಾಧನೆಯ ಮೂಲಕ ಹೊಚ್ಚ ಹೊಸದಾಗಿ ಶೋಧಿಸಿದ 'ಪೂರ್ಣಯೋಗ' ಅಥವಾ 'ಸಮಗ್ರ ಯೋಗ'ದ ಗುರಿ, ಬೇರೆ ಯೋಗಪಥಗಳಿಗಿಂತ ಭಿನ್ನವಾದುದು. ಸಾಮಾನ್ಯ ಅಜ್ಞಾನಮಯ ಪ್ರಜ್ಞೆಯೊಳಗಿಂದ ಹೊರಬಂದು, ಮೇಲೇರಿ ಹೋಗುವುದೊಂದೇ ಈ ಯೋಗದ ಗುರಿಯಲ್ಲ. ಮೇಲಿನ ದಿವ್ಯ ಚೇತನದ 'ಅತಿಮಾನಸ'ವೆಂಬ ಶಕ್ತಿಯನ್ನು ಮನ, ಪ್ರಾಣ, ದೇಹಗಳ ಅಜ್ಞಾನದಲ್ಲಿ ಕೆಳಗಿಳಿಸಿ ತಂದು, ಅವುಗಳ ಸಂಪೂರ್ಣ ಪರಿವರ್ತನೆಯನ್ನು ಸಾಧಿಸುವ ಘನವಾದ ಉದ್ದೇಶ ಇದರದಾಗಿದೆ. ಈ ಜಗದಲ್ಲಿಯೆ ಭಗವಂತನನ್ನು ಪ್ರಕಟಿಸುವುದಿದೆ. ಮತ್ತು ಜಡದಲ್ಲಿ ದಿವ್ಯ ಜೀವನವನ್ನು ಸೃಷ್ಟಿಸುವುದಿದೆ.

ಶ್ರೀ ಅರವಿಂದರ ಈ ಯೋಗಸಾಧನೆ ಯಾವ ಮಾನಸಿಕ ಬೋಧೆಯಿಂದಾಗಲಿ, ಧ್ಯಾನ, ಮಂತ್ರ ಮುಂತಾದ ನಿರ್ದಿಷ್ಟ ವಿಧಾನಗಳ ಮೂಲಕವಾಗಲಿ ಸಾಗುವಂಥದಲ್ಲ. ಪರಮಾತ್ಮನನ್ನು ಕುರಿತ ಉತ್ಕಟ ಅಭೀಪ್ಸೆ. ಅಂತರ್ಮುಖಿಯಾದ ಇಲ್ಲವೆ ಊರ್ಧ್ವಮುಖಿಯಾದ ಆತ್ಮೈಕಾಗ್ರತೆ, ನಮ್ಮ ಮೇಲಿರುವ ದಿವ್ಯಶಕ್ತಿಯತ್ತ ಇಲ್ಲವೆ ಅದರ ಪ್ರಭಾವ ಹಾಗೂ ಕ್ರಿಯೆಗಳತ್ತ ಇಲ್ಲವೆ ನಮ್ಮ ಹೃದಯಸ್ಥ ಭಗವತ್ ಸಾನ್ನಿಧ್ಯದತ್ತ ಆತ್ಮೋನ್ಮೀಲನ– ಇವುಗಳಿಂದ ಈ ಯೋಗ–ಸಾಧನೆ ಸಾಗುವುದು ಮತ್ತು ಇದರ ಜತೆಗೆ ಇದಕ್ಕೆ ವಿರೋಧಕವಾಗಿರುವುದೆಲ್ಲವನ್ನೂ ತಿರಸ್ಕರಿಸುವುದರ ಮೂಲಕ ಈ ಯೋಗಸಾಧನೆ ಮುಂದುವರಿಯುವುದು. ಇಲ್ಲಿಯ ಆತ್ಮೋನ್ಮೀಲನ ಕ್ರಿಯೆ ಅಪ್ಪಟ ಶ್ರದ್ಧೆ, ಅಭೀಪ್ಸೆ ಮತ್ತು ಸಮರ್ಪಣ ಭಾವಗಳಿಂದ ಮಾತ್ರವೆ ಸಿದ್ಧಗೊಳ್ಳುವುದು.

ಇಲ್ಲಿ ಏನಾದರೂ ಸ್ಥಳಾವಕಾಶವಿರುವುದಾದರೆ ಅದು ಅತಿಮಾನಸ ಸೃಷ್ಟಿಗೆ ಮಾತ್ರ, ದಿವ್ಯಸತ್ತೆಯನ್ನು ಈ ಪೃಥ್ವಿಯ ಮೇಲೆ ತಂದಿಳಿಸುವುದಕ್ಕೆ ಮಾತ್ರ, ದಿವ್ಯಸತ್ತೆಂದು ಈ ಅವತರಣವು ಮನ–ಪ್ರಾಣಗಳಲ್ಲಷ್ಟೇ ಅಲ್ಲ, ಅದು ದೇಹದಲ್ಲಿ ಮತ್ತು ಜಡದ್ರವ್ಯದಲ್ಲೂ ಆಗಬೇಕು ಎನ್ನುತ್ತಾರೆ ಶ್ರೀ ಅರವಿಂದರು. ಮತ್ತು ಮಾನವನ ಅಹಂಕಾರ ಕೇಂದ್ರೀಕೃತ ಪ್ರಾಣಶಕ್ತಿಯ ನಾನಾಬಗೆಯ ಆಶೆ–ಆಕಾಂಕ್ಷೆಗಳ ಪೂರೈಕೆಗಾಗಲಿ, ಮಾನವ ಮನದ ವಿಚಾರಗಳ ಸಿದ್ಧಿಗೋಸುಗವಾಗಲಿ ಅವಕಾಶವೀಯುವುದು ಈ ಯೋಗದ ಉದ್ದೇಶವಲ್ಲ. ನಮ್ಮ ಮನಕ್ಕೆ ಬಂದಂತೆ ವರ್ತಿಸಲು ನಾವಿಲ್ಲಿ ಜೀವಿಸುತ್ತಿಲ್ಲ. ಹಾಗೆ ವರ್ತಿಸಲು ಸಮರ್ಥರಾಗುವಂತೆ ಜಗವೊಂದನ್ನು ಸೃಷ್ಟಿಸಲೂ ನಾವಿಲ್ಲಿ ಜೀವಿಸುತ್ತಿಲ್ಲ. ಭಗವಂತನ ಸಂಕಲ್ಪಕ್ಕನುಗುಣವಾಗಿ ಮಾಡಬೇಕಾದುದನ್ನು ಮಾಡಲು ಮಾತ್ರ ನಾವಿಲ್ಲಿದ್ದೇವೆ. ಭಗವಂತನ ಸಂಕಲ್ಪವು ತನ್ನ ದಿವ್ಯ ಸತ್ಯವನ್ನು ಪ್ರಕಟಿಸುವಂಥ ಜಗತ್ತೊಂದನ್ನು ಸೃಷ್ಟಿಸುವುದು ಈ ಯೋಗದ ಉದ್ದೇಶ. ಈ ದಿವ್ಯಸತ್ಯವು ಮಾನವನ ಅಜ್ಞಾನದಿಂದ ವಿಕೃತಗೊಳ್ಳುವುದಕ್ಕಾಗಲಿ ಪ್ರಾಣಶಕ್ತಿಯ ಆಶೆ–ಆಕಾಂಕ್ಷೆಗಳಿಂದ ಹದಗೆಟ್ಟು ಹೋಗುವುದಕ್ಕಾಗಲಿ ಅವಕಾಶವಿರದಂತೆ ಎಚ್ಚರವಹಿಸುವುದು

ಈ ಯೋಗಸಾಧಕರ ಕರ್ತವ್ಯವಾಗಿದೆ. 'ಸಮಗ್ರ ಯೋಗ'ದ ಸಾಧಕನು ಮಾಡಬೇಕಾದ ಕಾರ್ಯವು ಆತನ ಸ್ವಂತದ್ದಲ್ಲ. ತನ್ನ ಸ್ವಂತದ್ದಾದ ಕಾರ್ಯಕ್ಕೆ ತನ್ನವೇ ಆದ ಕರಾರುಗಳನ್ನು ಆತನು ಹಾಕಿಕೊಳ್ಳಬಹುದು. ಆದರೆ ಆತನು ಮಾಡಬೇಕಾದ ಭಗವಂತನ ಕಾರ್ಯಕ್ಕೆ ಭಗವಂತನ ಕರಾರುಗಳನ್ನು ಆತನು ಪಾಲಿಸಬೇಕಾಗುತ್ತದೆ. ಈ ಯೋಗ ಸಾಧನೆಯ ಮೂಲಕ ನಾವು ಅರಸುತ್ತಿರುವುದು ಭಗವಂತನ ಪ್ರಕಟಣೆಯನ್ನು ಮಾತ್ರ. ಭಗವಂತನ ಈ ಪ್ರಕಟನೆಯಲ್ಲಿ ನಮ್ಮ ಆಧ್ಯಾತ್ಮಿಕ ಮುಕ್ತಿ, ಪರಿಪಕ್ವತೆ ಹಾಗೂ ಪರಿವರ್ತನೆಗಳು ಈ ಭಗವತ್ ಪ್ರಕಟಣೆಯ ಭಾಗವಾಗಿರುವುವಲ್ಲದೆ, ಅದರ ಪರಿಣಾಮವೂ ಆಗಿರುತ್ತವೆ. ಆದರೆ ನಮ್ಮ ಈ ಆಧ್ಯಾತ್ಮಿಕ ಮುಕ್ತಿ ಮುಂತಾದವುಗಳ ಉದ್ದೇಶವು ಯಾವ ಬಗೆಯ ಅಹಂಕಾರದೃಷ್ಟಿಯಿಂದಾಗಲಿ ಸ್ವಾರ್ಥಪರತೆಯಿಂದಾಗಲಿ ಕಲುಷಿತವಾಗಿರುವುದಿಲ್ಲ.

ಈ ಯೋಗವು ಕೇವಲ ಭಗವತ್ ಸಾಕ್ಷಾತ್ಕಾರಕ್ಕಾಗಿ ಮಾತ್ರ ಇರದೆ, ಅಂತರಂಗ ಬಹಿರಂಗ ಜೀವನಗಳೆರಡ ಪರಿವರ್ತನೆಗಾಗಿ ಮತ್ತು ಅವನ್ನು ಸಂಪೂರ್ಣವಾಗಿ ಭಗವಂತನಿಗೆ ನಿವೇದಿಸುವುದಕ್ಕಾಗಿ ಇರುತ್ತದೆ. ಭಗವತ್ ಚೇತನವು ಪ್ರಕಟವಾಗಲು ಮತ್ತು ಅಂತರಂಗ–ಬಹಿರಂಗ ಜೀವನದ ಪರಿವರ್ತನೆ ಮತ್ತು ನಿವೇದನೆಗಳು ಭಗವತ್ ಕಾರ್ಯದ ಒಂದು ಭಾಗವಾಗಲು ಯೋಗ್ಯವಾಗುವವರೆಗೆ, ಈ ಯೋಗಸಾಧನೆ ಸಾಗಬೇಕು. ಇದೆಲ್ಲದರ ಅರ್ಥವೇನೆಂದರೆ, ಶ್ರೀ ಅರವಿಂದರ ಈ ಯೋಗಸಾಧನೆ ಒಂದು ಬಗೆಯ ಆಂತರಿಕ ಶಿಕ್ಷಣ ಹಾಗೂ ಶಿಸ್ತು. ಇದು ತುಂಬ ಶಮ್ರ ವಹಿಸಿ ಪ್ರಯತ್ನ ಪೂರ್ವಕವಾಗಿ ಸಾಧಿಸಬೇಕಾದುದು; ನೈತಿಕ ಹಾಗೂ ದೈಹಿಕ ತಪಸ್ಸುಗಳಿಗಿಂತ ಇದು ಕಷ್ಟಕರವೆಂದು ಶ್ರೀ ಅರವಿಂದರು ಹೇಳುತ್ತಾರೆ.

ಈ ಮೊದಲು ಅನುಸರಿಸುತ್ತಿದ್ದ ಯೋಗಪಥಗಳ ಸಾಧನೆಯಲ್ಲಿ ಭಗವಂತನೊಂದಿಗೆ ಒಂದಾಗಿರುವ ಆತ್ಮಾನುಭವವನ್ನು ಮಾತ್ರ ಅರಸಲಾಗುತ್ತಿತ್ತು. ಈ ಆತ್ಮಾನುಭವಕ್ಕೆ ಅಡ್ಡಿಯಾಗದಷ್ಟು ಮಾತ್ರಕ್ಕೆ, ಸಾಧಕನ ವ್ಯಕ್ತಿ ಸ್ವಭಾವವು ಪರಿವರ್ತನೆ ಹೊಂದಿದರೆ ಸಾಕು ಎನ್ನುತ್ತಿದ್ದರು. ಇಡಿಯ ಸ್ವಭಾವದ ಪರಿವರ್ತನೆಯನ್ನು ಎಂದರೆ ದೈಹಿಕ ಚೇತನದವರೆಗೆ ಪರಿವರ್ತನೆಯನ್ನು ಕೆಲವರು ಮಾತ್ರ ಸಾಧಿಸುತ್ತಿದ್ದರು. ಅದೊಂದು ಬಗೆಯ 'ಸಿದ್ಧಿ'. ಪೃಥ್ವೀಚೇತನದಲ್ಲಿಯ ಹೊಸದೊಂದು 'ಸ್ವಭಾವ'ದ ಆವಿಷ್ಕಾರ ಸಾಧನೆಯಂತೂ ಅದಲ್ಲ.

ಇಂದಿನ ಮಾನವನು ತನ್ನ ತಾನರಿತಿಲ್ಲ ಎಂದು ಶ್ರೀ ಅರವಿಂದರು ಹೇಳಿದ್ದಾರೆ. 'ತಾನು' ಎಂದರೆ ಯಾರು ? ಎಂಬುದನ್ನು ಅರಿತುಕೊಳ್ಳುವ ಹಂತವನ್ನೇ ಮಾನವನಿಂದು ತಲುಪಿಲ್ಲ ಎಂಬುದು ಅವರ ಅಭಿಪ್ರಾಯ. ಉತ್ಕ್ರಾಂತಿಯ ಆರೋಹಣದಲ್ಲಿ ಮಾನವನಿನ್ನೂ ಕೆಳಹಂತದಲ್ಲಿಯೆ ಇದ್ದಾನೆ. ಪ್ರಾಣಸ್ತರದಿಂದ ಹೊರಬಂದ ಮಾನವ ಮನಸ್ಸು ಇನ್ನೂ ಪ್ರಾಣಿತನವನ್ನು ಬಹುಮಟ್ಟಿಗೆ ಉಳಿಸಿಕೊಂಡಿರುವುದರಿಂದ, ಅದರ ರೂಪಾಂತರ ಇಲ್ಲವೆ ಪರಿವರ್ತನೆಯ ಕಾಲವಿನ್ನೂ ಬಲುದೂರ. ಶ್ರೀ ಅರವಿಂದರ 'ಸಮಗ್ರಯೋಗ'ದ ಗುರಿಗಳಲ್ಲಿ ಮನದ ಪರಿಪೂರ್ಣ ರೂಪಾಂತರವೂ ಒಂದು. ಈ ಬಗ್ಗೆ ಶ್ರೀಮಾತೆಯವರು ಹೇಳುವುದಿದು: ಪ್ರಕೃತಿಯಲ್ಲಿ ಆರೋಹಣ ವಿಕಾಸ ಅಥವಾ ಉತ್ಕ್ರಾಂತಿ ಎಂಬುದೊಂದಿದೆ. ಶಿಲೆಯಿಂದ ಸಸ್ಯಕ್ಕೆ, ಸಸ್ಯದಿಂದ ಪ್ರಾಣಿಗೆ, ಪ್ರಾಣಿಯಿಂದ ಮಾನವನವರೆಗೆ ಏರುತ್ತ ಹೋದ ಉತ್ಕ್ರಾಂತಿಯಿದು. ಈ ಆರೋಹಣ ವಿಕಾಸದ ಏಣಿಯ ತುತ್ತತುದಿಯ ಕೊನೆಯ ಮೆಟ್ಟಿಲಿನಲ್ಲಿ ಈಗ ಮಾನವನಿದ್ದಾನೆ. ಮತ್ತು ಆತನು ಈ ಪೃಥ್ವಿಯ ಮೇಲೆ ತನಗಿಂತ ಮಿಗಿಲಾದುದಾವುದೂ ಇಲ್ಲವೆಂದೇ ಭಾವಿಸಿದ್ದಾನೆ. ಇಲ್ಲಿ ಆತನ ತಿಳಿವಳಿಕೆ ತಪ್ಪಿದೆ. ತನ್ನ ಭೌತಿಕ ಪ್ರಕೃತಿಯಲ್ಲಿ ಆತನಿನ್ನೂ ಇಡಿಯಾಗಿ ಪ್ರಾಣಿಯೇ ಆಗಿದ್ದಾನೆ. ಯೋಚನೆ ಮಾಡುವ ಮತ್ತು ಮಾತನಾಡುವ ಪ್ರಾಣಿಯಾತ. ದೈಹಿಕ ಅಭ್ಯಾಸಗಳಲ್ಲಿ ಮತ್ತು ಸಹಜ ಪ್ರವೃತ್ತಿಗಳಲ್ಲಿ ಆತನಿನ್ನೂ ಪ್ರಾಣಿಯೇ. ವಿರಾಟ್ ಸ್ವರೂಪದಲ್ಲಿ ಯೋಗಮಾಯೆಗಾಗಿ, ಬೃಹತ್ ಪ್ರಮಾಣದ ಯೋಗಕ್ರಿಯೆಯಲ್ಲಿ ನಿರಂತರವಾಗಿ ತೊಡಗಿರುವ ಪ್ರಕೃತಿ ಮಾತೆಗೆ ಇಂಥದೊಂದು ಅಪೂರ್ಣ ಫಲಿತಾಂಶದಿಂದ ತೃಪ್ತಿಯಿಲ್ಲ. ಇಂದು ಪ್ರಾಣಿಗಿಂತ ಮನುಷ್ಯ ಯಾವ ಅಂತರದಲ್ಲಿರುವನೋ ಹಾಗೆ ಮನುಷ್ಯನಿಂದ ಅಷ್ಟು ಅಂತರದಲ್ಲಿರುವ 'ಅತಿಮಾನವ'ನನ್ನು ಸೃಷ್ಟಿಸುವ ಯತ್ನದಲ್ಲಿ ಆಕೆ ತೊಡಗಿದ್ದಾಳೆ. ಬರಲಿರುವ ಈ 'ಅತಿಮಾನವ'ನು ಬಾಹ್ಯರೂಪದಲ್ಲಿ ಈಗಿನ ಮನುಷ್ಯನಂತೆಯೆ ಇರುವುದಾಗಿ, ಆತನ ಚೇತನವು ಮಾತ್ರ ಮಾನಸಹಂತದಿಂದಾಚೆ ಏರುತ್ತ ಹೋಗುವುದಲ್ಲದೆ. ಅಜ್ಞಾನದ ಬಂಧನದಿಂದ ಮುಕ್ತವಾಗಿರುವುದು.

"ಶ್ರೀ ಅರವಿಂದರು ಮನುಷ್ಯರಿಗೆ ಈ ಸತ್ಯವನ್ನು ಬೋಧಿಸುವುದಕ್ಕೆಂದು ಈ ಭೂಮಿಗೆ ಇಳಿದು ಬಂದರು. ಇಂದಿನ ಮಾನವನು ಮಾನಸಿಕ ಚೇತನದಲ್ಲಿಯೇ ಜೀವಿಸುತ್ತಿರುವ, ಆದರೆ ಬದಲಾಗಬೇಕಾಗಿರುವ ಸಂಧಿಕಾಲದ ಅವಸ್ಥೆಯ ಪ್ರಾಣಿಯಾಗಿದ್ದಾನೆಂದೂ ಹೊಸತೊಂದು ಸತ್ಯಚೇತನಾವಸ್ಥೆಯನ್ನು ಪಡೆಯಲಿರುವ ಸಾಧ್ಯತೆಯುಳ್ಳವನಾಗಿದ್ದಾನೆಂದೂ ಮನುಷ್ಯನಿಗೆ ತಿಳಿಸಿ ಹೇಳುವುದಕ್ಕೆಂದು ಅವರು ಅವತರಿಸಿದರು. ಬರಲಿರುವ ಈ 'ಅತಿಮಾನವ'ನು ಪರಿಪೂರ್ಣ ಸಾಮರಸ್ಯವುಳ್ಳ, ಉತ್ತಮ, ಸುಂದರ, ಹಾಗೂ ಸುಖಮಯವಾದ ಜೀವನವನ್ನು ನಡೆಸಬಲ್ಲವನಾಗಿ, ತುಂಬ ಜಾಗೃತ ಹಾಗೂ ಚೈತನ್ಯಭರಿತ ಜೀವಿಯಾಗಿ ಬಾಳುವನು. ಭೂಮಿಯ ಮೇಲಿನ ತಮ್ಮ ಜೀವನದುದ್ದಕ್ಕೂ ಶ್ರೀ ಅರವಿಂದರು, ತಮ್ಮೊಳಗೆ ಈ ಬಗೆಯ ಚೇತನಾವಸ್ಥೆಯನ್ನು ಸ್ಥಿರವಾಗಿ ಹೊಂದಲು ತಮ್ಮೆಲ್ಲ ವೇಳೆಯನ್ನೂ ಮೀಸಲಿರಿಸಿದ್ದರು. ಇದನ್ನು 'ಅತಿಮಾನಸ' ಚೇತನಾವಸ್ಥೆಯೆಂದು ಅವರು ಕರೆದರು. ಇಂಥದನ್ನು ಸಿದ್ಧಿಸಿಕೊಳ್ಳುವುದಕ್ಕೆ ತಮ್ಮ ಸುತ್ತುಮುತ್ತಲು ಸೇರಿದ್ದವರಿಗೆಲ್ಲ ನೆರವು ನೀಡಿದರು" – ಹೀಗೆಂದು ಶ್ರೀಮಾತೆ ಹೇಳಿದ್ದಾರೆ. ಹಾಗೆಯೆ ಮುಂದುವರಿಯುತ್ತ, ಸಾಧಕರನ್ನುದ್ದೇಶಿಸಿ ಹೀಗೆ ಅವರು ಉದ್ಗರಿಸಿದ್ದಾರೆ : "ಸಾಮಾನ್ಯ ಮಾನವ ಜೀವಿಗಳಾಗಿ, ಇಲ್ಲವೆ ಕೆಲಮಟ್ಟಿಗೆ ಮಾತ್ರ ವಿಕಾಸಗೊಂಡ ಪ್ರಾಣಿಗಳಾಗಿ ಬಾಳಲು ನಿಮಗೆ ಇಚ್ಛೆಯಿಲ್ಲದಿದ್ದರೆ, ಶ್ರೀ ಅರವಿಂದರ ದರ್ಶನದ 'ಅತಿಮಾನಸ' ಆದರ್ಶವನ್ನು ಸಿದ್ಧಿಸಿಕೊಂಡು, ಹೊಸ ಜನಾಂಗದ ಮನುಷ್ಯರಾಗಿ ಜೀವಿಸುವ, ಹೊಸತೊಂದು ಪೃಥ್ವಿಯ ಮೇಲೆ ಹೊಚ್ಚ ಹೊಸತೊಂದು ಉನ್ನತ ಜೀವನವನ್ನು ನಡೆಸುವ ಇಚ್ಛೆ ನಿಮ್ಮದಾಗಿದ್ದರೆ, ಅದೆಲ್ಲವೂ ನಿಮ್ಮ ನಿಜವಾದ ಸಂಕಲ್ಪ ಶಕ್ತಿಯನ್ನೂ ನಿಮ್ಮ ಪಾರದರ್ಶಕ ಪ್ರಾಮಾಣಿಕತೆಯನ್ನೂ ಅವಲಂಬಿಸಿದೆ" ಎಂದಿದ್ದಾರೆ.

ಈಗ ಮತ್ತೆ ಶ್ರೀ ಅರವಿಂದರ 'ಸಮಗ್ರಯೋಗ'ದ ಗುರಿಗಳಲ್ಲಿ ಒಂದಾದ ಮಾನವ ಮನದ ಪರಿಪೂರ್ಣ ರೂಪಾಂತರದ ವಿಚಾರಕ್ಕೆ ಮರಳುವ : ಮಾನವರಾದ ನಮ್ಮ 'ಅಸ್ತಿತ್ವ'ದ ಅಂಗಗಳು ವಿವಿಧ. ಅವುಗಳಲ್ಲಿ ಮನಸ್ಸು ಒಂದಂಗ ಮಾತ್ರ. ಹೀಗಿದ್ದರೂ ಈ 'ಅಸ್ತಿತ್ವ' ಅಥವಾ ಸತ್ತೆಯ ವಿವಿಧ ಅಂಗಾಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳನ್ನು 'ಮನಸ್ಸು' ಎಂಬ ಒಂದಂಗದಲ್ಲಿಯೆ ಸಮಾವೇಶಗೊಳಿಸ ಮಾತಾಡುವ ಅಭ್ಯಾಸ ಇಂದಿನ ಮಾನವನದಾಗಿದೆ. ನಮ್ಮ ಪ್ರಕೃತಿಯ ಜಟಿಲ ಸ್ವರೂಪವನ್ನು ಸರಿಯಾಗಿ ಅರ್ಥಮಾಡಿಕೊಂಡು, ಅದು ಸರಿಯಾದ ಮಾರ್ಗದಲ್ಲಿ ಚಲಿಸುವಂತೆ ಮಾಡಿ, ಅದನ್ನು ನಿಯಂತ್ರಿಸುವ ಜ್ಞಾನವನ್ನು ಪಡೆದುಕೊಳ್ಳುವುದು ಶ್ರೀ ಅರವಿಂದರ 'ಸಮಗ್ರಯೋಗ'ದ ತಳಹದಿಯ ಅರಿವಿನ ಒಂದು ಭಾಗವಾಗಿದೆ.

ನಮ್ಮೊಳಗೆ ಅನೇಕ ಅಂಗಾಂಗಗಳಿವೆ. ಪ್ರತಿಯೊಂದು ಅಂಗವೂ ನಮ್ಮ ಚೈತನ್ಯದ ಚಲನೆಗಳಾಗಿರುವ ವಿಚಾರ, ಸಂಕಲ್ಪ, ಸಂವೇದನೆ, ಭಾವನೆ, ಕ್ರಿಯೆ ಮುಂತಾದವುಗಳಿಗೆ ಮೂಲ ಕಾರಣವಾಗಿರುತ್ತದೆ. ನಮ್ಮ ಅಂತರಂಗದ ಇವೆಲ್ಲ ಆವೇಗಗಳ ಪ್ರವಾಹಗತಿಯನ್ನೂ ಅವುಗಳ ಮೂಲ ಉಗಮ ಸ್ಥಾನಗಳನ್ನೂ ಅರಿತುಕೊಳ್ಳುವುದು ತೀರ ಆವಶ್ಯಕ. ಈ ಅರಿವಿಲ್ಲದಿದ್ದರೆ, ಅವುಗಳ ಗೊಂದಲಮಯ ಪರಿಣಾಮಗಳು ಹೊರಗೆ ಗೋಚರಿಸಿದಾಗ, ಅವುಗಳನ್ನು ತಾತ್ಕಾಲಿಕವಾಗಿ ಅದಲು-ಬದಲು ಮಾಡಿ, ಒಂದು ಅಭದ್ರ ವ್ಯವಸ್ಥೆಗೆ ತರಲು ನಿಯಂತ್ರಣವೊಂದನ್ನು ಅವುಗಳ ಮೇಲೆ ಹೇರಲು ಮಾತ್ರ ನಾವು ಯತ್ನಿಸುತ್ತೇವೆ. ಆದರೆ ಇದರಿಂದಾವ ಪ್ರಯೋಜನವೂ ಇಲ್ಲ.

ನಮ್ಮ 'ಸತ್ತೆ'ಯ ವಿವಿಧಾಂಗಗಳು ದಿವ್ಯಪ್ರಕಾಶದತ್ತ ಉನ್ಮುಖವಾಗ, ದಿವ್ಯ ಚೇತನದ ಬೆಳಕನ್ನು ಮೇಲಿನಿಂದ ಕೆಳಗಿಳಿಸಿಕೊಂಡು, 'ಅಂತರಾತ್ಮ'ನನ್ನು ಮಾನಸಿಕ, ಪ್ರಾಣಿಕ, ದೈಹಿಕ ಚೇತನಗಳ ಮೇಲ್ಪಾತಳಿಯ ಮೇಲೆ ಬರುವಂತೆ ಮಾಡಿಕೊಳ್ಳುವುದು ಮತ್ತು ಅಭೀಪ್ಸೆಯ ಜ್ಯೋತಿಯನ್ನು ಪ್ರಖರವಾಗಿ ಹೊತ್ತಿಸಿಕೊಂಡು ಮನಸ್ಸನ್ನು ಅಧ್ಯಾತ್ಮದ ಅರಿವಿನತ್ತ ಎಚ್ಚರಗೊಳ್ಳುವಂತೆ ಮಾಡಿ, ಪ್ರಾಣಸತ್ತೆ ಉಜ್ವಲಿಸುವಂತೆ ಮಾಡುವುದೇ ಈ ಯೋಗಸಾಧನೆಯ ಮೊದಲ ಹೆಜ್ಜೆ.

ಶ್ರೀ ಅರವಿಂದರ ತತ್ವಬೋಧೆ ಮತ್ತು ಸಮಗ್ರಯೋಗ ಇವುಗಳನ್ನು ಕುರಿತು ಶ್ರೀಮಾತೆಯವರು ಸರಳ ಸುಂದರ ಶೈಲಿಯಲ್ಲಿ ಹೀಗೆ ವಿವರಿಸಿದ್ದಾರೆ :

೧. ಅಜ್ಞಾನ ಬಂಧನದಿಂದ ಬಿಡುಗಡೆ ಹೊಂದಿ, ಜೀವನದ ದುಃಖ ಹಾಗೂ ಯಾತನೆಗಳಿಂದ ಮುಕ್ತಿಪಡೆಯುವುದು ಪ್ರಾಚೀನ ಯೋಗಗಳ ಉದ್ದೇಶವಾಗಿತ್ತು. ಈ ಜಗತ್ತು ಒಂದು ಮಾಯೆ,

ಇಲ್ಲವೆ ಅರ್ಥರಹಿತ ಭಗವದ್‌ಲೀಲೆ. ನಾವು ಇದರಿಂದ ತಪ್ಪಿಸಿಕೊಂಡು ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಮೇಲೇರಬೇಕೆಂಬುದೇ ಪ್ರಾಚೀನರ ನಂಬುಗೆಯಾಗಿತ್ತು.

೨. ಶ್ರೀ ಅರವಿಂದರ 'ಸಮಗ್ರಯೋಗ'ವು ನಮ್ಮೊಳಗಿನ ಚೇತನವನ್ನು ರೂಪಾಂತರಗೊಳಿಸುವುದರ ಜತೆಗೆ ಬಾಹ್ಯ ಜೀವನವನ್ನೂ ರೂಪಾಂತರಗೊಳಿಸುವುದು. ಜತೆಗೆ ಬಾಹ್ಯ ಜೀವನವನ್ನೂ ರೂಪಾಂತರ ಗೊಳಿಸುವುದು. ನಮ್ಮ ಚೇತನದಂತೆಯೆ ನಮ್ಮ ಇಡಿಯ ಪ್ರಕೃತಿಯೂ ಎಂದರೆ ನಮ್ಮ ಮನ, ಪ್ರಾಣ ಮತ್ತು ದೇಹಗಳೂ ದಿವ್ಯಚೇತನದೊಂದಿಗೆ ಸಂಯೋಗ ಹೊಂದಬೇಕು. ಶ್ರೀ ಅರವಿಂದರು ವಿವರಿಸುವ ಆಧ್ಯಾತ್ಮಿಕ ರೂಪಾಂತರವು ಸಮಗ್ರವಾದುದು. ಈ ರೂಪಾಂತರದ ಪರಿಣಾಮವಾಗಿ ದಿವ್ಯ ಶಾಂತಿ, ಶಕ್ತಿ, ಪ್ರಭೆ, ಆನಂದ–ಇವು ನಮ್ಮ ಪ್ರತಿಯೊಂದು ವಿಚಾರ, ಭಾವನೆ, ಕೃತಿಗಳಲ್ಲಿ ವ್ಯಕ್ತವಾಗುತ್ತವೆ. ಜೀವನದ ಎಲ್ಲ ಶಕ್ತಿಸಾಮರ್ಥ್ಯಗಳು ಪರಿಪೂರ್ಣಗೊಳ್ಳುತ್ತವೆ, ವಿಕಾಸಗೊಳ್ಳುತ್ತದೆ. ಭಗವಂತನಿಗೆ ನಮ್ಮದೆಲ್ಲವನ್ನೂ ಸಮರ್ಪಿಸಿಕೊಳ್ಳುವುದೇ ಈ ವಿಕಾಸ–ಸಿದ್ಧಿಗೆ ದಾರಿ. ಕೊನೆಯಲ್ಲಿ ನಮ್ಮ ಭೌತಿಕ ಶರೀರವೂ ದಿವ್ಯಶರೀರವಾಗಿ ಪರಿಣಮಿಸುವುದು. ಈ ಜೀವನದ ಮುಖ್ಯ ಗುರಿಯೆಂದರೆ– ನಮ್ಮ ದಿವ್ಯದೇಹದಲ್ಲಿ ದಿವ್ಯ ಜೀವನವನ್ನು ಸಾಧಿಸಿಕೊಳ್ಳುವುದು. ಅನಂತರ, ಭಗವಂತನ ಘನೋದ್ದೇಶವಾಗಿರುವ ನೂತನವಾದ ಅಧ್ಯಾತ್ಮ–ಜಗತ್ತನ್ನು ಸೃಷ್ಟಿಸುವಲ್ಲಿ ಮತ್ತು 'ಅತಿಮಾನವ'ರನ್ನು ಈ ಧರೆಗೆ ಬರಮಾಡಿಕೊಳ್ಳುವಲ್ಲಿ ಸಾಧನೆ ನಡೆಸುವುದು.

೩. ಶ್ರೀ ಅರವಿಂದರ ಈ ಯೋಗಸಾಧನೆಯ ಮುಖ್ಯ ಸ್ವರೂಪವೇನೆಂದರೆ– ಅಭೀಪ್ಸೆ ಹಾಗೂ ಚಿತ್ತೈಕಾಗ್ರತೆಗಳ ಮೂಲಕ ಭಗವಂತನತ್ತ ನಮ್ಮ ಆತ್ಮವನ್ನು ತೆರೆದಿರಿಸಿಕೊಳ್ಳುವುದು ಮತ್ತು ಈ ಸಾಧನೆಗೆ ವಿರೋಧಕವಾದಂಥ ಮನೋದೌರ್ಬಲ್ಯಗಳೆಲ್ಲವನ್ನು ನಿವಾರಿಸಿಕೊಳ್ಳುವುದು. ಮುಖ್ಯವಾಗಿ ಶ್ರದ್ಧೆ, ಅಭೀಪ್ಸೆ, ಸಮರ್ಪಣೆಗಳಿಂದ ನಮ್ಮ ಅಂತರಾತ್ಮ ತೆರೆದುಕೊಳ್ಳುವುದೆಂದು ಶ್ರೀ ಅರವಿಂದರ ದೃಢನಂಬುಗೆ.

೪. ನಮ್ಮೊಳಗಿನ 'ಅಂತರಾತ್ಮ' ಅಥವಾ 'ಚೈತ್ಯಪುರುಷ' (Psychic being)ನು ನಮ್ಮೊಳಗಿನ 'ಜೀವಾತ್ಮ'ದ ಇಲ್ಲದೆ ದೈವೀ ಸಾನ್ನಿಧ್ಯದ ಪ್ರಭಾವದಿಂದ ಜಾಗೃತಗೊಳ್ಳುತ್ತಾನೆ. ಆದ್ದರಿಂದ ಹೀಗೆ ಜಾಗೃತಗೊಳ್ಳಲು ಹೃದಯಾಂತರಾಳದಲ್ಲಿಯ 'ಚೈತ್ಯಪುರುಷ'ನನ್ನು ಕುರಿತು ಯಾವೊಂದು ದೇವತಾಪ್ರತಿಮೆ ಇಲ್ಲವೆ ಪ್ರತೀಕದ ಮೂಲಕ ಚಿತ್ತೈಕಾಗ್ರತೆಯ ಸಾಧನೆಯಿಂದ ಧ್ಯಾನಾಸಕ್ತರಾಗಬೇಕು. ಕೆಲಕಾಲದ ಈ ಸಾಧನೆಯ ಪರಿಣಾಮವಾಗಿ 'ಚೈತ್ಯಪುರುಷ'ನು ತೆರೆಮರೆಯಿಂದ ಹೊರಬರುತ್ತಾನೆ. ಮತ್ತು ಬಾಹ್ಯಸತ್ತೆ (outer being)ಯನ್ನು ದಿವ್ಯತೆಯತ್ತ ಹೊರಳಿಸುತ್ತಾನೆ. ಇದೇ ನಮ್ಮ ಪ್ರಕೃತಿಯ 'ಚೈತ್ಯಾತ್ಮಕ ರೂಪಾಂತರ' (Psychic transformation). ಎರಡನೆಯದಾಗಿ, ಚಿತ್ತೈಕಾಗ್ರತೆಯ ಈ ಧ್ಯಾನವನ್ನು ಊರ್ಧ್ವಮುಖಿ ಯಾಗಿಸಿ, ಉನ್ನತ–ಪ್ರಜ್ಞೆಯ ಶಕ್ತಿ ಸಾಮರ್ಥ್ಯಗಳನ್ನು ಎಂದರೆ ಅದರ ಶಾಂತಿ, ಪ್ರಭೆ, ಶಕ್ತಿ, ಜ್ಞಾನ ಮತ್ತು ಆನಂದ–ಇವುಗಳನ್ನು ಅವತರಣಗೊಳಿಸುವುದು. ಈ ಅವತರಣವು ಮಾನವನ ಇಡಿಯ ಸತ್ತೆಯನ್ನು ಆಧ್ಯಾತ್ಮಿಕವಾಗಿ ರೂಪಾಂತರ ಗೊಳಿಸುವುದಾಗಿದೆ. ಇದನ್ನು 'ಆಧ್ಯಾತ್ಮಿಕ ರೂಪಾಂತರ' (Spiritual transformation) ಎಂದು ಹೇಳುತ್ತಾರೆ. ಕೊನೆಯ ಪರಿವರ್ತನೆಯೆಂದರೆ–'ಅತಿಮಾನಸ ಅವತರಣ'. ಇದು ಭಗವಂತನ ಸೃಜನಶಕ್ತಿ. ಇದು ಮಾನವನ ಜೀವನದ ಮೇಲೆ ಪ್ರಭಾವ ಬೀರಿ, ಮಾನವನನ್ನು ದಿವ್ಯಮಾನವ ಇಲ್ಲವೆ 'ಅತಿಮಾನವ'ನನ್ನಾಗಿಸುತ್ತದೆ. ಇದೇ ಮುಂದೆ ಪೃಥ್ವಿಯ ಮೇಲಿನ ಜೀವನವನ್ನು ದಿವ್ಯ ಜೀವನವನ್ನಾಗಿಸುತ್ತದೆ. ಮರ್ತ್ಯಜೀವನದ ಅತ್ಯಂತ ಶ್ರೇಷ್ಠಸಿದ್ಧಿಯಿದು.

'ಸಮಗ್ರಯೋಗ'ದ ಸ್ವರೂಪ–ಲಕ್ಷಣಗಳನ್ನು ಸಾರಾಂಶರೂಪದಲ್ಲಿ ಹೀಗೆ ವಿವರಿಸಬಹುದಾಗಿದೆ :

೧. ಮಾನವ ಜೀವನವನ್ನು ದಿವ್ಯತೆಯ ಪೂರ್ಣತೆ (Divine Perfection)ಗೆ ತಂದು ಮುಟ್ಟಿಸುವುದೇ 'ಸಮಗ್ರಯೋಗ'ದ ಗುರಿ.

೨. ನಿಜವಾದ ಆಧ್ಯಾತ್ಮಿಕತೆ ಜೀವನವನ್ನು ತೊರೆದು ಪಲಾಯನ ಮಾಡುವುದಲ್ಲ. ಜೀವನವನ್ನು ಪರಿಪೂರ್ಣಗೊಳಿಸುವುದು–ದಿವ್ಯತೆಯ ಪರಿಪೂರ್ಣತೆಯನ್ನು ಅದಕ್ಕೆ ಒದಗಿಸಿಕೊಡುವುದು

೩. ಭಗವಂತನು ಎಲ್ಲೆಲ್ಲೂ ಇರುವನೆಂಬುದನ್ನಷ್ಟೆ ಅರಿತರೆ ಸಾಲದು. ಜಗದ ಜೀವನವನ್ನೆಲ್ಲ ಇಡಿಯಾಗಿ ರೂಪಾಂತರಗೊಳಿಸುವುದು ಮುಖ್ಯ ಕಾರ್ಯ.

೪. ಈ ಯೋಗವು ಜೀವನದ ಶಕ್ತಿ-ಸಾಮರ್ಥ್ಯಗಳನ್ನು ಬಳಸಕೂಡದೆಂದು ಹೇಳುವುದಿಲ್ಲ. ಈ ಶಕ್ತಿ-ಸಾಮರ್ಥ್ಯಗಳ ಪರಿವರ್ತನೆಯನ್ನು ಸಾಧಿಸಬೇಕು. ಇದನ್ನೇ 'ಸಮಗ್ರ ರೂಪಾಂತರ' ಎನ್ನುವುದು.

೫. ವೈಯಕ್ತಿಕ ಮುಕ್ತಿಯನ್ನು ಸಾಧಿಸಿಕೊಂಡು ಸುಮ್ಮನೆ ಕುಳಿತುಕೊಳ್ಳುವುದನ್ನು ಈ ಯೋಗವು ಒಪ್ಪುವುದಿಲ್ಲ. ಇದು ನೇತ್ಯರ್ಥಕ (negative) ಪ್ರವೃತ್ತಿ. ನಮ್ಮ ಸುತ್ತಣ ಸಮಾಜ ಮತ್ತು ಜಗತ್ತು ಸಾಕ್ಷಾತ್ಕಾರ ಪಡೆದವರಿಂದ ಪ್ರಗತಿಪರ ಪರಿವರ್ತನೆಯನ್ನು ನಿರೀಕ್ಷಿಸುತ್ತಿರುತ್ತದೆ. ಆದ್ದರಿಂದ ಪೂರ್ಣಯೋಗವು ಕ್ರಿಯೆ ಮತ್ತು ಧ್ಯಾನಗಳೆರಡರ ಸಮತೂಕದ ಐಕ್ಯಸಾಧನೆಯನ್ನು ಕಾಯ್ದುಕೊಳ್ಳಲು ಬೋಧಿಸುತ್ತದೆ.

೬. ಮಾನವನ ಪ್ರಕೃತಿಯ ಪರಿವರ್ತನೆಯನ್ನು ಸಾಧಿಸದ ಯೋಗದಿಂದೇನು ಪ್ರಯೋಜನ ? ಎಂದು ಪ್ರಶ್ನಿಸುತ್ತಾರೆ ಶ್ರೀ ಅರವಿಂದರು.

೭. 'ಪೂರ್ಣಯೋಗ'ದಲ್ಲಿ ಸಾಧನೆ ಮತ್ತು ಬಾಹ್ಯಜೀವನ ಇವುಗಳ ನಡುವೆ ಯಾವ ಭೇದವೂ ಇಲ್ಲ. ಜೀವನದ ಪ್ರತಿಕ್ಷಣದಲ್ಲೂ ಸತ್ಯಶೋಧನೆ ಮತ್ತು ಅದರ ಸಾಧನೆ ನಿರಂತರವಾಗಿ ನಡೆಯಬೇಕು.

೮. ಈ ಜೀವನದಲ್ಲಿಯೆ ದಿವ್ಯತ್ವವನ್ನು ಕಂಡುಕೊಳ್ಳಬೇಕು. ಈ ಅನ್ವೇಷಣೆಯಿಂದಲೆ ಜೀವನದ ಪರಿವರ್ತನೆ ಸಾಧ್ಯ

ಒಟ್ಟಿನಲ್ಲಿ ಈ ಜೀವನದಲ್ಲಿಯೆ ನಾವು ಗೆಲುವನ್ನು ಸಾಧಿಸಬೇಕು, ಈಸಬೇಕು, ಇದ್ದು ಜಯಿಸಬೇಕು ಜೀವನದ ಎಲ್ಲ ಪ್ರಸಂಗಗಳಲ್ಲೂ ಒಟ್ಟೊಟ್ಟಿಗನಾಗಿ ಭಗವಂತನೊಂದಿಗೆ ಎಂದರೆ 'ನಿತ್ಯ'ದೊಂದಿಗೆ ಮತ್ತು 'ಅನಂತ'ದೊಂದಿಗೆ ನಿರಂತರವಾಗಿ ಜೀವಿಸುವುದು ಹೇಗೆಂಬುದನ್ನು 'ಸಮಗ್ರಯೋಗ'ವು ನಮಗೆ ಕಲಿಸುತ್ತದೆ.

೯. ಕೊನೆಯದಾಗಿ 'ಸಮಗ್ರಯೋಗ'ದ ವೈಶಿಷ್ಟ್ಯವನ್ನು ಕುರಿತು ಶ್ರೀ ಅರವಿಂದರೇ ಹೀಗೆ ಹೇಳಿದ್ದಾರೆ: "ಇತರ ಯೋಗಗಳಲ್ಲಿ ಅವರೋಹಣಕ್ರಿಯೆ ಸಾಧನೆಯಲ್ಲಿ ಗೌಣವಾದುದು, ಇಲ್ಲವೆ ಆರೋಹಣಕ್ರಿಯೆಯ ಒಂದು ಪರಿಣಾಮವಾಗಿ ಘಟಿಸುವಂಥದು. ಅಲ್ಲಿ ಆರೋಹಣವೇ ನಿಜದ ಸಂಗತಿ. ಆದರೆ ನಮ್ಮ 'ಸಮಗ್ರಯೋಗ'ದಲ್ಲಿ ಆರೋಹಣಕ್ರಿಯೆ ಮೊದಲ ಹೆಜ್ಜೆ ಮಾತ್ರ, ಇದು ಅವರೋಹಣ ಕ್ರಿಯೆಗೆ ಒಂದು ಸಾಧನ. ಆರೋಹಣ ಕ್ರಿಯೆಯಿಂದ ಪ್ರಾಪ್ತವಾದ ಹೊಸ ಚೇತನದ ಅವರೋಹಣವೇ ನನ್ನ 'ಸಮಗ್ರಯೋಗ'ದ ಪ್ರಮುಖ ವೈಶಿಷ್ಟ್ಯ. ತಂತ್ರಯೋಗ ಮತ್ತು ವೈಷ್ಣವ ಭಕ್ತಿ ಪಂಥಗಳೂ ಜೀವನದಿಂದ ಬಿಡುಗಡೆ ಹೊಂದುವುದನ್ನೇ ಗುರಿಯಾಗಿರಿಸಿಕೊಂಡಿವೆ. ಆದರೆ 'ಸಮಗ್ರಯೋಗ'ದಲ್ಲಿ ಜೀವನದ ದಿವ್ಯ ಸಾರ್ಥಕತೆಯೆ ಮುಖ್ಯೋದ್ದೇಶ. ಈ ಉದ್ದೇಶ ಸಾಧನೆಗಾಗಿ 'ಸಮಗ್ರಯೋಗ' ವಿಧಾನವನ್ನು ಇಲ್ಲಿ ಬಹಿರಂಗವಾಗಿ ಸಾರಲಾಗಿದೆ. ಈ ವಿಧಾನವು ಅದರ ಗುರಿಯ ಹಾಗೆ ಸಮಗ್ರವೂ ಅಖಂಡವೂ ಆಗಿದೆ. ಅಂದರೆ ಚೇತನದ ಹಾಗೂ ಪ್ರಕೃತಿಯ ಸಮಗ್ರ ಹಾಗೂ ಅಖಂಡ ಪರಿವರ್ತನೆಯಾಗಬೇಕಾಗಿದೆ. ಈ ಯೋಗದ ವಿಶಿಷ್ಟ ವಿಧಾನದ ಪ್ರಕ್ರಿಯೆಗಳಿಗೆ ಸಹಾಯಕವಾಗುವಂತೆ ಹಳೆಯ ಯೋಗವಿಧಾನಗಳ ಪ್ರಕ್ರಿಯೆಗಳನ್ನು ಕೆಲಮಟ್ಟಿಗೆ ಮಾತ್ರ ಬಳಸಿಕೊಳ್ಳಲಾಗಿದೆ. ಹಳೆಯ ಯೋಗಗಳಲ್ಲಿ 'ಸಮಗ್ರಯೋಗ'ದ ಈ ವಿಧಾನವನ್ನು ಅಥವಾ ಇದರಂಥದೊಂದನ್ನು ಇಡಿಯಾಗಿ ಕಂಠೋಕ್ತವಾಗಿ ಸಾರಿಲ್ಲ. ಇಲ್ಲವೆ ಈ ವಿಧಾನದ ಸಿದ್ಧಿಯನ್ನು ಯಾರೂ ಸಾಧಿಸಿಕೊಂಡಂತೆಯೂ ನನಗೆ ಕಂಡುಬಂದಿಲ್ಲ. ಹಾಗೆ ನನಗೆ ಕಂಡುಬಂದಿದ್ದರೆ ಈ ಹೊಸ ಯೋಗಮಾರ್ಗವೊಂದನ್ನು ರಚಿಸಲು ನನ್ನ ಸಮಯವನ್ನು ಹಾಳುಮಾಡಿಕೊಳ್ಳುತ್ತಿರಲಿಲ್ಲ. ಮೂವತ್ತು ವರ್ಷಗಳ ಸುದೀರ್ಘ ಅನ್ವೇಷಣೆ ಮತ್ತು ಅಂತಃಸ್ಫುಷ್ಟಿಗಳಲ್ಲಿ ತೊಡಗದೆ, ಆಗಲೆ ಸರ್ವರಿಗಾಗಿ, ಅಚ್ಚುಕಟ್ಟಾಗಿ ಸಿದ್ಧಪಡಿಸಿದ ಯೋಗಪಥಗಳಲ್ಲಿ ಅನಾಯಾಸವಾಗಿ ನಾಗಾಲೋಟದಿಂದ ನನ್ನ ಗುರಿ ಮುಟ್ಟಲು ಧಾವಿಸುತ್ತಿದ್ದೆ. ನಮ್ಮ ಈ 'ಸಮಗ್ರಯೋಗ'ವು ಹಳೆಯ ಯೋಗಪಥಗಳನ್ನೇ ಪುನಃ ಅನುಸರಿಸುವುದಲ್ಲ. ಇದೊಂದು ನೂತನ ಆಧ್ಯಾತ್ಮಿಕ ಸಾಹಸವಾಗಿದೆ !" ಎಂದಿದ್ದಾರೆ ಶ್ರೀ ಅರವಿಂದರು.

❑

---

* [illegible], ೧ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು ೫೬೦ ೦೧೦

ಎಸ್.ಎಲ್. ಭೈರಪ್ಪನವರ 'ಆವರಣ'ದ ಅನಾವರಣ

ಸಿ.ಎನ್. ರಾಮಚಂದ್ರನ್

ಪ್ರಕಟಣೆಗೆ ಮೊದಲೇ ಕಾದಂಬರಿಯ 'ಪ್ರವೇಶ'ದಿಂದ ಆಯ್ದ ಭಾಗಗಳು ದಿನಪತ್ರಿಕೆಯೊಂದರ ಇಡೀ ಒಂದು ಪುಟದ ತುಂಬ--ಕಾದಂಬರಿಕಾರರೊಡನೆ ನಡೆಸಿದ ಸಂದರ್ಶನ ಅದೇ ಪತ್ರಿಕೆಯ ಮತ್ತೊಂದು ಇಡೀ ಪುಟದ ತುಂಬ---ಲೋಕಾರ್ಪಣೆಗೊಂಡ ಒಂದೂವರೆ ತಿಂಗಳಲ್ಲಿ (ಕಾದಂಬರಿಯಲ್ಲಿ ದಾಖಲಿಸಿರುವಂತೆ) ಆರು ಆವೃತ್ತಿಗಳು--ಅದೇ ಅವಧಿಯಲ್ಲಿ ಬೆಂಗಳೂರಿನಲ್ಲಿಯೇ ಕೃತಿಯ ಬಗ್ಗೆ ಎರಡು ವಿಚಾರ ಸಂಕಿರಣಗಳು ಮತ್ತು ಲೇಖಕರೊಡನೆ ಸಂವಾದ -- ಇತ್ಯಾದಿಗಳ ಭವ್ಯ ಪ್ರಭಾವಳಿಯನ್ನು ಬೆಳೆಸಿಕೊಂಡಿರುವ ಡಾ. ಭೈರಪ್ಪನವರ ಇತ್ತೀಚಿನ ಕಾದಂಬರಿ **ಆವರಣ**ವನ್ನು ಓದಿದ ನಂತರ ಮತ್ತೆ ಮತ್ತೆ ನೆನಪಿಗೆ ಬಂದುದು ಮುಂಡಕೋಪನಿಷತ್ತಿನ ಈ ಸಾಲುಗಳು: "*ಅವಿದ್ಯಾಯಾಮಂತರೇ ವರ್ತಮಾನಾಃ / ಸ್ವಯಂ ಧೀರಾಃ ಪಂಡಿತಂ ಮನ್ಯಮಾನಾಃ // ಜಘನ್ಯಮಾನಾಃ ಪರಿಯಾಂತಿ ಮೂಢಾಃ / ಅಂಧೇನೈವ ನೀಯಮಾನಾ ಯಥಾಂಧಾಃ //*" ('ಅವಿದ್ಯೆಯ ಆಳದಲ್ಲಿ ಮುಳುಗಿರುವ ಅಜ್ಞಾನಿಗಳು ತಮ್ಮನ್ನು ಸ್ವತಃ ಬುದ್ಧಿವಂತರೆಂದು, ವಿದ್ವಾಂಸರೆಂದು ಭಾವಿಸುತ್ತಾರೆ. ಅಂತಹವರು ಅಂಧರಿಗೆ ದಾರಿ ತೋರುವ ಇತರ ಅಂಧರಂತೆ').

ಭೈರಪ್ಪನವರು ತಮ್ಮ ಕಾದಂಬರಿಯನ್ನು "ಐತಿಹಾಸಿಕ ಕಾದಂಬರಿ" ಎಂದು ಗುರುತಿಸುತ್ತಾ, ಅದರ ವಸ್ತುವಿನ ಬಗ್ಗೆ "ಪ್ರವೇಶ"ದಲ್ಲಿ ಹೀಗೆ ಹೇಳುತ್ತಾರೆ: "ಭಾರತದ ಇತಿಹಾಸದ ಅತ್ಯಂತ ಸಂಕೀರ್ಣವಾದ ಈ ಅವಧಿಯ ಬಗೆಗೆ ವಿಪುಲವಾದ ಸಾಮಗ್ರಿ ಇದೆ. ಆದರೆ ಆವರಣಶಕ್ತಿಯು ಈ ವಿಪುಲತೆಯನ್ನು ಮೀರಿ ವಿಜೃಂಭಿಸುತ್ತಿದೆ. 'ಸಾರ್ಥ'ದ ಕಾಲದ ಇತಿಹಾಸವು ಆವರಣಶಕ್ತಿಗೆ ಹೆಚ್ಚು ಬಲಿ ಬಿದ್ದಿಲ್ಲ. ಅವುಗಳನ್ನು ಕುರಿತು ನಿರ್ಭಯವಾಗಿ ಸತ್ಯವನ್ನು ಬರೆಯಬಹುದು. ಆದರೆ 'ಆವರಣ' ಕಾಲದ ಮಾತು ಹಾಗಿಲ್ಲ. ಪ್ರತಿಯೊಂದು ಮೆಟ್ಟಿಲಿನಲ್ಲೂ ಆವರಣಶಕ್ತಿಯನ್ನು ಭೇದಿಸಿಕೊಂಡೇ ಸಾಗಬೇಕಾದ ಅಪರಿಹಾರ್ಯತೆ ಇದೆ." ಕಾದಂಬರಿಯ ಕೊನೆಯಲ್ಲಿ ಆಧಾರ ಗ್ರಂಥಗಳೆಂದು ಇವರು ಕೊಡುವ ಅರವತ್ತಕ್ಕೂ ಹೆಚ್ಚು ಕೃತಿಗಳ ಪಟ್ಟಿಯನ್ನು ನೋಡಿದಾಗ ಈ 'ಆವರಣಶಕ್ತಿ' ಅಷ್ಟೇನೂ ಪ್ರಬಲವಾದದ್ದೆಂದು ಮತ್ತು ಈ ಕಾಲಘಟ್ಟದ ಬಗ್ಗೆ ಬರೆಯುವವರಿಗೆ ಅತೀವ ಧೈರ್ಯ-ಸಾಹಸಗಳು ಬೇಕಾಗುತ್ತವೆಂದು ಕಾಣುವುದಿಲ್ಲ. ಇರಲಿ.

ಈಗ, ಕಾದಂಬರಿಯ ವಸ್ತುವಿಗೆ ಬಂದರೆ, ಇದು ಸಾಕುಬೇಕಾದಷ್ಟು ಕಥೆ-ಕಾದಂಬರಿಗಳಿಗೆ ಜನ್ಮ ಕೊಟ್ಟಿರುವ ಹಿಂದು-ಮುಸ್ಲಿಮ್ ಘರ್ಷಣೆ ಎಂದು ಗೊತ್ತಾಗುತ್ತದೆ. ಕಾದಂಬರಿಯಲ್ಲಿ ಈ ಘರ್ಷಣೆ ಎರಡು ಕಾಲಘಟ್ಟಗಳಲ್ಲಿ ನಡೆಯುತ್ತದೆ: ಕಥಾನಾಯಕಿ ಲಕ್ಷ್ಮಿ ಉರುಫ್ ರಜಿಯಾ -- ಅವಳ ಗಂಡ ಅಮೀರ್ -- ಬಾಬ್ರಿ ಮಸೀದಿಯ ಧ್ವಂಸ - -ಇತ್ಯಾದಿ ಪಾತ್ರ-ಘಟನೆಗಳನ್ನು ಒಳಗೊಳ್ಳುವ ಆಧುನಿಕ ಕಾಲ (೨೦ನೆಯ ಶತಮಾನದ ಕೊನೆಯ ದಶಕಗಳು); ಮತ್ತು ಲಕ್ಷ್ಮಿ ಬರೆಯುವ ಕಾದಂಬರಿಯು ಚಿತ್ರಿಸುವ ೧೬-೧೭ನೆಯ ಶತಮಾನಗಳ ಕಾಲಘಟ್ಟ. ಕಾದಂಬರಿಯ ಮುಖ್ಯ ಕಥಾಂಶಗಳನ್ನು ಹೀಗೆ ಸಂಗ್ರಹಿಸಬಹುದು: ನರಸಾಪುರವೆಂಬ ಒಂದು ಹಳ್ಳಿಯಲ್ಲಿ ಗೌಡರ ಮನೆತನದಲ್ಲಿ ಹುಟ್ಟಿ ಬೆಳೆಯುವ ಲಕ್ಷ್ಮಿ ಆಧುನಿಕ ಶಿಕ್ಷಣವನ್ನು ಪಡೆದು, ಪುಣೆಯ ಫಿಲ್ಮ್ ಇನ್ಸ್ಟಿಟ್ಯೂಟ್‌ನಲ್ಲಿ ತರಬೇತಿ ಪಡೆಯುವಾಗ ಸಹಪಾಠಿಯಾಗಿದ್ದ ಅಮೀರ್ ಎಂಬ ಮುಸ್ಲಿಂ ಯುವಕನನ್ನು ಪ್ರೀತಿಸಿ, ಮತಾಂತರಗೊಂಡು, ಅವನನ್ನು ಮದುವೆಯಾಗಿ, ತನ್ನ ಹೆಸರನ್ನು ರಜಿಯಾ ಎಂದು ಬದಲಾಯಿಸಿಕೊಳ್ಳುತ್ತಾಳೆ. ಕಾಲಕ್ರಮದಲ್ಲಿ ತನ್ನ ಗಂಡನ ಮನೆಯ ಸಾಂಪ್ರದಾಯಿಕ ಮುಸ್ಲಿಂ ಮತಾಚರಣೆ-ನಂಬಿಕೆಗಳಿಂದ ಮತ್ತು ನೇರವಾಗಿ ಅವಳ ಪಕ್ಷವನ್ನು ವಹಿಸದ ಅಮೀರನ ವರ್ತನೆಯಿಂದ ಅವಳ ವೈವಾಹಿಕ ಜೀವನ ದುರ್ಭರವಾಗುತ್ತದೆ. ಈ ಸಂದರ್ಭದಲ್ಲಿಯೇ ಅವಳ ತಂದೆಯ ಸಾವಿನಿಂದಾಗಿ ಅವಳು ತನ್ನ ಊರಿಗೆ ಹೋದಾಗ ಅಲ್ಲಿ ಅವಳ ತಂದೆ ಒಂದು ಚಾರಿತ್ರಿಕ ಕೃತಿಯನ್ನು ಬರೆಯಲು ಸಂಗ್ರಹಿಸಿದ್ದ ಮಧ್ಯಕಾಲೀನ ಭಾರತವನ್ನು ಕುರಿತ ಗ್ರಂಥಗಳನ್ನು ಕಂಡು ಚಕಿತಳಾಗುತ್ತಾಳೆ. ಅವುಗಳನ್ನು ಓದುತ್ತಾ ಹೋದಂತೆ, ತನ್ನ ತಂದೆ ಬರೆಯಬೇಕೆಂದಿದ್ದ

ಚರಿತ್ರೆಗೆ ಬದಲು ಅದೇ ವಸ್ತುವನ್ನು ಬಳಸಿಕೊಂಡು ಅವಳು ಒಂದು ಕಾದಂಬರಿಯನ್ನು ರಚಿಸುತ್ತಾಳೆ. ಆ ಕಾದಂಬರಿ, ೧೭ನೆಯ ಶತಮಾನದ ದೇವಗಢದ ರಾಜಕುಮಾರನ ಬದುಕನ್ನು ಚಿತ್ರಿಸುವ ಕಾದಂಬರಿ. ಆ ರಾಜಕುಮಾರನು ಒಂದು ಸಂದರ್ಭದಲ್ಲಿ ಮುಸ್ಲಿಂ ಧಾಳಿಗೆ ತುತ್ತಾಗಿ, ಅವರಿಗೆ ಸೆರೆ ಸಿಕ್ಕಿ, ಅವರ ಬಲಾತ್ಕಾರದಿಂದ ಹಿಜಡಾ ಆಗಿ, ಅನೇಕ ಅಂತಃಪುರಗಳಲ್ಲಿ ಸೇವೆ ಮಾಡುತ್ತಾ, ಆ ಕಾಲಘಟ್ಟದಲ್ಲಾಗುವ ಮುಸ್ಲಿಂ ನವಾಬ್-ಬಾದಶಹರುಗಳ ಅನೇಕ ಕೃತ್ಯಗಳ ಸಾಕ್ಷಿಯಾಗುತ್ತಾನೆ. ಕೊನೆಗೆ, ತನ್ನ ಪತ್ನಿಯೂ ಅಂತಹುದೇ ಅಂತಃಪುರವೊಂದರಲ್ಲಿ ದಾಸಿಯಾಗಿರುವುದು ಗೊತ್ತಾಗಿ, ಇಬ್ಬರೂ ಅಲ್ಲಿಂದ ತಪ್ಪಿಸಿಕೊಂಡು ಓಡಿಹೋಗುವ ನಿರ್ಧಾರವನ್ನು ತಳೆಯುತ್ತಾರೆ. ಈ ಕಾದಂಬರಿಯನ್ನು ಪ್ರಕಟಿಸಲು ಯಾರೂ ಮುಂದೆ ಬರದಿದ್ದಾಗ ಲಕ್ಷ್ಮಿ ತಾನೇ ಪ್ರಕಟಿಸಿ, ಗ್ರಂಥಭಂಡಾರಗಳಿಗೆ ಕೊಡುತ್ತಾಳೆ. ಆ ಕಾದಂಬರಿಯನ್ನು ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆ ತರುತ್ತದೆನ್ನುವ ಕಾರಣ ಕೊಟ್ಟು ಸರಕಾರ ಮುಟ್ಟುಗೋಲು ಹಾಕಿಕೊಳ್ಳುತ್ತದೆ. ಲೇಖಕಿ ಲಕ್ಷ್ಮಿಯನ್ನೂ ಬಂಧಿಸುವ ಸಾಧ್ಯತೆಯಿರುವ ವಾತಾವರಣದಲ್ಲಿ, ಅಮೀರ್ ಅಲ್ಲಿಗೆ ಬಂದು ಲಕ್ಷ್ಮಿಯನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯುತ್ತಾನೆ. ತಾನು ಬರೆದಿರುವ ಕಾದಂಬರಿಯ ನಿಷೇಧದ ಪ್ರಶ್ನೆ ನ್ಯಾಯಾಲಯದ ಮೆಟ್ಟಿಲನ್ನೇರಿದರೆ, ತನ್ನ ಸಮರ್ಥನೆಯನ್ನು ಮಾಡಿಕೊಳ್ಳಲು ಲಕ್ಷ್ಮಿ ಸಿದ್ಧಳಾಗುತ್ತಿರುವಲ್ಲಿಗೆ ಹೊರ ಕಾದಂಬರಿಯೂ ಮುಗಿಯುತ್ತದೆ.

ಎರಡು ಭಿನ್ನ ಕಾಲಘಟ್ಟಗಳ ಆಗುಹೋಗುಗಳನ್ನು ಅರ್ಥಪೂರ್ಣವಾಗಿ ದಾಖಲಿಸಲು ಸಾಧ್ಯವಾಗುವಂತಹ 'ಕೃತಿಯೊಳಗೊಂದು ಕೃತಿ' ತಂತ್ರವನ್ನು ಭೈರಪ್ಪನವರು ಇಲ್ಲಿ ಉಪಯೋಗಿಸುತ್ತಾರೆ. ಆದರೆ ಅಪಾರ ಸಾಧ್ಯತೆಗಳಿರುವ ಈ ತಂತ್ರವನ್ನು ಅವರು ಉಪಯೋಗಿಸುವುದು ತಮ್ಮದೇ ಆದ ಏಕಮುಖಿ ಕಥನವನ್ನು ಕಟ್ಟಲು.

ಇಡೀ ಕಾದಂಬರಿಯ ಸಂವಿಧಾನ 'ನಾವು X ಅವರು' ಎಂಬಂತಹ, ಇಸ್ಲಾಂ ಧರ್ಮಾನುಯಾಯಿಗಳನ್ನು 'ಅನ್ಯ'ರನ್ನಾಗಿಸುವ ನಿಲುವಿನಿಂದ ಕಟ್ಟಲ್ಪಟ್ಟಿದೆ ("ಆ ಧರ್ಮದ ರೂಪ ..." "ನಮ್ಮ ಧರ್ಮದಲ್ಲಾದರೋ.." "ಆ ಜನರು..." ಇತ್ಯಾದಿ). ಪರಿಣಾಮತಃ, ಉದ್ದಕ್ಕೂ ಕಾದಂಬರಿಯ ಲಕ್ಷ್ಯ 'ಆ ಧರ್ಮದವರನ್ನು' ಆಪಾದಿತರ ಸ್ಥಾನದಲ್ಲಿ ನಿಲ್ಲಿಸಿ, 'ಭಾರತದಲ್ಲಿ ಅವರಿಂದಾಗಿರುವ ಘೋರ ಕೃತ್ಯಗಳನ್ನು' ಚಿತ್ರಿಸುವುದಾಗಿದೆ. ಉದಾಹರಣೆಗೆ:

(೧) ಕಾದಂಬರಿಯ ನಿರೂಪಣಾ ತಂತ್ರ: ಸಮಕಾಲೀನ ಭಾರತದ ಪಾತ್ರಗಳಾದ ಮತಾಂತರಗೊಂಡ ಲಕ್ಷ್ಮಿ / ರಜಿಯಾ, ಅವಳ ಪತಿ ಅಮೀರ್, ಪ್ರೊ. ಶಾಸ್ತ್ರಿ, ಮುಂತಾದವರ ಕಥೆಯೊಳಗೆ ರಜಿಯಾ ಬರೆಯುವ ದೇವಗಡದ ರಾಜಕುಮಾರ, ಅವನ ಪತ್ನಿ, ಮುಂತಾದವರನ್ನೊಳಗೊಂಡ ೧೭ನೆಯ ಶತಮಾನದ ಭಾರತದ ಕಥೆಯಿದೆ. ಈ ಬಗೆಯ 'ಕಥೆಯೊಳಗೊಂದು ಕಥೆ'ಯ ತಂತ್ರದಿಂದ ಭೈರಪ್ಪನವರು ದಾಖಲಿಸಲು ಪ್ರಯತ್ನಿಸುವುದೇನೆಂದರೆ 'ಇಸ್ಲಾಂ ಧರ್ಮ ಮತ್ತು ಅದರ ಅನುಯಾಯಿಗಳು ಎಂದೂ ಬದಲಾಗುವುದಿಲ್ಲ' ಎಂಬುದನ್ನು ಮತ್ತು "ಮುಸ್ಲಿಂ ಆಳ್ವಿಕೆಯು ಭಾರತದ ಗಂಡಸರನ್ನೆಲ್ಲ ಶಿಖಂಡಿಗಳನ್ನಾಗಿ ಮಾಡಿತು" ಎಂದು ಮಂಡಿಸಲು. ಈ ಕಾರಣದಿಂದಲೇ, 'ಒಳ ಕಥೆ'ಯ ನಾಯಕ, ದೇವಗಢ್ ರಾಜಕುಮಾರ, ಮುಸ್ಲಿಮರ ಅತ್ಯಾಚಾರಕ್ಕೆ ಒಳಗಾಗಿ ಶಿಖಂಡಿಯಾಗುವುದು, ಸಾಂಕೇತಿಕ ಮಹತ್ವವನ್ನು ಪಡೆಯುತ್ತದೆ.

(೨) ಭಾವಪ್ರಚೋದಕ ಸಂಗತಿಗಳ ಮೇಲೆ ಒತ್ತು: ಇಡೀ ಕಾದಂಬರಿಯಲ್ಲಿ ಸೂಕ್ಷ್ಮ ವಿವರಗಳೊಡನೆ ಅತ್ಯಂತ ಭಾವನಾತ್ಮಕವಾಗಿ ಚಿತ್ರಿಸಲ್ಪಟ್ಟಿರುವ ಘಟನೆ/ಸಂಗತಿಗಳೆಂದರೆ ಇವುಗಳು: ಮಗು ಹುಟ್ಟಿದ ಸಂದರ್ಭದಲ್ಲಿ ಆಡುಗಳನ್ನು ಬಲಿಕೊಡುವ 'ದಿಬ್‌ಹ' ಆಚರಣೆ (ಈ ಘಟನೆಯ ಆಧಾರದ ಮೇಲೆ ಲೇಖಕರು ತೀರ್ಮಾನಿಸುವುದೇನೆಂದರೆ "ಪ್ರಾಣಿಬಲಿಯು ಈ ಧರ್ಮಾಚರಣೆಯ ಒಂದು ಬಿಡಿಸಲಾಗದ ಅಂಗ." ಪು. ೨೩); ದೇವಗಢ್ ರಾಜ್ಯದ ಮುತ್ತಿಗೆಯ ಸಂದರ್ಭದಲ್ಲಿ ಅಲ್ಲಿಯ ರಾಣೀವಾಸದವರು ಕೈಗೊಳ್ಳುವ 'ಜೌಹರ್'(ಪು.೭೬-೭೭); ಆ ಯುದ್ಧದಲ್ಲಿ ವಿಜಯಿಗಳಾದ ಮುಸ್ಲಿಂ ಸೈನಿಕರಿಂದ ರಾಜಧಾನಿಯಲ್ಲಿ ಆಗುವ ವಿಗ್ರಹ ಭಂಜನೆ (ಪು. ೭೮-೭೯); ನವಾಬ-ಮನ್‌ಸಬ್‌ದಾರರಲ್ಲಿದ್ದ ಸಲಿಂಗ ಕಾಮ (ಪು. ೮೧-೮೨); ಪುಂಸತ್ವ ನಾಶ (ಪು. ೮೬); ಜನಾನಾ ಬದುಕು (೮೮-೯೨); ಔರಂಗಜೇಬನ ಕಾಲದಲ್ಲಾದ ಹಿಂದೂ ದೇವಾಲಯಗಳ ನಾಶ (ಇಲ್ಲಿ ೫೬ ಸ್ಥಳಗಳ ಉದ್ದ ಪಟ್ಟಿಯಿದೆ, ಪು. ೧೧೫); ಸಾಮಾನ್ಯವಾಗಿ ಮುಸ್ಲಿಮರ ಆಳ್ವಿಕೆಯ ಕಾಲದಲ್ಲಾದ ಅತ್ಯಾಚಾರ (ಪು. ೧೨೦-೧೨೪, ಪು.೨೧೬-೨೧೯); ಇಂದಿನ ಕಾಶಿಯ ದಯನೀಯ ಸ್ಥಿತಿ ಮತ್ತು ವಿಶ್ವನಾಥ ಮಂದಿರದ ನಾಶ (೧೮೩-೧೮೪, ೧೯೩-೨೦೦);

ಜೆಹಾದ್‌ನಲ್ಲಿ ಸತ್ತವನಿಗೆ ಸಿಗುವ ಸ್ವರ್ಗಸುಖದ ವರ್ಣನೆ (ಪು.೨೦೯–೨೧೦); ಒಟ್ಟಾರೆಯಾಗಿ, ಭಾರತದಲ್ಲಿ ಮುಸ್ಲಿಂ ಪ್ರಭುಗಳು ಮತ್ತು ಮತಾನುಯಾಯಿಗಳು ಇವರುಗಳಿಂದ ಆಗಿರುವ ಅನ್ಯಾಯಗಳು (ಪು.೨೨೯–೨೩೬).

(೩) **ವಿಡಂಬನೆಗಳಿಗೊಳಗಾದ ಪಾತ್ರಗಳು:** ಸೆಕ್ಯುಲರ್ ನಿಲುವಿನ ಪ್ರೊ. ಶಾಸ್ತ್ರಿ (ಇವರು ಪಕ್ಕಾ ಢೋಂಗಿಯೆಂದು, ಪ್ರಚಾರ–ಪ್ರಸಿದ್ಧಿಗಳಿಗಾಗಿ ಏನು ಮಾಡಲೂ ಹೇಸದವರೆಂದು, ವಿನಾ ಕಾರಣ ಹೆಣ್ಣುಮಕ್ಕಳ ಮೈ–ಕೈ ಮುಟ್ಟುವ ಚಟದವರೆಂದು ಚಿತ್ರಿಸಲಾಗಿದೆ -- ದೀರ್ಘವಾಗಿ); "ಎಲ್ಲೆಡೆಯೂ ಬೇಹುಗಾರರನ್ನಿಟ್ಟಿರುವ" ತಬ್ಲೀಘ್‌ನವರು (ಪು. ೨೬–೨೭); ಇಚ್ಛಾಶಕ್ತಿಯಿಲ್ಲದ ಅಮೀರ್; ಅನ್ಯ ಮತೀಯರನ್ನು ದ್ವೇಷಿಸುತ್ತಿದ್ದ ಟಿಪು (ಪು.೫೯–೬೩); ೧೭ನೆಯ ಶತಮಾನದ ಹಾಜಿ ಹಮ್‌ದುಲ್ಲಾ; ಇತ್ಯಾದಿ. ಮುಸ್ಲಿಂ ಪಾತ್ರಗಳೆಲ್ಲವೂ -- ಒಂದು ಅಪವಾದವೂ ಇಲ್ಲದೆ -- ಧರ್ಮಾಂಧರಂತೆ ಮತ್ತು ಕ್ರೂರಿಗಳಂತೆ ಚಿತ್ರಿಸಲ್ಪಟ್ಟಿದ್ದಾರೆ; ಮತ್ತು ರಜ಼ಿಯಾಳ /ಭೈರಪ್ಪನವರ ವಿಚಾರಗಳನ್ನು ಒಪ್ಪದವರು 'ಢೋಂಗಿ'ಗಳೆಂದು, "ಮಾರ್ಕ್ಸಿಸ್ಟ್ ಗ್ಯಾಂಗ್"ಗೆ ಸೇರಿದವರೆಂದು ವಿಡಂಬಿಸಲ್ಪಟ್ಟಿದ್ದಾರೆ.

(೪) **ಭಾಷೆ:** ಈ ಕಾದಂಬರಿಯಲ್ಲಿ, ಹೆಚ್ಚಿನ ಸಂದರ್ಭಗಳಲ್ಲಿ, 'ಮುಸ್ಲಿಮರು' ಎನ್ನುವುದಕ್ಕೆ ಪರ್ಯಾಯವಾಗಿ ಉಪಯೋಗಿಸಲ್ಪಡುವ ಶಬ್ದಗಳೆಂದರೆ 'ಮುಸ್ಲಿಂ ಆಕ್ರಮಣಕಾರರು,' 'ದೇಶಕ್ಕೆ ನುಗ್ಗಿದ ಮುಸ್ಲಿಮರು', 'ಆ ಜನರು' ಇತ್ಯಾದಿ. ಅಲ್ಲದೆ, ವ್ಯಂಗ್ಯ–ವಿಡಂಬನೆಗಳಿಲ್ಲದ ಯಾವ ಇಸ್ಲಾಂ ನಂಬಿಕೆಯೂ ಆಚರಣೆಯೂ ಇಲ್ಲ.

ಇದು 'ಲೇಖಕನ ನಿಷ್ಠೆ ಇರಬೇಕಾದುದು ಸತ್ಯಕ್ಕೆ ಮಾತ್ರ' ಎಂದು ಮತ್ತೆ ಮತ್ತೆ ಘೋಷಿಸುವ ಭೈರಪ್ಪನವರು ದಾಖಲಿಸುವ 'ಸತ್ಯ'. ಹಾಗಾದರೆ, ಕಾದಂಬರಿಯಲ್ಲಿ ಬರುವ ಘಟನೆ–ವಿವರಗಳು ಸತ್ಯದೂರವೆ ಎಂದರೆ ಖಂಡಿತಾ ಅಲ್ಲ; ಆದರೆ, ಇವೆಲ್ಲವೂ ಅರ್ಧ ಸತ್ಯ.

ಈ ಕಾದಂಬರಿ ದಾಖಲಿಸುವ, ಧ್ವನಿಸುವ ವಿವರಗಳು ಅರ್ಧ ಸತ್ಯಗಳೇಕೆಂದರೆ, ಇವುಗಳು ಒಂದು ಕಾಲಘಟ್ಟದ ಚರಿತ್ರೆಯ ಒಂದು ಮುಖವನ್ನು ಮಾತ್ರ ತೋರಿಸುತ್ತವೆ. ಆ ಚರಿತ್ರೆಗಿರುವ ಇನ್ನೊಂದು ಮುಖವೆಂದರೆ, ಸಾಂಸ್ಥಿಕೀಕರಣಗೊಂಡ ಎಲ್ಲಾ ಧರ್ಮಗಳು /ಧಾರ್ಮಿಕ ಪಂಥಗಳೂ ಸಾಮಾಜಿಕವಾಗಿ ದುರ್ಬಲವಾಗಿರುವ ವರ್ಗಗಳ ಬಗ್ಗೆ ಕ್ರೌರ್ಯವನ್ನು ಅಂತರ್ಗತಗೊಳಿಸಿಕೊಂಡಿರುತ್ತವೆ ಎಂಬ ಸತ್ಯ. ಉದಾಹರಣೆಗಾಗಿ, ಹಿಂದು ಧರ್ಮ: ಕನಿಷ್ಠ ಪಕ್ಷ ಎರಡು ಸಹಸ್ರಮಾನಗಳಿಂದ ಹಿಂದೂ ಸ್ತ್ರೀಯರ ಮೇಲಾಗುತ್ತಿದ್ದ ಕ್ರೌರ್ಯ (ಸಹಗಮನ ಮತ್ತು ಅನುಗಮನ, ಕೋಟೆ ನಿಲ್ಲುವುದಕ್ಕಾಗಿ ಅಥವಾ ಕೆರೆಗೆ ನೀರು ತುಂಬುವುದಕ್ಕಾಗಿ ಬಲಿಯಾಗುತ್ತಿದ್ದ ಸ್ತ್ರೀಯರು, ಬಾಲ್ಯ ವಿವಾಹ, ವಿಧವೆಯರ ಮೇಲಾಗುತ್ತಿದ್ದ ದೌರ್ಜನ್ಯ, ಸ್ತ್ರೀ ಭ್ರೂಣ ಹತ್ಯೆ, ...), 'ಅಸ್ಪೃಶ್ಯ'ರ ಮೇಲಾಗುತ್ತಿದ್ದ ಕ್ರೌರ್ಯ (ಊರೊಳಗೆ ಪ್ರವೇಶವೇ ಇರದಿದ್ದುದು, ಯಾವ ಆಸ್ತಿಯ ಒಡೆತನವೂ ಇಲ್ಲದೆ, ಪೀಳಿಗೆಯಿಂದ ಪೀಳಿಗೆಗೆ ಇತರರ ಸೇವೆಯನ್ನು ಮಾಡುತ್ತಲೇ ಬದುಕಬೇಕಿದ್ದುದು, 'ಉತ್ತಮ ಕುಲ'ದವರ ಉಗುರು–ಕೂದಲುಗಳನ್ನು ತಿನ್ನಬೇಕಾಗಿದ್ದುದು, ...), ಹಿಂದು ಧರ್ಮೀಯರೊಳಗೇ ನೆಲೆಗೊಂಡಿದ್ದ ಪರಸ್ಪರ ದ್ವೇಷ (ರಾಜನ ಧರ್ಮವನ್ನನುಸರಿಸಿ ಜೈನ ಬಸದಿಗಳು ಶಿವ ದೇವಾಲಯಗಳಾಗುತ್ತಿದ್ದುದು, ಶಿವ ದೇವಾಲಯಗಳು ವಿಷ್ಣು ದೇವಾಲಯಗಳಾಗುತ್ತಿದ್ದುದು, ...), ಪ್ರತಿಯೊಂದು ಗ್ರಾಮದೇವತೆಯ ಜಾತ್ರೆಯಲ್ಲಿ ನಡೆಯುತ್ತಿದ್ದ / ನಡೆಯುತ್ತಿರುವ ಅಗಾಧ ಪ್ರಾಣಿಬಲಿ -- ಇವುಗಳ ಬಗ್ಗೆ ಒಂದು ಶಬ್ದವೂ ಕಾದಂಬರಿಯಲ್ಲಿ ಇಲ್ಲ. ಅಷ್ಟೇ ಅಲ್ಲದೆ, ಇವುಗಳ ಪ್ರಸ್ತಾಪವನ್ನು, ಪೂರ್ವಪಕ್ಷವಾಗಿಟ್ಟುಕೊಂಡು, ಇದೆಲ್ಲಾ' ಇತರರ ಬೌದ್ಧಿಕ, ಮಾನಸಿಕ ಸ್ವಾತಂತ್ರ್ಯವನ್ನು ತುಳಿಯುವ," 'ಗಡ್ಡಧಾರಿಗಳ', 'ಮಾರ್ಕ್ಸಿಸ್ಟ್ ಇತಿಹಾಸಕಾರರ ಗ್ಯಾಂಗು" (ಪು.೧೦೭) ಮಾಡುವ ಅಪಪ್ರಚಾರ ಎಂದು ಲೇಖಕರು ತೀರ್ಮಾನಿಸುತ್ತಾರೆ. 'ಕೊಚ್ಚೆ ಹರಿಯುವ ಮಾತಾಡುವ ಮೊದಲು ಇಂಥ ಹತ್ತಿಪ್ಪತ್ತು ಮೂವತ್ತು ಸಾವಿರ ಅವಶೇಷಗಳಿಗೆ ಉತ್ತರ ಹೇಳಬೇಕಾಗುತ್ತೆ' ಎಂದು ಒಂದು ಸಭೆಯಲ್ಲಿ ಲಕ್ಷ್ಮಿ ಸವಾಲು ಹಾಕುತ್ತಾಳೆ (ಪು. ೨೨೯–೨೩೦). (ಈ 'ಗ್ಯಾಂಗ್'ನಲ್ಲಿ ರೋಮಿಲಾ ಥಾಪರ್, ಬಿಪನ್ ಚಂದ್ರ, ಮುಂತಾದ ಅಂತಾರಾಷ್ಟ್ರೀಯ ಮನ್ನಣೆ ಪಡೆದ ಇತಿಹಾಸಕಾರರು ಇದ್ದಾರೆಂಬುದನ್ನು ಭೈರಪ್ಪನವರು ಮರೆಯುತ್ತಾರೆ. ಕಾದಂಬರಿಯ ಕೊನೆಯಲ್ಲಿ ಲಕ್ಷ್ಮಿ ತಯಾರಿಸುವ ಆಧಾರಗ್ರಂಥಗಳ ಪಟ್ಟಿಯಲ್ಲಿ ಥಾಪರ್ ಅಥವಾ ಬಿಪನ್ ಚಂದ್ರ ಅವರ ಒಂದು ಪುಸ್ತಕದ ಹೆಸರೂ ಇಲ್ಲ; ಆದರೆ ಅರುಣ್ ಶೌರಿಯವರು ಬರೆದಿರುವ ಒಂಬತ್ತು ಪುಸ್ತಕಗಳ ಪಟ್ಟಿ ಇದೆ.)

ಲೇಖಕರ ಚಾರಿತ್ರಿಕ ಪ್ರಜ್ಞೆಯ ಸ್ತರವನ್ನು ಈ ಉದಾಹರಣೆಗಳಿಂದ ಅಂದಾಜು ಮಾಡಬಹುದು. (೧) ಹಂಪಿಯಲ್ಲಿ ರಕ್ಕಸತಂಗಡಿಯ ಯುದ್ಧದ ನಂತರ, ವಿಜಯೀ ಸೇನೆ ತಿಂಗಳುಗಳ ಕಾಲ ನಡೆಸಿದ ಲೂಟಿಯಲ್ಲಿ ಎಲ್ಲಾ ಅರಮನೆಗಳು ಮತ್ತು ವಿಷ್ಣು ದೇವಾಲಯಗಳೂ ನಾಶವಾಗಿ, ವಿರೂಪಾಕ್ಷ ದೇವಾಲಯವೊಂದು ಮಾತ್ರ ಇಂದಿಗೂ ಹಾಗೇ ಇರುವುದಕ್ಕೆ ಲೇಖಕರು ಕೊಡುವ ಕಾರಣ " ... ಮೂಲ ದೈವವನ್ನು ಉಳಿಸಿಕೊಳ್ಳಲು ಅಲ್ಲಿಯ ಜನ ಒಗ್ಗಟ್ಟಾಗಿ ಮುಸ್ಲಿಮರ ಸೇನೆಯ ವಿರುದ್ಧ ನಿಂತದ್ದು" (ಪು.೭೦). ಲಕ್ಷಗಟ್ಟಲೆ ಸೇನೆ ಯುದ್ಧದಲ್ಲಿ ಸೋತು, ಸತ್ತು / ಚದುರಿ ಓಡಿ ಹೋದಾಗ, ಬಹಮನಿ ಸುಲ್ತಾನರ ಸೇನೆಯನ್ನು ತಡೆಯುವುದು "ಅಲ್ಲಿಯ ಜನರಿಗೆ" ಸಾಧ್ಯವಿತ್ತೆ? ಇದ್ದರೆ, ರಾಜಮನೆತನದವರೆಲ್ಲರೂ ತಮ್ಮ ಸಂಪತ್ತನ್ನು ರಕ್ಷಿಸಿಕೊಳ್ಳಲು ಆನೆಗೊಂದಿಗೆ ಓಡಿ ಹೋಗುವ ಅವಶ್ಯಕತೆ ಏನಿತ್ತು? ಇಂತಹ ಯಾವ ಪ್ರಶ್ನೆಗಳೂ ಲೇಖಕರನ್ನು ಸ್ವಲ್ಪವೂ ಕಾಡುವುದಿಲ್ಲ. (೨) ಲೇಖಕರ ದೃಷ್ಟಿಯಲ್ಲಿ ಹಿಂದೂ ರಾಜ–ಮಹಾರಾಜರು ಸೋತವರನ್ನೂ ಉದಾರವಾಗಿ ನಡೆಸಿಕೊಳ್ಳುತ್ತಿದ್ದರು; ಕಾರಣ ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಸೋತ ರಾಜರನ್ನು ಹೇಗೆ ಗೌರವದಿಂದ ನಡೆಸಿಕೊಳ್ಳಬೇಕೆಂದು ಹೇಳಿದ್ದಾನೆ. (ಅದೇ ಕೌಟಿಲ್ಯನು ಶತ್ರುಗಳನ್ನು ನಾಶಮಾಡಲು ವಿಷಕನ್ಯೆಯರನ್ನೂ ಹೇಗೆ ಬಳಸಿಕೊಳ್ಳಬೇಕೆಂದೂ ಹೇಳಿದ್ದಾನೆ.) ಇದೇ ನೆಲೆಯಲ್ಲಿ, ಕ್ರಿಶ್ಚಿಯನ್ ರಾಜರು ಕ್ರೂಸೇಡ್ಸ್ ಆಗಲಿ, ಎರಡು ವಿಶ್ವ ಸಮರಗಳನ್ನಾಗಲೀ ಮಾಡಲು ಸಾಧ್ಯವಿಲ್ಲ; ಏಕೆಂದರೆ 'ನಿನ್ನ ಶತ್ರುಗಳನ್ನೂ ಪ್ರೀತಿಸು' ಎಂದು ಏಸು ಹೇಳಿದ್ದಾನೆ.

ಯುದ್ಧದಲ್ಲಿ ಸೋತ 'ಶತ್ರು'ಗಳನ್ನು ಅಂದಿನ ಎಲ್ಲಾ ಪ್ರಭುಗಳೂ ಕ್ರೂರವಾಗಿಯೇ ನಡೆಸಿಕೊಳ್ಳುತ್ತಿದ್ದರು; 'ಹಿಂದು ಧರ್ಮ ವಾಢವಾವಾ' ಎಂಬ ರಾಮದಾಸರ ಉಪದೇಶದಿಂದ ಜನ್ಮ ತಾಳಿದ ಮರಾಠಾ ಸಾಮ್ರಾಜ್ಯದ ಬ್ರಾಹ್ಮಣ ಪೇಶ್ವೆಗಳೂ ವರ್ಷಕ್ಕೊಮ್ಮೆ ಹಿಂದು ರಾಜರು–ಮುಸ್ಲಿಂ ನವಾಬರು ಎಂಬ ಭೇದ ಭಾವನೆಯಿಲ್ಲದೆ ಎಲ್ಲರಿಂದಲೂ ಕಡ್ಡಾಯವಾಗಿ 'ಚೌಥಾಯಿ'ಯನ್ನು ಸುಲಿಯುತ್ತಿದ್ದರು; ಹಿಂದು ಧರ್ಮ ರಕ್ಷಕರಾಗಿದ್ದ ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯ, ಅಚ್ಯುತರಾಯ, ಅಳಿಯ ರಾಮರಾಯ, ಮುಂತಾದವರು ಬಹಮನಿ ರಾಜ್ಯಗಳಲ್ಲಿ ಒಂದರ ಪಕ್ಷ ಕಟ್ಟಿ ಮತ್ತೊಂದರೊಡನೆ (ಬಿಜಾಪುರದ ಸುಲ್ತಾನನೊಡನೆ ಅಹಮದ್‌ನಗರದ ಸುಲ್ತಾನನ ವಿರುದ್ಧ, ಇತ್ಯಾದಿ) ಯುದ್ಧ ಮಾಡುತ್ತಿದ್ದರು; ವಿಜಯನಗರದ ಸೇನೆಯಲ್ಲಿಯೂ ಮುಸ್ಲಿಂ ಸೇನಾಧಿಕಾರಿಗಳಿದ್ದರು; ... ಹೀಗೆಯೇ ಈ ಕಾದಂಬರಿ 'ಹೇಳದೆ ಬಿಟ್ಟಿರುವ' ಚರಿತ್ರೆಯ ಇನ್ನೊಂದು ಮುಖವನ್ನೂ ನಾವು ದಾಖಲಿಸುತ್ತಾ ಹೋಗಬಹುದು. (೩) ಕಾದಂಬರಿಯಲ್ಲಿ ಬರುವ ದೇವಾಲಯ ನಾಶ, ಮತಾಂತರ, ಇತ್ಯಾದಿ ಯಾವ ವಿಷಯಗಳೂ ಓದುಗರಿಗೆ ಗೊತ್ತಿಲ್ಲದೆ ಇರುವ ವಿಷಯಗಳಲ್ಲ; ಜೇಮ್ಸ್ ಮಿಲ್, ಮಾರ್ಕ್ಸ್ ವಿಲ್ಕ್ಸ್, ಮುಂತಾದ ಅನೇಕ ಬ್ರಿಟಿಷ ಚರಿತ್ರಕಾರರಿಂದ ಹಿಡಿದು ಜದುನಾಥ ಸರ್ಕಾರ್, ಓಕ್, ಮುಂತಾದ ಭಾರತೀಯ ಚರಿತ್ರಕಾರರು ಹಾಗೂ ತೋಗಾಡಿಯಾ ಮುಂತಾದ ರಾಜಕೀಯ ಧುರೀಣರು ಮತ್ತೆ ಮತ್ತೆ ಓದುಗರ/ಕೇಳುಗರ ಕಣ್ಣು–ಕಿವಿಗಳ ಮುಂದೆ ರಾಚುತ್ತಿರುವಂತಹವುಗಳೇ. ಓದುಗರಿಗೆ ಗೊತ್ತಿರುವುದನ್ನೇ ಮತ್ತೆ (ಪ್ರಚೋದಕ ಧಾಟಿಯಲ್ಲಿ) ಹೇಳುವುದರಲ್ಲಿ ಯಾವ ಪುರುಷಾರ್ಥವಿದೆ?

ಇನ್ನೂ ಮುಖ್ಯವಾಗಿ, ಇಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ 'ಚರಿತ್ರೆ' ಎಂಬುದು ಒಂದು ಸಿದ್ಧ ವಸ್ತುವಲ್ಲ. ಅದೊಂದು 'ರಚನೆ'; ಕಾಲಕಾಲಕ್ಕೆ ಆಯಾಯಾ ಸಂದರ್ಭಗಳ ವೈಚಾರಿಕ ಒತ್ತಡಗಳು ಕಟ್ಟಿಕೊಡುವ ರಚನೆ. ಪತ್ರಗಳು, ಶಾಸನಗಳು, ಬಖೈರುಗಳು, ನಾಣ್ಯಗಳು, ಇತ್ಯಾದಿಗಳೆಲ್ಲವೂ ಚರಿತ್ರೆಯ ಕಚ್ಚಾ ವಸ್ತುಗಳು; ಅವುಗಳಿಗೆ ಒಂದು ರೂಪವನ್ನು ಕೊಡುವುದು ಚರಿತ್ರಕಾರನ ವೈಚಾರಿಕತೆ. ಅದೇ ಕಚ್ಚಾ ಸಾಮಗ್ರಿಗಳನ್ನಾಧರಿಸಿ, ಚರಿತ್ರಕಾರರು ತಮ್ಮ ಭಿನ್ನ ವೈಚಾರಿಕತೆಗಳಿಗೆ ಅನುಸಾರವಾಗಿ ಭಿನ್ನ ಚರಿತ್ರೆಗಳನ್ನು ಕಟ್ಟಿಕೊಡುತ್ತಾರೆ. 'ಇದಮಿತ್ಥಂ' ಎಂಬಂತಹ ವಸ್ತುನಿಷ್ಠ 'ಸತ್ಯ ಚರಿತ್ರೆ' ಎಂಬುದು ಇಲ್ಲ.

ಕೊನೆಯದಾಗಿ, ಅತ್ಯಂತ ಖೇದದ ಸಂಗತಿಯೆಂದರೆ, **ಗೃಹಭಂಗ, ಪರ್ವ, ಸಾಕ್ಷಿ, ಅನ್ವೇಷಣೆ,** ಇತ್ಯಾದಿ ಕಾದಂಬರಿಗಳನ್ನು ಬರೆದ ಭೈರಪ್ಪನವರೇ ಆವರಣ ಕಾದಂಬರಿಯ ಲೇಖಕರು ಎಂಬುದು. ಪ್ರಾಯಃ ಅವಿದ್ಯೆಯ ಆವರಣದಿಂದ ಮುಕ್ತರಾಗುವುದು ಎಂತಹ ಪ್ರತಿಭಾಶಾಲಿಗೂ ಕಷ್ಟ ಸಾಧ್ಯ.

****

ಆವರಣ ಕಾದಂಬರಿಯು ಏಕೆ ಸೋಲುತ್ತದೆ ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಒಂದು ಸಾಹಿತ್ಯಕೃತಿಯಂತಲ್ಲದೆ ರಾಜಕೀಯ ಭಾಷಣಗಳ ಸಂಕಲನದಂತೆ ಏಕೆ ಕಾಣುತ್ತದೆ ಎಂಬುದು ಇದನ್ನು ಸಮಾನ ವಸ್ತುವನ್ನುಳ್ಳ ಮತ್ತೊಂದು ಕಾದಂಬರಿಯೊಡನೆ ಹೋಲಿಸಿದಾಗ ಗೊತ್ತಾಗುತ್ತದೆ. [illegible]

ಭಾಷೆಯ **ಪಿಂಜರ್** ಎಂಬ ಕಾದಂಬರಿಯೂ ದೇಶ ವಿಭಜನೆಯ ಕಾಲದ ಹಿನ್ನೆಲೆಯಲ್ಲಿ ಹಿಂದು-ಮುಸ್ಲಿಮ್ ಧರ್ಮಗಳಿಗೆ ಸೇರಿದವರ ಬದುಕನ್ನು ಚಿತ್ರಿಸುತ್ತದೆ. (ಇದನ್ನು ಕನ್ನಡಕ್ಕೆ ಡಾ. ಎಲ್.ಸಿ. ಸುಮಿತ್ರಾ ಅನುವಾದಿಸಿದ್ದಾರೆ.) ಈ ಕಾದಂಬರಿಯಲ್ಲಿ, ಎರಡು ಹಿಂದು-ಮುಸ್ಲಿಂ ಕುಟುಂಬಗಳ ನಡುವೆ ಅನೇಕ ವರ್ಷಗಳ ಕಾಲ ಇದ್ದ ಹಗೆತನದಿಂದಾಗಿ ಹಿಂದು ಕುಟುಂಬದ ಪೂರೋ ಎಂಬ ತರುಣಿಯನ್ನು ರಶೀದ್ ಎಂಬ ಮುಸ್ಲಿಂ ಕುಟುಂಬಕ್ಕೆ ಸೇರಿದ ತರುಣ (ಅವಳ ಮದುವೆ ಗೊತ್ತಾದ ನಂತರ) ಅಪಹರಿಸುತ್ತಾನೆ; ಮತ್ತು ಎರಡು ವಾರಗಳ ವರೆಗೆ ಒಂದು ಕಡೆ ಬಂಧನದಲ್ಲಿಡುತ್ತಾನೆ. ಅವಳನ್ನು ಪ್ರೀತಿಸುತ್ತಿದ್ದರೂ ಅವಳನ್ನು ದೈಹಿಕವಾಗಿ ರಶೀದ್ ಬಲಾತ್ಕರಿಸುವುದಿಲ್ಲ. ಎರಡು ವಾರಗಳನಂತರ, ಒಮ್ಮೆ ಪೂರೋ ಅಲ್ಲಿಂದ ತಪ್ಪಿಸಿಕೊಂಡು ತನ್ನ ತಾಯ್ತಂದೆಗಳ ಮನೆಗೆ ಹೋಗುತ್ತಾಳೆ; ಆದರೆ, ಅಷ್ಟು ಕಾಲ ಮುಸ್ಲಿಂನೊಡನೆ ಅವಳು ಇದ್ದ ಕಾರಣಕ್ಕಾಗಿ ಅವಳ ಮನೆಯವರು ಅವಳನ್ನು ಮತ್ತೆ ಒಪ್ಪಿಕೊಳ್ಳುವುದಿಲ್ಲ. "ನೀನು ಹುಟ್ಟುವಾಗಲೇ ಸತ್ತಿದ್ದರೆ ಚೆನ್ನಾಗಿತ್ತು" ಎಂದು ಹೇಳುತ್ತಾ ಅವಳ ತಾಯಿ ಮನೆಯಿಂದ ಅವಳನ್ನು ಹೊರಗೆ ಹಾಕುತ್ತಾಳೆ. ಬೇರೆ ದಾರಿ ಕಾಣದೆ ಪೂರೋ ಮತ್ತೆ ರಶೀದನ ಬಳಿಗೆ ಹೋಗಬೇಕಾಗುತ್ತದೆ. ಅನಂತರ, ಒಂದು ದಿನ ಮೌಲ್ವಿ ಅಲ್ಲಿಗೆ ಬಂದು, ಅವಳ ಹೆಸರನ್ನು ಹಮೀದಾ ಎಂದು ಬದಲಾಯಿಸಿ, ರಶೀದನೊಡನೆ ಮದುವೆ ಮಾಡುತ್ತಾರೆ.

ಕಾದಂಬರಿ ಮುಂದುವರೆದಂತೆ, ೧೯೪೭ರ ಸಂದರ್ಭದಲ್ಲಾದ ರಕ್ತಪಾತ, ಸ್ತ್ರೀಯರ ಅಪಹರಣ, ಲಕ್ಷಾಂತರ ಜನರ ವಲಸೆ, ಇತ್ಯಾದಿಗಳನ್ನು ಕೃತಿ ಚಿತ್ರಿಸುತ್ತದೆ. ಆ ಸಂದರ್ಭದಲ್ಲಿ ಅಪಹೃತರಾಗಿ ಅಲ್ಲಿಗೆ ಬಂದಿದ್ದ ಎಷ್ಟೋ ಜನ ಹಿಂದು ಸ್ತ್ರೀಯರು ಮರಳಿ ಭಾರತಕ್ಕೆ ಹೋಗುವಂತೆ ಅವರಿಗೆ ಪೂರೋ/ಹಮೀದಾ ಸಹಾಯ ಮಾಡುತ್ತಾಳೆ -- ಪ್ರತಿಕ್ಷಣವೂ ತನಗೊದಗಬಹುದಾದ ಹಿಂಸೆ-ಸಾವುಗಳನ್ನು ಲೆಕ್ಕಿಸದೆ. ಆ ಸಂದರ್ಭದಲ್ಲಿ, ಅವಳಿಗೂ ಭಾರತಕ್ಕೆ ಮರಳುವ ಅವಕಾಶವಿರುತ್ತದೆ: "ಒಂದು ಕ್ಷಣ ಅವಳು ಪ್ರಲೋಭನೆಗೂ ಒಳಗಾದಳು. ಅವಳು 'ನಾನು ಹಿಂದು' ಎಂದು ಹೇಳಿದ್ದರೆ ಸಾಕಿತ್ತು." ಆದರೆ, ಕೊನೆಗೆ ಪೂರೋ ರಶೀದನೊಡನೆಯೇ ಇರಲು ನಿರ್ಧರಿಸುತ್ತಾಳೆ: "ನನ್ನ ಮನೆ ಈಗ ಪಾಕೀಸ್ತಾನದಲ್ಲಿ."

ಉದ್ದಕ್ಕೂ ಕೃತಿ, ಧರ್ಮಾಂಧರಿಂದ ಎರಡೂ ಧರ್ಮಗಳ ಅನುಯಾಯಿಗಳು ನರಳುವುದನ್ನು, ಎರಡೂ ಧರ್ಮಗಳಲ್ಲಿರುವ ಸಾತ್ವಿಕ-ಕ್ರೂರ ವ್ಯಕ್ತಿಗಳನ್ನೂ, ಇಡೀ ಧಾರ್ಮಿಕ ವ್ಯವಸ್ಥೆಗಳಲ್ಲಡಗಿರುವ ಕ್ರೌರ್ಯವನ್ನು ನೇರವಾಗಿ ಚಿತ್ರಿಸುತ್ತದೆ. ಕೃತಿಯಲ್ಲಿ ಗೆಲ್ಲುವುದು ಹಿಂದು ಧರ್ಮವೂ ಅಲ್ಲ, ಇಸ್ಲಾಂ ಧರ್ಮವೂ ಅಲ್ಲ; ಕೊನೆಗೂ ಗೆಲ್ಲುವುದು -- ಗೆಲ್ಲ ಬೇಕಾದುದು ಮಾನವ ಧರ್ಮ, ಮಾನವೀಯತೆ.

ಕೂಡಲೇ ಇಲ್ಲೊಂದು ಆಕ್ಷೇಪವೇಳಬಹುದು: **ಪಿಂಜರ್** ಸಮಕಾಲೀನ ಕಾದಂಬರಿ ಮತ್ತು **ಆವರಣ** ಐತಿಹಾಸಿಕ ಕಾದಂಬರಿ; ಎರಡೂ ಕೃತಿಗಳನ್ನು ಹೋಲಿಸುವುದು ಸೂಕ್ತವೆ? ನಿಜ; **ಆವರಣ** (ಲಕ್ಷ್ಮೀ / ರಜ಼ಿಯಾ ಬರೆದ) ಒಳ ಕಥೆಯಲ್ಲಿ ಮಧ್ಯಕಾಲೀನ ಭಾರತವನ್ನು ಚಿತ್ರಿಸುತ್ತದೆ; ಆದರೆ ಅದರ ಹೊರ ಕಥೆ ಸಮಕಾಲೀನ ಭಾರತೀಯ ಸಮಾಜವನ್ನೂ ಚಿತ್ರಿಸುತ್ತದೆ. ಆದರೆ, ನಾನು ಈ ಎರಡೂ ಕಾದಂಬರಿಗಳನ್ನು ಒಟ್ಟಿಗೆ ತಂದಿರುವ ಉದ್ದೇಶ ಎರಡೂ ಕಾದಂಬರಿಗಳಲ್ಲಿ ಅಂತರ್ಗತವಾಗಿರುವ ವಿಶ್ವದೃಷ್ಟಿಗಳ ಭಿನ್ನತೆಯನ್ನು ದಾಖಲಿಸಲು. **ಪಿಂಜರ್** ಜಾತಿ-ಜನಾಂಗ-ಧರ್ಮಗಳ ಎಲ್ಲೆಗಳನ್ನು ಮೀರುವ ಮಾನವೀಯತೆಯನ್ನು ಎತ್ತಿ ಹಿಡಿದರೆ, **ಆವರಣ** ಒಂದು ಧರ್ಮದವರನ್ನು ದಸ್ಯುಗಳಂತೆ, ಮತ್ತೊಂದು ಧರ್ಮದವರನ್ನು ದೇವತೆಗಳಂತೆ ಕಾಣುತ್ತದೆ; ರಕ್ತಮಾಂಸಗಳಿಂದ ಕೂಡಿದ ಮನುಷ್ಯರಾರೂ ಈ ಕಾದಂಬರಿಯಲ್ಲಿ ಇಲ್ಲವೇ ಇಲ್ಲ.

ಪಿಂಜರ್ ಕಾದಂಬರಿಯನ್ನು ಬರೆದಿರುವವರು ಅಮೃತಾ ಪ್ರೀತಂ; ಸ್ವತಃ ದೇಶವಿಭಜನೆಯ ಕಾಲದಲ್ಲಿ ಅತೀವ ಕಷ್ಟ-ನಷ್ಟಗಳನ್ನನುಭವಿಸಿ ಲಾಹೋರಿನಿಂದ ಪಂಜಾಬ್‌ಗೆ ಬಂದವರು; ಆ ಕಾಲಘಟ್ಟದಲ್ಲಾದ ಅಪಾರ ಸಂಖ್ಯೆಯ ಸಾವು-ನೋವುಗಳನ್ನು ಕಂಡವರು; ಆದರೂ ಲೇಖಿಕಿಯಾಗಿ ತಮ್ಮ ಕರ್ತವ್ಯ "ಮಾನವನ ಮನಸ್ಸಿನಲ್ಲಿ ಮಲಗಿರುವ ದೇವತೆಗಳನ್ನು ಎಚ್ಚರಿಸುವುದು" ಎಂದು ನಂಬಿದವರು. **ಆವರಣ** ಕಾದಂಬರಿಯನ್ನು ಬರೆದಿರುವವರು ಭೈರಪ್ಪನವರು; ಲೇಖಕರಾಗಿ ಇವರ ಕರ್ತವ್ಯವೆಂದು ಇವರು ನಂಬಿರುವುದು...? □

೮೯, ೩ನೇ ಮುಖ್ಯರಸ್ತೆ, ಡಾಲರ್ ಕಾಲೊನಿ, ಜೆ.ಪಿ. ನಗರ, ೪ನೇ ಹಂತ, ಬೆಂಗಳೂರು ೫೬೦ ೦೭೮

ಇತ್ತೀಚಿನ ಪುಸ್ತಕಗಳು

ಸಮಗ್ರ ಸಾಹಿತ್ಯ

೧. **ರಾಷ್ಟ್ರಧರ್ಮ ದ್ರಷ್ಟಾರ : ಹರ್ಡೇಕರ ಮಂಜಪ್ಪ,** ಸಂಪುಟ: ೨;, ಸಂ.: ಎಂ.ಎಂ. ಕಲಬುರ್ಗಿ, ಮಲ್ಲಿಕಾರ್ಜುನ ಸಂ. ಮೇತ್ರಿ; ಪ್ರ: ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ಎಡೆಯೂರ ತೋಂಟದಾರ್ಯ ಸಂಸ್ಥಾನಮಠ, ಗದಗ; ೨೦೦೬; ರೂ. ೫೦೦/–, ಪು: ೧೦೬೮

ಅಭಿನಂದನ ಗ್ರಂಥ

೨. **ಮಹಾಮಾರ್ಗ** ಡಾ. ಎಂ.ಎಂ. ಕಲಬುರ್ಗಿ ಅಭಿನಂದನ ಗ್ರಂಥ, ಸಂ.: ಸದಾನಂದ ಕನವಳ್ಳಿ, ವೀರಣ್ಣ ರಾಜೂರ; ಪ್ರ: ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯಮಠ, ಗದಗ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ; ೧೯೯೮; ರೂ. ೧೦೦೦/–, ಪು: ೯೩೭

೩. **ಅಂತರ್ಜಲ** ಶ್ರೀ ಚಿ. ಶ್ರೀನಿವಾಸರಾಜು ಅಭಿನಂದನ ಗ್ರಂಥ; ಪ್ರಧಾನ ಸಂ.: ಜಿ.ಎಸ್. ಶಿವರುದ್ರಪ್ಪ; ಪ್ರ: ಶ್ರೀನಿವಾಸರಾಜು ಅಭಿನಂದನ ಸಮಿತಿ, ಬೆಂಗಳೂರು; ೨೦೦೭; ರೂ. ೩೫೦/–; ಪು: ೫೩೬

ವಿಮರ್ಶೆ

೪. **ಕನ್ನಡ ಸಾಹಿತ್ಯ : ಕುವೆಂಪು ಸಂಸ್ಕೃತಿ ಚಿಂತನೆ;** ಪ್ರ.ಸಂ.: ಪ್ರೊ. ಕೆ. ಸುಮಿತ್ರಾಬಾಯಿ; ಪ್ರ: ಸ್ವಾಯತ್ತ ಯುವರಾಜ ಕಾಲೇಜು, ಮೈಸೂರು; ೨೦೦೬; ರೂ. ೨೦೦/–; ಪು: ೨೨೨

ನೆನಪುಗಳು

೫. **ಬೆಂಗಳೂರಿನಲ್ಲಿ ಮಹಾತ್ಮಗಾಂಧಿ;** ಲೇ: ವೇಮಗಲ್ ಸೋಮಶೇಖರ್; ಪ್ರ: ಭಾರತೀಯ ವಿದ್ಯಾಭವನದ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಗಾಂಧೀ ಕೇಂದ್ರ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು ೧; ೨೦೦೪; ರೂ. ೯೦/–, ಪು: ೨೦೮

೬. **ಅಧ್ಯಾಪಿಕೆಯ ಅಧ್ವಾನಗಳು;** ಲೇ.: ಬಿ.ಎಂ. ರೋಹಿಣಿ; ಪ್ರ: ಶಿಕ್ಷಕ ಸಂಗತಿ ಬಳಗ, ಸುಂದರಿಬಾಗ್ ಉಳ್ಳಾಲ, ಮಂಗಳೂರು ೫೭೫ ೦೨೦; ೨೦೦೭, ರೂ. ೩೦/–; ಪು: ೭೦

೭. **ನಿಶಬುದದೆಡೆಗೆ;** ಲೇ: ಕಾ ತ ಚಿಕ್ಕಣ್ಣ; ಪ್ರ: ಸುಮುಖ ಪ್ರಕಾಶನ, ೧೭೪೩/೨೮, ೧ನೇ ಮಹಡಿ, ೧ನೇ ಮುಖ್ಯರಸ್ತೆ, ವಿದ್ಯಾರಣ್ಯನಗರ, ಮಾಗಡಿ ರಸ್ತೆ, ಟೋಲ್‌ಗೇಟ್, ಬೆಂಗಳೂರು ೨೩; ೨೦೦೭; ರೂ. ೧೩೦/; ಪು: ೨೬೮

೮. **ಸಂಗೀತ ಕಲಾವಿದನೋರ್ವನ ಸವಿನೆನಪುಗಳು;** ಲೇ: ಪ್ರೊ। ವಿ. ರಾಮರತ್ನಂ; ಪ್ರ: ಶ್ರೀಮತಿ ಉಮಾಪ್ರಸನ್ನ; ಸರಸ್ವತೀಪುರಂ, ಮೈಸೂರು ೫೭೦ ೦೦೯; ೨೦೦೫; ಪು: ೨೨೮

೯. **ಮೈಸೂರು ಮಹಾರಾಜ ಕಾಲೇಜು;** ಪ್ರ.ಸಂ.: ನ. ರವಿಕುಮಾರ; ಪ್ರ: ಅಭಿನವ ಚಾತುರ್ಮಾಸಿಕ, ಸಂ. ೧೭/೧೮–೨, ಮೊದಲನೆಯ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು ೪೦; ೨೦೦೭; ರೂ. ೨೦೦/–, ಪು: ಸುಮಾರು ೩೮೯

೧೦. **ದೌಲಧಾರ;** ಲೇ: ಡಾ. ವೆಂಕಟಾಚಲ ಹೆಗಡೆ; ಪ್ರ: ಎಚ್.ಎಸ್.ವಿ. ೩೦, ಸಂಕಲ್ಪ, ಪುಷ್ಪಗಿರಿನಗರ, ಬನಶಂಕರಿ ೩ನೇ ಹಂತ, ಬೆಂಗಳೂರು ೮೫; ೨೦೦೩; ರೂ. ೩೦/–; ಪು: ೧೦೪

೧೧. **ಬೇಗೂರಿನಿಂದ;** ಲೇ: ಯಜಮಾನ್ ಫ್ರಾನ್ಸಿಸ್; ಪ್ರ: ಮೇಲಿನಂತೆ; ೨೦೦೬; ರೂ. ೫೦/–; ಪು: ೮೮

ಅನುವಾದ

೧೨. ಬೆಟ್; ಸುಬ್ಬುಭಟ್; ಪ್ರ: ಮೇಲಿನಂತೆ; ೨೦೦೫, ರೂ. ೨೫/–; ಪು: ೭೦

೧೩. ಪಿಂಜರ್; ಎಲ್.ಸಿ. ಸುಮಿತ್ರಾ, ಅಂಕಿತಪುಸ್ತಕ, ೫೩, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು ೪; ೨೦೦೬; ರೂ. ೫೦/–; ಪು: ೧೦೪

೧೪. ಸಂಸ್ಕೃತಿ; ಶ್ರೀ ನೀಲತ್ತಹಳ್ಳಿ ಕಸ್ತೂರಿ, ಪ್ರ: ಕ್ರ.ಸಂ. ೫ರಂತೆ; ೧೯೯೯; ರೂ. ೫೦/–; ಪು: ೧೩೩

೧೫. ಸುಭಾಷಿತ ಸಂಪುಟ; ಪ್ರ: ಮೇಲಿನಂತೆ; ೨೦೦೩; ರೂ. ೪೦/–; ಪು: ೧೦೪

೧೬. ಸರಳ ಭಗವದ್ಗೀತೆ; ಪ್ರೊ॥ ಎ.ಎಸ್. ನಂಜುಂಡಸ್ವಾಮಿ; ಪ್ರ: ಮೇಲಿನಂತೆ; ೨೦೦೬; ರೂ. ೫೦/–; ಪು: ೧೫೪

ಕಾವ್ಯ

೧೭. ನಾನು ಮತ್ತು ಕೋಗಿಲೆ; ಲೇ: ಎಂ. ರವಿಕುಮಾರ್, ಪ್ರ: ಕ್ರ.ಸಂ. ೧೨ರಂತೆ; ೨೦೦೨; ರೂ. ೨೫/–; ಪು: ೪೮

ಜೀವನ ಚಿತ್ರಣ

೧೮. ತೆರೆ ಸರಿದಾಗ ಮಾಲತಿಶ್ರೀ ಮೈಸೂರು ಅವರ ಆತ್ಮಕತೆ; ಲೇ: ಗುಡಿಹಳ್ಳಿ ನಾಗರಾಜ್; ಪ್ರ: ಕೆ.ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ; ೨೦೦೬; ರೂ. ೮೫/–; ಪು: ೧೨೩

೧೯. ಗಂಡೂರಿನ ಗರಿಮೆ ಜಿ. ಹನುಮಂತರಾವ್; ಲೇ: ದೇಜಗೌ, ಪ್ರ: ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು; ೨೦೦೬; ರೂ. ೭೫/–; ಪು: ೧೫೪

೨೦. ಮಹಾತ್ಮ; ಲೇ: ಪ್ರೊ॥ ಎನ್. ಕೃಷ್ಣಸ್ವಾಮಿ; ಪ್ರ: ಕ್ರ.ಸಂ. ೧೬ರಂತೆ; ೨೦೦೦; ರೂ. ೫೦/–; ಪು: ೧೪೪

೨೧. ವಿನೋಬಾ; ಲೇ: ಪ್ರೊ॥ ಎನ್. ಕೃಷ್ಣಸ್ವಾಮಿ ಮತ್ತು ಸಾವಿತ್ರಿ ಶ್ರೀಕಂಠಯ್ಯ; ಪ್ರ: ಮೇಲಿನಂತೆ; ೨೦೦೩; ರೂ. ೫೦/–; ಪು: ೧೫೬

ವಿವೇಚನೆ

೨೨. ಸಂಸ್ಕೃತದ ಮೂರು ಮೇರು ಕೃತಿಗಳು; ಲೇ: ಪ್ರೊ॥ ಎ.ಎಸ್. ನಂಜುಂಡಸ್ವಾಮಿ; ಪ್ರ: ಮೇಲಿನಂತೆ; ೨೦೦೩; ರೂ. ೬೦/–; ಪು: ೨೧೫

೨೩. ಶಿಲ್ಪ ಸೌಂದರ್ಯ; ಲೇ: ಟಿ. ಪಂಕಜಾಕ್ಷ; ಪ್ರ: ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಮೇಲ್ಮನೆ; ಕನ್ನಡ ಭವನ; ಜೆ.ಸಿ. ರಸ್ತೆ, ಬೆಂಗಳೂರು ೨; ೨೦೦೬; ರೂ. ೨೦೦/–; ಪು: ೩೩೧

ವಿಜ್ಞಾನ

೨೪. ಅಗ್ನಿದಿವ್ಯ; ಲೇ: ಡಾ॥ ಎಚ್.ಎಸ್. ವೆಂಕಟೇಶಮೂರ್ತಿ; ಪ್ರ: ಕ್ರ.ಸಂ. ೧೭ರಂತೆ; ೨೦೦೪; ರೂ. ೨೫/–; ಪು: ೬೦

೨೫. ಆರ್ಯಭಟ; ಲೇ: ಡಾ॥ ಎಸ್. ಬಾಲಚಂದ್ರರಾವ್, ಪ್ರ: ಕ್ರ.ಸಂ. ೨೨ರಂತೆ; ಪರಿಷ್ಕೃತ ೨ನೇ ಆವೃತ್ತಿ ೨೦೦೪; ರೂ. ೪೮/–; ಪು: ೯೨

೨೬. ಗಣಿತಶಾಸ್ತ್ರದ ಪ್ರವರ್ತಕರು ಮತ್ತು ಸ್ವಾರಸ್ಯಗಳು; ಲೇ. ಮತ್ತು ಪ್ರ: ಮೇಲಿನಂತೆ; ೨೦೦೪; ರೂ. ೬೦/–; ಪು: ೨೦೦

೨೭. ಭಾರತೀಯ ಖಗೋಳಶಾಸ್ತ್ರ; ಲೇ. ಮತ್ತು ಪ್ರ: ಮೇಲಿನಂತೆ; ೨೦೦೬; ರೂ. ೫೦/–; ಪು: ೯೫

..... *ಮುಂದಿನ ಸಂಚಿಕೆಯಲ್ಲಿ*

ಈ ತಿಂಗಳು ನೆರವಾದ ಹೃದಯವಂತರು, ಶ್ರೀಮಂತರು

ಮೊದಲಿಗೆ ಹಾಗೂ ಆಶ್ಚರ್ಯಕರವಾಗಿ ಕೂಡ ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಎಲ್ಲ ಅಧಿಕಾರಿಗಳನ್ನೂ ನೆನೆಯಬೇಕು; 'ಸಣ್ಣ' ಪತ್ರಿಕೆ ಎಂದು ತಾತ್ಸಾರ ತೋರದಯೇ ಇನ್ನಷ್ಟು ಮತ್ತಷ್ಟು ಗಂಭೀರವಾಗಿ, ಗಟ್ಟಿಯಾಗಿ ಕೆಲಸ ಮಾಡಲು ಪ್ರೋತ್ಸಾಹ, ಅಭಿಮಾನ ತುಂಬಿದ್ದಾರೆ.

ಅಂತೆಯೇ ಬನಶಂಕರಿಯ ಶ್ರೀಕೃಷ್ಣ ಧಾರ್ಮಿಕ ಸಭಾಂಗಣದ ವೆಂಕಟರಾಜ್‌ಭಟ್ ಅವರೂ ಕೈ ತುಂಬ ನೆರವಾಗಿದ್ದೆ ಅಲ್ಲದೆ, ಪತ್ರಿಕೆ ಮುಂದೆ ಏನೆಲ್ಲ ಒಳಗೊಳ್ಳಬಹುದು ಎಂದು ಚರ್ಚಿಸಿ, ನಮ್ಮೊಂದಿಗೆ ಸದಾ ಇರುವ ಭರವಸೆಯನ್ನು ಕೊಟ್ಟಿದ್ದಾರೆ. ಇದಕ್ಕೆ ಉಮೇಶ್, ರಾಜಶೇಖರ್ ಅವರು ಎಂದಿನಂತೆ ಒತ್ತಾಸೆಯಾಗಿದ್ದಾರೆ.

ಹಾಗೆಯೇ Datasol (B) Pvt. Ltd.ನ ಬಿ.ಎಸ್. ಸುರೇಶ್ ಕುಮಾರ್ ಹಾಗೂ ಸತೀಶ್‌ರೆಡ್ಡಿ ಅವರೂ ಪತ್ರಿಕೆಯ ಧ್ಯೇಯ ಉದ್ದೇಶಗಳನ್ನು ಕಣ್ಣಲ್ಲಿಕಣ್ಣಿಟ್ಟು ಗಮನಿಸಿ, ತಕ್ಷಣವೇ ದೊಡ್ಡ ನೆರವನ್ನೇ ನೀಡಿದ್ದಾರೆ. ಮುಂದೆಯೂ ಪತ್ರಿಕೆ ತನ್ನ ಕಾಲಮೇಲೆ ತಾನು ನಿಲ್ಲುವ ದಿಕ್ಕಿನಲ್ಲಿ ಪ್ರಯತ್ನಿಸುವ ಆಶ್ವಾಸನೆ ಕೂಡ ಕೊಟ್ಟಿದ್ದಾರೆ. ಇದಕ್ಕೆ ನೈಷಧಂ ಅಶ್ವತ್ಥನಾರಾಯಣ ಶಾಸ್ತ್ರಿ ಅವರ ಸಹಕಾರ ಒದಗಿ ಬಂದಿತು.

ಇನ್ನು ಪತ್ರಿಕೆ ತಮ್ಮದೇ ಎನ್ನುವಂತೆ ಟಿ.ಎಸ್. ರಾಮಚಂದ್ರಮೂರ್ತಿ ಅವರು ಒಂದು ಕಡೆ ಚಂದಾದಾರರನ್ನು, ಇನ್ನೊಂದು ಕಡೆ ನೆರವು ನೀಡುವವರನ್ನು ಹುಡುಕಿಕೊಡುವ ಉಪಕಾರ ಕೈಗೊಂಡಿದ್ದಾರೆ. ಹೀಗೆ ಸಿಕ್ಕವರೇ ಜನಪ್ರಿಯ ಚಲನಚಿತ್ರ ನಿರ್ಮಾಪಕ, ನಿರ್ದೇಶಕ ಪಿ.ಆರ್. ರಾಮದಾಸನಾಯ್ಡು. ಅವರ ನೆರವೂ ದೊಡ್ಡದು.

ಮುಖ್ಯ ಗ್ರಂಥಪಾಲಕರಾಗಿದ್ದ, ಸಹೃದಯಿ ರು.ಫ. ದೇಸಾಯಿ ಅವರು, ಹೆಸರಾಂತ ಕವಿ, ಸ್ನೇಹಮಯಿ ಎಚ್.ಎಸ್. ವೆಂಕಟೇಶಮೂರ್ತಿಯವರು, ಹಿರಿಯ ರಂಗಕರ್ಮಿ ಹೆಚ್.ವಿ. ವೆಂಕಟಸುಬ್ಬಯ್ಯ (ಸುಬ್ಬಣ್ಣ) ಅವರು, ಶಿಕ್ಷಣತಜ್ಞ, ಬರಹಗಾರ ಎಸ್.ಜಿ. ಜೈನಾಪುರ್ ಅವರು – ತಾವಾಗಿಯೇ ಸಾವಿರಾರು ರೂಪಾಯಿಗಳ ನೆರವು ನೀಡಿ, ಉಪಕರಿಸಿದ್ದಾರೆ.

ಸುಪ್ರಸಿದ್ಧ ಪ್ರಕಾಶಕ, ಪುಸ್ತಕದಂಗಡಿ ಮಾಲೀಕ ಪ್ರಕಾಶ ಕಂಬತ್ತಳ್ಳಿ ಅವರು ತಾವು ಸದಸ್ಯರಾದದ್ದೇ ಅಲ್ಲದೆ, ತಮ್ಮ ಅಂಗಡಿಯಲ್ಲಿ ಬಿಡಿಸಂಚಿಕೆಗಳನ್ನು ಮಾರುವ ಮನಸ್ಸು ಮಾಡಿದ್ದಾರೆ.

ವಿಚಾರವಾದಿ, ಬರಹಗಾರ ಬಿ.ಎಸ್. ಚಂದ್ರಶೇಖರ್ ಅವರು ಪತ್ರಿಕೆ ಉಳಿಯುವ, ಬೆಳೆಯುವ ದಿಕ್ಕಿನಲ್ಲಿ ಎಲ್ಲ ಸಹಕಾರಕ್ಕೂ ಮುಂದಾಗಿದ್ದಾರೆ.

ಇನ್ನು ನೀವು, ನಿಮ್ಮ ಗೆಳೆಯರು ನೆರವಿಗೆ ಬಂದರೆ
ಪತ್ರಿಕೆ ತನ್ನಷ್ಟಕ್ಕೆ ತಾನು ನಡೆದೀತು ಎಂದು ನಂಬುವ

ಸಂಪಾದಕ

ಸುಂದರ ಕರ್ನಾಟಕಕ್ಕೆ ಸುವರ್ಣ ಮಹೋತ್ಸವ




ಸುಮಾರು 2000 ವರ್ಷಗಳ ಇತಿಹಾಸ ಕನ್ನಡಿಗರದು. ನಾನಾ ಕಾರಣಗಳಿಂದಾಗಿ ಬೇರೆ ಬೇರೆ ಭಾಗಗಳಲ್ಲಿ ಚದುರಿ ಹೋಗಿದ್ದ ಕನ್ನಡಿಗರು ನವೆಂಬರ್ 1, 1956ರಂದು ಒಂದಾದರು. ಇದು ಏಕೀಕೃತ ಕರ್ನಾಟಕ ಉದಯವಾದ ಸುದಿನ. ಈ ಸಾಧನೆಗಾಗಿ ಆಲೂರು ವೆಂಕಟರಾಯರಾದಿಯಾಗಿ ಅಸಂಖ್ಯಾತ ಸಾಹಿತಿಗಳು, ಕಲಾವಿದರು ಮತ್ತು ವಿವಿಧ ರಂಗಗಳ ಗಣ್ಯರ ಹಾಗೂ ಜನಸಮುದಾಯದ ಪರಿಶ್ರಮ ಮತ್ತು ತ್ಯಾಗವಿದೆ. ಇವರೆಲ್ಲರಿಗೂ ಇಂದು ನಮ್ಮ ನಮನ.

ಕರ್ನಾಟಕ - 50 ವರ್ಷಗಳ ಒಂದು ಅವಲೋಕನ

- ಸರ್ಕಾರದ ಆಡಳಿತ ನಿರ್ವಹಣೆಗಾಗಿ ವಿನೂತನ ಶೈಲಿಯ ವಿಧಾನಸೌಧದ ನಿರ್ಮಾಣ
- "ಉಳುವವನಿಗೆ ಭೂಮಿ" ಕಾಯಿದೆಯನ್ನು ಜಾರಿಗೊಳಿಸಿದ ಭಾರತದ ಮೊದಲ ರಾಜ್ಯ
- ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರತ್ಯೇಕ ಆಯೋಗ ರಚಿಸಿ, ರಾಷ್ಟ್ರಕ್ಕೆ ಮಾದರಿಯಾದ ರಾಜ್ಯ
- ಆಡಳಿತ ವಿಕೇಂದ್ರೀಕರಣ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ಮೊಟ್ಟ ಮೊದಲ ಮಾದರಿ ರಾಜ್ಯ
- ಸಾಕ್ಷರತೆಯಲ್ಲಿ ಗಣನೀಯ ಸಾಧನೆ - ಕೇವಲ ಶೇ.24ರಷ್ಟಿದ್ದ ಸಾಕ್ಷರತೆ ಈಗ ಶೇ.71ಕ್ಕೆ ಏರಿಕೆ
- ಮಹಿಳೆಯರಿಗೆ ಉದ್ಯೋಗ ಮತ್ತು ಆಡಳಿತದಲ್ಲಿ ಮೀಸಲಾತಿ
- ನೀರಾವರಿ ಸಾಮರ್ಥ್ಯ - 23.84 ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ
- ವಿಶ್ವ ಸಂಸ್ಥೆಯ ಪ್ರಶಂಸೆ ಮತ್ತು ಪ್ರಶಸ್ತಿಗೆ ಪಾತ್ರವಾದ 'ಭೂಮಿ' ಯೋಜನೆಯಡಿ ರೈತರಿಗೆ ಕಂಪ್ಯೂಟರ್ ಮೂಲಕ ಪಹಣಿ ವಿತರಿಸಿದ ಮೊದಲ ರಾಜ್ಯ
- ಮಾಹಿತಿ ತಂತ್ರಜ್ಞಾನದಲ್ಲಿ ಇಡೀ ರಾಷ್ಟ್ರದಲ್ಲಿ ಪ್ರಥಮ ಸ್ಥಾನ ಪಡೆದ ರಾಜ್ಯ



ಹೆಚ್.ಡಿ. ಕುಮಾರಸ್ವಾಮಿ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಬಿ.ಎಸ್. ಯಡಿಯೂರಪ್ಪ
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕದ ಸುವರ್ಣ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ನಮ್ಮ ನಾಡಿನ ಅಪೂರ್ವ ಸಂಸ್ಕೃತಿ ಹಾಗೂ ಭಾಷೆ ಪರಂಪರೆಯನ್ನು ಎತ್ತಿ ಹಿಡಿಯೋಣ. ಅದರ ಉಜ್ವಲ ಬೆಳಕಿನಲ್ಲಿ ರಾಜ್ಯದ ಭವ್ಯ ಭವಿಷ್ಯವನ್ನು ರೂಪಿಸಲು ಕಂಕಣಬದ್ಧರಾಗೋಣ.

ಇಂದು ಸಂಜೆ 5.00 ಗಂಟೆಗೆ ಬೆಂಗಳೂರು ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸುವರ್ಣ ಕರ್ನಾಟಕ ಉದ್ಘಾಟನಾ ಸಮಾರಂಭ

ಕರ್ನಾಟಕದ ಜನತೆಗೆ ಸುವರ್ಣ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ವಾರ್ತೆ

